ಸಂಪುಟ: 13 Volume | ಸಂಚಿಕೆ: 325 Issue | ಪುಟಗಳು 08 Pages | ಭಾನುವಾರ 15 ಫೆಬ್ರವರಿ 2026 | ₹6 | PRGINO.120927(RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಬಹಳಷ್ಟು ಜನರಿಗೆ ಸ್ವಾತಂತ್ರ್ಯ ಬೇಕಿಲ್ಲ. ಏಕೆಂದರೆ ಸ್ವಾತಂತ್ರ್ಯದ ಜತೆಗೆ ಜವಾಬ್ದಾರಿಯು ಇರುತ್ತದೆ. ಬಹಳಷ್ಟು ಜನ ಜವಾಬ್ದಾರಿಯ ಬಗ್ಗೆ ಭಯ ಹೊಂದಿದ್ದಾರೆ.

–ಸಿಗ್ಮಂಡ್ ಫ್ರಾಯ್ಡ್

# ಬಿಜೆಪಿ ವಿರುದ್ಧ ಸಿಎಂ ಗರಂ

## ಕಾಂಗ್ರೆಸ್ ಸರ್ಕಾರದ 1,000 ದಿನದ ಸಂಭ್ರಮ | ಪ್ರತಿ ಪಕ್ಷ ನಾಯಕಗೆ ಮುಖ್ಯಮಂತ್ರಿ ತಿರುಗೇಟು

• ಮಲ್ಲಮ್ಮ ನುಡಿ ವಾರ್ತೆ ಹಾವೇರಿ

ನಾಲ್ಕು ವರ್ಷಗಳಲ್ಲಿ ಬಿಜೆಪಿಯವರು ಏನನ್ನೂ ಮಾಡದ ಕಾರಣ ಅವರಿಗೆ ಹೊಟ್ಟೆ ಉರಿ. ಅದಕ್ಕಾಗಿಯೇ ಅವರು ಟೀಕಿಸುತ್ತಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರದ 1,000 ದಿನಗಳನ್ನು "ಕತ್ತಲೆಯ ದಿನಗಳು" ಎಂದು ಟೀಕಿಸಿದ ಪ್ರತಿ ಪಕ್ಷದ ನಾಯಕ ಆರ್. ಅಶೋಕ್ ಅವರು, "ಯಾವ ಸಾಧನೆಗಾಗಿ ಅವರು ಸಮಾವೇಶ ನಡೆಸುತ್ತಿದ್ದಾರೆ?" ಎಂದು ಪ್ರಶ್ನಿಸಿದ್ದಾರೆ.

**ಸಾವಿರ ದಿನದ ಸಂಭ್ರಮ:** ಕಾಂಗ್ರೆಸ್ ಸಮಾವೇಶದ ಬಗ್ಗೆ ಬಿಜೆಪಿಯ ಟೀಕೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ನಮ್ಮ ಸರ್ಕಾರವು 1,000 ದಿನಗಳನ್ನು ಪೂರೈಸಿದ್ದು, ನೀಡಿದ್ದ ಭರವಸೆ ಈಡೇರಿಸಿ ನುಡಿದಂತೆ ನಡೆದಿದ್ದೇವೆ ಎಂದಿದ್ದಾರೆ.

ರಾಜ್ಯ ಸರ್ಕಾರ 1000 ದಿನಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ನಡೆ–ಯುತ್ತಿದೆ. ಸಮಾವೇಶದಲ್ಲಿ ಭಾಗವಹಿಸುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಸರ್ಕಾರವು ತನ್ನ ಬದ್ಧತೆಗಳನ್ನು ಈಡೇರಿಸಿದೆ ಮತ್ತು ಅದರ ಕಲ್ಯಾಣ ಕಾರ್ಯಕ್ರಮಗಳು ಮುಂದುವರಿಯುತ್ತವೆ ಎಂದು ನುಡಿದಿದ್ದಾರೆ.



### 2.20 ಲಕ್ಷ ಹಕ್ಕು ಪತ್ರ

ಕಂದಾಯ ಇಲಾಖೆಯಿಂದ ಎರಡನೇ ಬಾರಿ ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡುತ್ತಿದ್ದೇವೆ. ಇಲ್ಲಿಯವರೆಗೆ 2.20 ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಿ ದಾಖಲೆ ನಿರ್ಮಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿ, ರಾಜ್ಯದ ಜಿಡಿಪಿ ದೇಶದಲ್ಲೇ ನಂಬರ್ ಒನ್ ಆಗಿಸಿದ್ದು ನಮ್ಮ ಜನಪರ ಸರ್ಕಾರ ಎಂದಿದ್ದಾರೆ ಸಿಎಂ.

### ದೀನ ದಲಿತರ ಕಲ್ಯಾಣ

ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಅಂಚಿನಲ್ಲಿರುವ ವರ್ಗಗಳ ಸಬಲೀಕರಣದ ಗುರಿಯನ್ನು ಹೊಂದಿವೆ. ಈ ಕಾರ್ಯಕ್ರಮ ದಲಿತರು, ಮಹಿಳೆಯರು, ಹಿಂದುಳಿದ ವರ್ಗ, ರೈತರು ಸೇರಿದಂತೆ ಬಡವರ ಕಲ್ಯಾಣ, ಸಬಲೀಕರಣದ ಮೇಲೆ ಕೇಂದ್ರೀಕರಿಸುತ್ತವೆ. ನಾವು ಅವುಗಳನ್ನು ಕಾರ್ಯಗತಗೊಳಿಸುವುದನ್ನು ಮುಂದುವರಿಸುತ್ತೇವೆ ಎಂದು ವಿವರಿಸಿದ್ದಾರೆ.

### ಹೈಕಮಾಂಡ್ ಆದೇಶಕ್ಕೆ ಬದ್ಧ

ನಾವು 592 ಭರವಸೆಗಳನ್ನು ನೀಡಿದ್ದೇವೆ, ಅವುಗಳಲ್ಲಿ 240 ಈಡೇರಿಸಿದ್ದೇವೆ. ಉಳಿದ ಭರವಸೆಗಳನ್ನು ಸಹ ನಾವು ಈಡೇರಿಸುತ್ತೇವೆ. ನಮ್ಮ ವಿರುದ್ಧದ ಎಲ್ಲಾ ಆರೋಪಗಳು ಸುಳ್ಳು ಎಂದಿದ್ದಾರೆ. ನಾಯಕತ್ವದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಹೈಕಮಾಂಡ್ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೇನೆ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ.

### 15 ವರ್ಷ ಸಿದ್ದು ಮುಖ್ಯಮಂತ್ರಿ..!

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗಿನ ಪೂರ್ಣಾವಧಿ ಐದು ವರ್ಷಗಳಷ್ಟೇ ಅಲ್ಲ, ಮುಂದಿನ 15 ವರ್ಷಗಳಿಗೂ ಅವರೇ ಮುಖ್ಯಮಂತ್ರಿಯಾಗಿರಬೇಕು. ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರ ಮೇಲೂ ನನಗೆ ಅಪಾರ ಗೌರವ ಇದೆ. ನಾಯಕತ್ವ ಬದಲಾವಣೆ ಕುರಿತು ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರವೇ ಅಂತಿಮ ಎಂದಿದ್ದಾರೆ ಕ್ಷೇತ್ರದ ಶಾಸಕ ಹರೀಶ್ ಗೌಡ.

### ಇನ್ಮೇಲೆ ನ.3ರಿಂದ ಹಂಪಿ ಉತ್ಸವ



**ಹಂಪಿ:** ವಿಜಯನಗರ ಸಾಮ್ರಾಜ್ಯದ ವೈಭವ, ಇತಿಹಾಸವನ್ನು ಜನರಿಗೆ ತಿಳಿಸುವ ಅಗತ್ಯ ಇದೆ. ಹಿಂದಿನಂತೆ ನವೆಂಬರ್ 3, 4 ಮತ್ತು 5ರಂದೇ ಉತ್ಸವವನ್ನು ನಡೆಸುವುದು ಸೂಕ್ತ. ಹೀಗಾಗಿ ನವೆಂಬರ್‌ನಲ್ಲೇ ಮುಂದಿನ ಹಂಪಿ ಉತ್ಸವ ನಡೆಯಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಐತಿಹಾಸಿಕ ಹಂಪಿ ಉತ್ಸವ–2026 ಅನ್ನು ಉದ್ಘಾಟಿಸಿ ಮಾತನಾಡಿ, ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ ಎಂದಿದ್ದಾರೆ.

### ಸಿಎಂಗೆ ಹೈ ದಿಲ್ಲಿಗೆ ಬುಲಾವ್?

**ಬೆಂಗಳೂರು:** ನಾಯಕತ್ವ ಬದಲಾವಣೆ ವಿಚಾರ ಸಂಬಂಧ ಫೆ.17ಕ್ಕೆ ದೆಹಲಿಗೆ ಬರುವಂತೆ ಕಾಂಗ್ರೆಸ್ ಹೈಕಮಾಂಡ್ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ.ಶಿವಕುಮಾರ್‌ಗೆ ಸೂಚನೆ ನೀಡಿದೆ ಎಂದು ಮೂಲ ತಿಳಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಡಿಕೆ.ಶಿ, ಈ ಕುರಿತು ನನಗೇನೂ ಗೊತ್ತಿಲ್ಲ. ಕಾಲವೇ ಎಲ್ಲದಕ್ಕೂ ಉತ್ತರ ನೀಡುತ್ತದೆ ಎಂದಿದ್ದಾರೆ. ನಾನು ಯಾವಾಗಲೂ ಭರವಸೆಯಲ್ಲಿಯೇ ಬದುಕುತ್ತೇನೆ. ಪ್ರಯತ್ನ ಇದ್ದರೆ ಫಲ ಸಿಗುತ್ತದೆ. ಭಕ್ತಿ ಇದ್ದರೆ ದೇವರು ಸಿಗುತ್ತಾರೆ ಎಂದು ಹೇಳಿದ್ದಾರೆ.



# ಚರಂಡಿಗೆ ಬಿದ್ದ 5 ವರ್ಷದ ಬಾಲಕ ಸಾವು

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಫೇ 14: ಚರಂಡಿಗೆ ಬಿದ್ದು ಐದು ವರ್ಷದ ಬಾಲಕ ಮೃತಪಟ್ಟ ಘಟನೆ ಶುಕ್ರವಾರ ಸಂಜೆ ಮರ್ಜಾಪುರ್ (ಎಂ) ಗ್ರಾಮದಲ್ಲಿ ನಡೆದಿದೆ.

ಮೃತಬಾಲಕನನ್ನುಇಮಾಮಬಾದ್ ಗ್ರಾಮದ ನಿವಾಸಿ ಅವಿನಾಶ್ (5) ಎಂದು ಗುರುತಿಸಲಾಗಿದೆ.

ಅವಿನಾಶ್‌ತನ್ನಮನೆಯವರೊಂದಿಗೆ ಅಜ್ಜಿಯ ಮನೆಗೆ ಮರ್ಜಾಪುರ್ (ಎಂ) ಗ್ರಾಮಕ್ಕೆ ಬಂದಿದ್ದನು.



ಮನೆಯ ಮುಂದೆ ಆಟ ಆಡುವ ಸಮಯದಲ್ಲೇ ಚರಂಡಿಗೆ ಬಿದ್ದಂತ 5 ವರ್ಷದ ಬಾಲಕ ಅವಿನಾಶ್ ಗ್ರಾಮದಲ್ಲಿರುವ ಚರಂಡಿಯ ಮೇಲ್ಭಾಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಕಟ್ಟಿಗೆಯನ್ನು ಇಟ್ಟು ದಾರಿ ಮಾಡಲಾಗಿತ್ತು. ಆ ದಾರಿಯನ್ನು ದಾಟಲು ಪ್ರಯತ್ನಿಸಿದ ವೇಳೆ ಬಾಲಕ ಕಾಲು ಜಾರಿ ಚರಂಡಿಗೆ ಬಿದ್ದು ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಬಗದಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರೆದಿದೆ ಎಂದು ತಿಳಿದುಬಂದಿದೆ,




ಬಸವಕಲ್ಯಾಣ :– ತಾಲೂಕಿನ ಯದಲಾಪುರ ಗ್ರಾಮದಲ್ಲಿ ಅಖಂಡ ಹರಿನಾಮ ಸಪ್ತಹ ಕಾರ್ಯಕ್ರಮ ನಿಮಿತ್ಯ ಜರುಗಿದ ಧರ್ಮಸಭೆಯನ್ನು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ನಾಗೇಂದ್ರ ರೆಡ್ಡಿ, ವೆಂಕಟರೆಡ್ಡಿ, ನಿವರಂಗ ರೆಡ್ಡಿ, ಭೀಮಶಾ ವಾಡೇಕರ್, ವಿಠಲ ರೆಡ್ಡಿ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಪೊಲೀಸ್ ಕಾನ್ಸಟೇಬಲ್‌ಗಳ ಸೇವೆ ಅಪಾರ -ಗೌರವಕ್ಕೆ ಅರ್ಹವಾದ ಅಡಿಪಾಯದ ಶಕ್ತಿ

ಸಮಾಜದ ಶಾಂತಿ, ಸುರಕ್ಷತೆ ಮತ್ತು ಶಿಸ್ತು ಕಾಪಾಡುವ ಹೊಣೆ ಹೊತ್ತಿರುವ ಪೊಲೀಸ್ ವ್ಯವಸ್ಥೆಯ ನಿಜವಾದ ಬೆನ್ನೆಲುಬು ಪೊಲೀಸ್ ಕಾನ್ಸಟೇಬಲ್‌ಗಳೇ. ಉರಿ ಬಿಸಿಲಲ್ಲೂ, ಸುರಿಯುವ ಮಳೆಯಲ್ಲೂ, ಹಬ್ಬ–ಹರಿದಿನಗಳಲ್ಲೂ, ರಾತ್ರಿಯ ನಿಶ್ಶಬ್ದದಲ್ಲೂ ಜನರ ರಕ್ಷಣೆಗೆ ನಿಂತಿರುವ ಈ ವೀರರು ಮೌನ ಸೇವಕರಾಗಿದ್ದಾರೆ. ಅಧಿಕಾರದ ಶಿಖರದಲ್ಲಿ ನಿಂತವರು ನೀತಿನಿರ್ಣಯ ಮಾಡಬಹುದು, ಆದರೆ ನೆಲಮಟ್ಟದಲ್ಲಿ ಕಾರ್ಯರೂಪಕ್ಕೆ ತರುವುದು ಕಾನ್ಸಟೇಬಲ್‌ಗಳ ದುಡಿಮೆಯೇ.

ರಸ್ತೆ ಸಂಚಾರ ನಿಯಂತ್ರಣದಿಂದ ಹಿಡಿದು ಅಪಘಾತ ಪೀಡಿತರ ರಕ್ಷಣೆ, ಅಪರಾಧ ತಡೆಗಟ್ಟುವ ಪೇಟ್ರೋಲಿಂಗ್‌ನಿಂದ ಹಿಡಿದು ಸಾರ್ವಜನಿಕ ಶಾಂತಿ ಕಾಪಾಡುವ ಕರ್ತವ್ಯವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಅವರ ಪಾತ್ರ ಅನಿವಾರ್ಯ. ಹಲವಾರು ಬಾರಿ ಕುಟುಂಬದಿಂದ ದೂರವಿದ್ದು ಕರ್ತವ್ಯ ನಿರ್ವಹಿಸುವ ಈ ಸಿಬ್ಬಂದಿ, ತಮ್ಮ ಸ್ವಂತ ಸುಖಕ್ಕಿಂತ ಸಮಾಜದ ಭದ್ರತೆಯನ್ನು ಮೊದಲಗಾಗಿಡುತ್ತಾರೆ. ಇದಕ್ಕೆ ಪ್ರತಿಫಲವಾಗಿ ಸಿಗುವದು ಅಲ್ಪ ಸಂಬಳ, ಕಡಿಮೆ ವಿಶ್ರಾಂತಿ ಮತ್ತು ಕೆಲವೊಮ್ಮೆ ಸಾರ್ವಜನಿಕರಿಂದಲೇ ಎದುರಾಗುವ ನಿರ್ಲಕ್ಷ್ಯ.

ನಮ್ಮ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಏಚಿಡಿಟಚಿಣಚಿಞಚಿ ಕಠಟುಛಿಜ ಸೇರಿದಂತೆ ದೇಶದ ಎಲ್ಲಾ ಪೊಲೀಸ್ ಇಲಾಖೆಗಳಲ್ಲಿಯೂ ಕಾನ್ಸಟೇಬಲ್‌ಗಳ ಶ್ರಮವೇ ಶಕ್ತಿಕೇಂದ್ರ. ಆದರೆ ಅವರ ಕೊಡುಗೆಗೆ ತಕ್ಕಷ್ಟು ಗೌರವ, ಸೌಲಭ್ಯಗಳು ಹಾಗೂ ಮಾನಸಿಕ ಬೆಂಬಲ ಸಿಗುತ್ತಿದೆಯೇ ಎಂಬ ಪ್ರಶ್ನೆ ನಮ್ಮೆಲ್ಲರಿಗೂ ಆತ್ಮಪರಿಶೀಲನೆಗೆ ಕಾರಣವಾಗಬೇಕು.

ಪೊಲೀಸರು ಎಂದರೆ ಕೇವಲ ಕಾನೂನು ಜಾರಿ ಮಾಡುವವರು ಮಾತ್ರವಲ್ಲ; ಅವರು ಸಂಕಷ್ಟದಲ್ಲಿರುವವರಿಗೆ ಧೈರ್ಯ ತುಂಬುವ ರಕ್ಷಕರು ಕೂಡ. ಒಂದು ಅಪಘಾತದ ವೇಳೆ ರಕ್ತಸ್ರಾವವಾಗುತ್ತಿರುವ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ಕೈಗಳು, ಕಾಣೆಯಾಗಿರುವ ಮಗುವನ್ನು ಹುಡುಕಿ ತಾಯಿಗೆ ಒಪ್ಪಿಸುವ ಮನಸ್ಸು –ಇವೆಲ್ಲವೂ ಕಾನ್ಸಟೇಬಲ್‌ಗಳ ಮಾನವೀಯ ಮುಖವನ್ನು ತೋರಿಸುತ್ತವೆ.

ಆದ್ದರಿಂದ ಸಮಾಜವಾಗಿ ನಾವು ಪೊಲೀಸ್ ಕಾನ್ಸಟೇಬಲ್‌ಗಳನ್ನು ಗೌರವದಿಂದ ಕಾಣಬೇಕು. ಅವರೊಂದಿಗೆ ಸಹಕಾರದಿಂದ ವರ್ತಿಸಬೇಕು, ಅನಗತ್ಯವಾಗಿ ಟೀಕೆ ಮಾಡುವುದನ್ನು ಬಿಟ್ಟು ಅವರ ಸೇವೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರವೂ ಅವರ ಕೆಲಸದ ಒತ್ತಡ ಕಡಿಮೆ ಮಾಡುವ ಕ್ರಮಗಳು, ಉತ್ತಮ ವೇತನ, ವಸತಿ, ಆರೋಗ್ಯ ಹಾಗೂ ಮಾನಸಿಕ ಆರೈಕೆ ವ್ಯವಸ್ಥೆಗಳನ್ನು ಬಲಪಡಿಸಬೇಕು.

ಶಾಂತಿಯುತ ಸಮಾಜದ ಹಿಂದೆ ನಿಂತಿರುವ ಮೌನ ವೀರರಿಗೆ ನಮ್ಮ ಗೌರವವೇ ನಿಜವಾದ ಕೃತಜ್ಞತೆ. ಪೊಲೀಸ್ ಕಾನ್ಸಟೇಬಲ್‌ಗಳ ಸೇವೆ ಅಪಾರ – ಅವರನ್ನು ಗೌರವದಿಂದ ಕಾಣುವುದು ನಮ್ಮ ನಾಗರಿಕ ಕರ್ತವ್ಯ.

# ನೂತನ ಪದಾಧಿಕಾರಿಗಳ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ನಗರದ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ (ರಿ) ಭಾಲ್ಕಿ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾ ಅಧ್ಯಕ್ಷೆ ಪಾರ್ವತಿ ಸೋನಾರೆ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರಿ ಸೇವೆಯಲ್ಲಿ ನಿರತರಾಗಿರುವ ಮಹಿಳೆಯರು ತಮ್ಮ ಸಂವಿಧಾನಿಕ ಹಾಗೂ ಸಾಂಘಿಕ ಹಕ್ಕುಗಳ ಪರಿಪಾಲನೆಯಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿರುವುದಾಗಿ ಹೇಳಿದರು. ಮಹಿಳಾ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆ ಶಕ್ತಿಯಾಗಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಭಾಲ್ಕಿ ಘಟಕದ ಗೌರವಾಧ್ಯಕ್ಷೆಯಾಗಿ ಡಾ. ಸಹನಾ, ಅಧ್ಯಕ್ಷೆಯಾಗಿ ಯಮುನಾ ಕಾಂಬಳೆ, ಪ್ರಧಾನ ಕಾರ್ಯದರ್ಶಿಯಾಗಿ ಭಾಗ್ಯಲಕ್ಷ್ಮಿ ಜವಾದೆ, ಖಜಾಂಚಿಯಾಗಿ ಅನಿತಾ ಮುದ್ದಾಳೆ, ಉಪಾಧ್ಯಕ್ಷರಾಗಿ ಆರತಿ ಮೆತ್ರೆ, ಬಾಲಿಕಾ ಉಮಾಜಿ, ಯೋಜನಾ ಸೂರ್ಯವಂಶಿ, ಶ್ವೇತಾ ಬಿರಾದಾರ ಹಾಗೂ ಪ್ರಿಯಾಂಕಾ (ಎಹೆಚ್‌ಒ) ಅವರನ್ನು ಆಯ್ಕೆ ಮಾಡಲಾಯಿತು. ಸಹ ಕಾರ್ಯದರ್ಶಿಗಳಾಗಿ ಸುನೀತಾ ಹೂಗಾರ, ಇಂದುಮತಿ ಬೆಳಗೆರೆ, ಮಂಗಲಾ ಉದಗಿರೆ,

ವಿಜಯಲಕ್ಷ್ಮಿ ಪೂಜಾರಿ, ಸಂಗೀತಾ ನಿಟ್ಟೂರೇ, ಮಂಗಲಾ ಹಲಗರೆ ಹಾಗೂ ತಬಸುಮ್ ಪಟೇಲ್ ಅವರನ್ನು ನೇಮಕ ಮಾಡಲಾಯಿತು. ಸದಸ್ಯರಾಗಿ ಮಾಲಾಶ್ರೀ ತಳವಾಡೆ, ಕಾವೇರಿ, ಕಲ್ಪನಾ, ರೇಣುಕಾ, ಶಿವವ್ವಾ ಕಾಂಬಳೆ, ನೆಮಾವತಿ, ಸರಿತಾಕುಮಾರಿ, ಇಂದುಮತಿ, ಆಸ್ಮಾ ಬೇಗಮ್, ಅರ್ಚನಾ, ಮೀರಾ, ಶೀತಲ, ಮಹಾನಂದಾ, ಸಂತೋಷಿ ವಾಡೆ, ಮಮತಾಜ್ ಬೇಗಂ, ಅನ್ನಪೂರ್ಣ, ಸತ್ಯಭಾಮ, ವಿಜಯಲಕ್ಷ್ಮಿ, ಸುಲೋಚನಾ, ಸೇರಿದಂತೆ ಅನೇಕರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳು ಸಂಘಟನೆಯನ್ನು ಬಲಪಡಿಸಿ ಮಹಿಳಾ ನೌಕರರ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಂಡುಕೊಳ್ಳಲು ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಲ್ಲಾ ಅಧ್ಯಕ್ಷೆ ಪಾರ್ವತಿ ಸೋನಾರೆ ಹಾಗೂ ಉಪಾಧ್ಯಕ್ಷೆ ವಿಜಯಶೀಲಾ ತಿಳಿಸಿದ್ದಾರೆ.

# ಶ್ರೀ ಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕಟ್ಟಡದ ಉದ್ಘಾಟನಾ ಸಮಾರಂಭ ಇಂದು

ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:

ನಗರದ ಶ್ರೀ ಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕಟ್ಟಡದ ಉದ್ಘಾಟನಾ ಸಮಾರಂಭ ಹಾಗೂ ಮಹಾಶಿವರಾತ್ರಿಯ ಪ್ರಯುಕ್ತ ಸಾಮೂಹಿಕ ಇಷ್ಟಲಿಂಗ ಪೂಜೆ ಇಂದು

ಬೆಳಿಗ್ಗೆ 11 – 30 ನಿ. ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಜರುಗಲಿರುವ ಕಾರ್ಯಕ್ರಮದ ಉದ್ಘಾಟನೆ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು.

ದಿವ್ಯ ಸಾನಿಧ್ಯ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ. ದಿವ್ಯ ನೇತೃತ್ವ ಗೋರ್ಟಾದ ಲಿಂಗಾಯತ ಮಹಾಮಠದ ಪೂಜ್ಯಶ್ರೀ ಮ.ನಿ.ಪ್ರ. ಪ್ರಭುದೇವ ಮಹಾಸ್ವಾಮಿಜಿಗಳು. ಸಮ್ಮುಖ



ಬೇಳಗಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ ಪೂಜ್ಯ ಶ್ರೀ ಮ. ನಿ. ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಜಿಗಳು.

ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ. ಶಾಸಕರಾದ ಶರಣು ಸಲಗರ. ಅಧ್ಯಕ್ಷತೆ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ. ಗೌರವ ಉಪಸ್ಥಿತಿ ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಕಾರ್ಯದರ್ಶಿಗಳಾದ ವಿವೇಕಾನಂದ ಹೂದಲೂರೆ ಸ್ವಾಗತ ಕೊರುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮರಕಲ್ ಪಿಡಿಓ ಉಮೇಶ್ ಜಾಬಾ ಅಮಾನತ್ತು ರದ್ದುಪಡಿಸಲು ಗ್ರಾಮಸ್ಥರ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ ಬೀದರ್:

ಮರಕಲ್ ಗ್ರಾಮ ಪಂಚಾಯತಿಯ ಪಿಡಿಓ ಉಮೇಶ್ ಜಾಬಾ ಅವರ ಅಮಾನತ್ತನ್ನು ತಕ್ಷಣವೇ ರದ್ದುಪಡಿಸಬೇಕೆಂದು ಗ್ರಾಮಸ್ಥರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿಯಲ್ಲಿ ತಿಳಿಸಿರುವಂತೆ, ಕೆಲವು ವ್ಯಕ್ತಿಗಳ ದೂರಿನ ಆಧಾರದ ಮೇಲೆ ಪಿಡಿಓ ಅವರನ್ನು ಅಮಾನತ್ತುಗೊಳಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಆದರೆ, ಅವರ ನೇತೃತ್ವದಲ್ಲಿ ಗ್ರಾಮದಲ್ಲಿ ಸ್ವಚ್ಛತೆ, ಕುಡಿಯುವ ನೀರು ಸೇರಿದಂತೆ ಹಲವು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾರ್ಯಗಳು ಸುಧಾರಿಸಿಕೊಂಡಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಹಿಂದೆ ಗ್ರಾಮ ಪಂಚಾಯತಿಯಲ್ಲಿ ಕೆಲವರ ಪ್ರಭಾವ ಹೆಚ್ಚಾಗಿದ್ದು, ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಅಸಮರ್ಪಕತೆಗಳಿದ್ದವು ಎಂದು ಆರೋಪಿಸಲಾಗಿದೆ. ಉಮೇಶ್ ಜಾಬಾ ಅವರು ಅಧಿಕಾರ ಸ್ವೀಕರಿಸಿದ ನಂತರ ಆ ವ್ಯವಸ್ಥೆಗೆ ಕಡಿವಾಣ ಹಾಕಿದ್ದು, ಜನಪರವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಗ್ರಾಮದ ಅಭಿವೃದ್ಧಿ ಹಿತದೃಷ್ಟಿಯಿಂದ ಅವರ ಅಮಾನತ್ತನ್ನು ಮರುಪರಿಶೀಲಿಸಿ ವಾಪಸ್ ಪಡೆಯಬೇಕೆಂದು ಗ್ರಾಮಸ್ಥರು ಜಿಲ್ಲಾ ಪಂಚಾಯತ್ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ.



# ಡ್ರೋನ್ ಶೋ ಮೂಲಕ ಮರುಸೃಷ್ಟಿಯಾದ ವಿಜಯನಗರ ವೈಭವ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಹಂಪಿ ಉತ್ಸವದ ಉದ್ಘಾಟನಾ ಸಮಾರಂಭದ ಅಂಗವಾಗಿ ಆಯೋಜಿಸಲಾಗಿದ್ದ ಅತ್ಯಾಧುನಿಕ ಡ್ರೋನ್ ಶೋ, ವಿಜಯನಗರದ ಗತವೈಭವವನ್ನು ಬಾನಂಗಳದಲ್ಲಿ ಅನಾವರಣಗೊಳಿಸಿತು. ಆಧುನಿಕ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಪರಂಪರೆಯ ಈ ಅಪೂರ್ವ ಸಂಗಮವು ನೆರೆದಿದ್ದ ಸಹಸ್ರಾರು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ನೂರಾರು ಡ್ರೋನ್‌ಗಳು ಆಕಾಶದಲ್ಲಿ ಹಂಪಿಯ ಪ್ರಸಿದ್ಧ ಕಲ್ಲಿನ ರಥ, ಭವ್ಯವಾದ ವಿರೂಪಾಕ್ಷ ದೇವಾಲಯ ಮತ್ತು ರೌದ್ರಾವತಾರದಲ್ಲಿರುವ ಉಗ್ರ ನರಸಿಂಹನ ಮೂರ್ತಿಗಳನ್ನು ಕಲಾತ್ಮಕವಾಗಿ ಬಿಂಬಿಸಿದವು. ವಿಜಯನಗರ ಸಾಮ್ರಾಜ್ಯವನ್ನು ಜಗತ್ತಿಗೆ ಪರಿಚಯಿಸಿದ ಅಪ್ರತಿಮ ವೀರ, ಕನ್ನಡಿಗರ ಹೆಮ್ಮೆಯ ಸಾಮ್ರಾಟ ಶ್ರೀ ಕೃಷ್ಣದೇವರಾಯರ ಭಾವಚಿತ್ರವು ಆಕಾಶದಲ್ಲಿ ಮೂಡಿಬಂದಾಗ ಜನರಿಂದ ಹರ್ಷೋದ್ಗಾರ ವ್ಯಕ್ತವಾಯಿತು. ಇದರೊಂದಿಗೆ ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಿರುವ ಹಂಪಿಯ ದರೋಜಿ ಕರಡಿ ಧಾಮ ಮತ್ತು ಬಡವಿ ಲಿಂಗದ ಚಿತ್ರಣಗಳು ಪ್ರದರ್ಶನದ ಮೆರುಗನ್ನು ಹೆಚ್ಚಿಸಿದವು.

ಪ್ರದರ್ಶನವು ಕೇವಲ ಇತಿಹಾಸಕ್ಕೆ ಸೀಮಿತವಾಗದೆ, ರಾಜ್ಯ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳಾದ ಶಕ್ತಿ ಮತ್ತು ಅನ್ನಭಾಗ್ಯ ಸೇರಿದಂತೆ ಪಂಚ ಯೋಜನೆಗಳ ಕುರಿತು ಮಾಹಿತಿಯನ್ನು ಸ್ಫುಟವಾಗಿ ಪ್ರದರ್ಶಿಸಿತು. ಕೊನೆಯಲ್ಲಿ ಬಡವರ ಮತ್ತು ಕಲಾವಿದರ ಆಶಾಕಿರಣವೆಂದು ಬಣ್ಣಿಸಲಾದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಭಾವಚಿತ್ರವನ್ನು ಡ್ರೋನ್ ಮೂಲಕ ಬಾನಂಗಳದಲ್ಲಿ ಚಿತ್ರಿಸಿ ಗೌರವ ಸಲ್ಲಿಸಲಾಯಿತು. ಇದರೊಂದಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಹೆಚ್. ಕೆ.ಪಾಟೀಲ್, ಸಚಿವ ಶಿವರಾಜ ತಂಗಡಿ, ಬಿ.ಝಡ್.ಜಮೀರ್ ಅಹಮ್ಮದ್ ಖಾನ್, ಶಾಸಕ ಹೆಚ್. ಆರ್.ಗವಿಯಪ್ಪ, ನಟ ದಿವಂಗತ ಪುನೀತ್‌ರಾಜ್ ಕುಮಾರ್ ಚಿತ್ರಗಳು ಡ್ರೋನ್ ಸಂಯೋಜನೆಯಲ್ಲಿ ಮೂಡಿಬಂದವು. ಈ ವರ್ಣರಂಜಿತ ಡ್ರೋನ್ ಶೋ ಪ್ರದರ್ಶನವು ಹಂಪಿಯ ಸಾಂಸ್ಕೃತಿಕ ಹಿರಿಮೆಗೆ ಹೊಸ ಆಯಾಮವನ್ನು ನೀಡುವಲ್ಲಿ ಯಶಸ್ವಿಯಾಯಿತು. ಎ.ಐ.ಆರ್. ಪಿಕ್ಸಲ್ ಕಂಪನಿಯ ತಂತ್ರಜ್ಞರು ಡ್ರೋನ್‌ಗಳ ಸಂಯೋಜನೆಯ ನಿರ್ವಹಣೆ ಮಾಡಿದರು.

# ಸಾಮೂಹಿಕ ಇಷ್ಟಲಿಂಗ ಪೂಜೆ ಇಂದು

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:



ಮಹಾಶಿವರಾತ್ರಿ ನಿಮಿತ್ತ ಇಲ್ಲಿಯ ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪದಲ್ಲಿ ಭಾನುವಾರ ಮಧ್ಯಾಹ್ನ 1 ಗಂಟೆಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬಸವಭಕ್ತರು ಸಮಯಕ್ಕೆ ಸರಿಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಲು ಶ್ರೀಮಠದಿಂದ ಈ ಮೂಲಕ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಬಸವಕಲ್ಯಾಣ :– ಇಲ್ಲಿನ ಶ್ರೀ ಬಸವೇಶ್ವರ ವೃತ್ತದ ಸಮೀಪದಲ್ಲಿ ಆಗಮಿಸಿದ ಹಾರಕೂಡ ಪೂಜ್ಯರ ಸಹೋದರರಾದ ಮಲ್ಲಿನಾಥ ಹಿರೇಮಠ ಹಾರಕೂಡ ಇವರಿಗೆ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ನೀಡುತ್ತಿರುವ ದೃಶ್ಯ ಕಾಣಬಹುದು ಈ ಸಂದರ್ಭದಲ್ಲಿ ಮಲ್ಲಮ್ಮ ನುಡಿ ಪತ್ರಿಕೆಯ ವರದಿಗಾರರಾದ ಡಿ.ಕೆ.ಪ್ರಹ್ಲಾದ ಹಾಗೂ ನಾಗಪ್ಪಾ ನಿಣ್ಣೆ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ).

# 19ರಂದು ಛತ್ರಪತಿ ಶಿವಾಜಿ ಮಹಾರಾಜ ಜಯಂತಿ

## ಎಲ್ಲ ಸಮಾಜ ಬಾಂಧವರು ಭಾಗವಹಿಸಿ: ರಘುನಾಥರಾವ ಜಾಧವ

ಮಲ್ಲಮ್ಮ ನುಡಿ ವಾರ್ತೆ ಬೀದರ್

ಈ ತಿಂಗಳ 19ರಂದು ಗುರುವಾರ ಹಿಂದವಿ ಸ್ವರಾಜ ಸ್ಥಾಪಕರು, ಈ ದೇಶ ಕಂಡ ಮಹಾನ ರಾಜರುಗಳ ಪೈಕಿ ಒಬ್ಬರಾದ ಛತ್ರಪತಿ ಶಿವಾಜಿ ಮಹಾರಾಜ ಅವರ 396ನೇ ಜಯಂತಿಯನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ಎಲ್ಲ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮಹೋತ್ಸವ ಸಮಿತಿ ಅಧ್ಯಕ್ಷರಾದ ರಘುನಾಥರಾವ ಜಾಧವ ಹೇಳಿದರು.

ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಸರ್ಕಾರದ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಸಚಿವರು, ಸಂಸದರು, ಜಿಲ್ಲೆಯ ಎಲ್ಲಾ ಶಾಸಕರು, ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಮತ್ತು ಇತರ



ಗಣ್ಯರು ಭಾಗವಹಿಸುತ್ತಿದ್ದಾರೆ. ಛತ್ರಪತಿ ಶಿವಾಜಿ ಮಹಾರಾಜರು 18 ಪಂಗಡ ಜಾತಿಗಳು, 12 ಬಲೂತೇದಾರರು, ಅಲ್ಪಸಂಖ್ಯಾತರು ಮತ್ತು ದಿನ–ದಲಿತರ ಮಹಾನ ರಾಜರಾಗಿದ್ದರು, ಅವರು ಎಲ್ಲಾ ಭಾರತೀಯರಿಗೆ ಸ್ಫೂರ್ತಿಯಾಗಿದ್ದರು. ಇಂತಹ ಮಹಾನ್ ಉತ್ಸವದಲ್ಲಿ ಎಲ್ಲರು ಭಾಗವಹಿಸಬೇಕಾಗಿ ಕೋರುವುದಾಗಿ ಪುನರೂಚ್ಚರಿಸಿದರು.

ನಮ್ಮ ರಾಜ್ಯದಲ್ಲಿ ಕೇವಲ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಅಲ್ಲದೆ ವಿಶ್ವಗುರು ಬಸವಣ್ಣನವರು, ರಕ್ತ ಕನಕದಾಸರು, ಮಹಾತ್ಮ ಜ್ಯೋತಿಬಾ ಫುಲೆ, ಸರ್ವಜ್ಞ, ಶ್ರೀ ಕೃಷ್ಣ ಜಯಂತಿ, ನಾರದ ಮಹರ್ಷಿಗಳ ಜಯಂತಿ, ನಾರಾಯಣ ಗುರುಗಳ ಜಯಂತಿ, ಭಗಿರಥ ಜಯಂತಿ ಸೇರಿದಂತೆ ಎಲ್ಲ ಮಹಾತ್ಮರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸುತ್ತಿರುವ ಸೌಹಾರ್ದತೆಯ ರಾಜ್ಯ ನಮ್ಮದಾಗಿದೆ ಎಂದರು.

ಜಯಂತ್ಯೋತ್ಸವ ಸಮಿತಿಯ ಉಪಾಧ್ಯಕ್ಷರು ನ್ಯಾಯವಾದಿ ನಾರಾಯಣ ಗಣೇಶ ಮಾತನಾಡಿ, ಅಂದು ಬೆಳಗ್ಗೆ 9.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ನಡೆಯುವುದು. ಬೆಳಗ್ಗೆ 10 ಗಂಟೆಗೆ ಶ್ರೀ ಛತ್ರಪತಿ ಶಿವಾಜಿ ಚೌಕಿನಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪುತ್ತಳಿಗೆ ಪೂಜೆ ಮತ್ತು ಮಾಲಾರ್ಪಣೆ, ನಂತರ ಭವ್ಯ ಮೆರವಣಿಗೆ ನಡೆಯುವುದು. ಮೆರವಣಿಗೆಯು ಛತ್ರಪತಿ ಶಿವಾಜಿ ಮಹಾರಾಜ ವೃತ್ತದಿಂದ ಹರಳಯ್ಯ ವೃತ್ತ, ಮೋಹನ್ ಮಾರ್ಕೆಟ್, ರೋಟರಿ ಸರ್ಕಲ್ ಮೂಲಕ ಪೂಜ್ಯ ಡಾ ಚನ್ನಬಸವ ಪಟ್ಟದೇವರ ರಂಗಮಂದಿರ ತಲುಪುವುದು. ಮಧ್ಯಾಹ್ನ 12:30 ಗಂಟೆಗೆ ಡಾ ಚನ್ನಬಸವ ಪಟ್ಟದ್ದೇವರ ಜಿಲ್ಲಾ ರಂಗ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ಅರಣ್ಯ ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪೌರಾಡಳಿತ ಸಚಿವ ರಹೀಂ ಖಾನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಸಾಗರ್ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್, ಔರಾದ್ ಶಾಸಕ ಪ್ರಭು ಚವ್ಹಾಣ, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಹುಮ್ನಾಬಾದ್ ಶಾಸಕ ಡಾ. ಸಿದ್ದು ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ್, ಶಶೀಲ.ಜಿ ನಮೋಶಿ, ಭೀಮರಾವ್ ಪಾಟೀಲ್, ಎಂ.ಜಿ ಮೂಳೆ, ಕಾಡಾ ಅಧ್ಯಕ್ಷ ಬಾಬು ಹೊನ್ನಾ ನಾಯಕ, ಮಹಾನಗರ ಪಾಲಿಕೆ ಅಧ್ಯಕ್ಷ ಮೊಹಮ್ಮದ್ ಗೌಸ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಭಾಗವಹಿಸುವರು. ಪುಣೆ–ಯ ಮರಾಠ ಸೇವಾ ಸಂಘದ ಇತಿಹಾಸಕಾರರಾದ ಗಂಗಾಧರ ಬನಬಾರೆ ಶಿವಾಜಿ ಮಹಾರಾಜರ ಜೀವನ ಹಾಗೂ ಸಾಧನೆ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದವರು ತಿಳಿಸಿದರು. ಜಯಂತ್ಯೋತ್ಸವ ಸಮಿತಿಯ ಉಪಾಧ್ಯಕ್ಷರಾದ ವಿಜಯಕುಮಾರ ಪಾಟೀಲ ಕಣಜಿ, ಕಾರ್ಯದರ್ಶಿ ಗೋವಿಂದರಾವ ಜಾಧವ, ಬಾಲಾಜಿ ಬಿರಾದಾರ, ಶಶಿಕಲಾ ಬಿರಾದಾರ, ಅನಿತಾ ಭಾರುಳೆ, ಉಷಾ ಸೂರ್ಯವಂಶಿ ಮಾತನಾಡಿದರು.

ಸಮಿತಿಯ ಪದಾಧಿಕಾರಿಗಳಾದ ರಂಜಿತ ಪಾಟೀಲ, ಸುರೇಶ ಟಾಕಳೆ, ಸದಾಶಿವ ಪಾಟೀಲ, ಕಿರಣ ಚವ್ಹಾಣ, ವಸಂತ ಬಿರಾದಾರ, ಸಂದೀಪ ಪಾಟೀಲ ಹಂಗರಗಾ, ರಂಗರಾವ ಪಾಟೀಲ, ಶಿವಾಜಿ ತಾಡಮಲ್ಲೆ, ಮೀನಾ ಜಾಧವ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.



ಕಲಬುರಗಿ: ನಗರದ ಶಹಾಬಾದ ಕ್ರಾಸ್‌ನಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಖ್ಯಾತ ಉದ್ದಿಮೇದಾರರಾದ ಅಶೋಕ ಸಿ. ಹೋನ್ನಳ್ಳಿ ಅವರ ಜನ್ಮದಿನದ ನಿಮಿತ್ತ ಅನ್ನದಾಸೋಹ ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಮೇಯರ್ ರವಿ ಸಿ. ಹೋನ್ನಳ್ಳಿ, ಕಾಂಗ್ರೆಸ್ ಮುಖಂಡ ಶರ–ಣಗೌಡ ಅಲ್ಲಮಪ್ರಭು ಪಾಟೀಲ, ಪಾಲಿಕೆ ಮಾಜಿ ಸದಸ್ಯ ರಾಹುಲ ಎ. ಹೋನ್ನಳ್ಳಿ, ಮುಖಂಡರಾದ ಸಮಿರ ಬಾಗವಾನ, ಕುಮಾರ ಯಾದವ, ಪ್ರಮೋದಕುಮಾರ, ದೇವಿಂದ್ರ ನಡುವಿನಮನಿ, ಹರೀಶ ಖಾನಪೂರ, ಸಂಘಪಾಲ ಕಾಂಬಳೆ, ಮಲ್ಲಿಕಾರ್ಜುನ ಕನವಳಕರ್ ಸೇರಿದಂತೆ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳು ಇದ್ದರು.




ಬಸವಕಲ್ಯಾಣ :– ತಾಲೂಕಿನ ಅಲಗೂಡ ಸರಕಾರಿ ಪ್ರಾಢಶಾಲೆಯಲ್ಲಿ ಇಕೋ ಕ್ಲಬ್ ಸಮಾರಂಭ ನಿಮಿತ್ಯ ವಿದ್ಯಾರ್ಥಿಗಳಿಗೆ ಪರಿಸರ. ಪ್ಲಾಸ್ಟಿಕ್. ಕುರಿತು ಜಾಗೃತಿ ಮೂಡಿಸಲಾಯಿತು. ಅಲ್ಲದೆ ಅವರನ್ನು ವನ ಭೋಜನಕ್ಕೆ ಸಮೀಪದ ವಾಡಿ ಮಾರುತಿಗೆ ಒಯ್ದು ವಿವಿಧ ಸ್ಪರ್ಧೆ ಏರ್ಪಡಿಸಿ ವಿಜೇತ ರಾದ್ ಮಕ್ಕಳಿಗೆ ಬಹುಮಾನ ನೀಡ ಲಾಯಿತು. ವಿಜ್ಞಾನ ಶಿಕ್ಷಕರಾದ ಬೊಮ್ಮಲಿಂಗಪ್ಪಾ. ಕೆ. ಹಾಗೂ ಸುಲಭಾ ಪೋದ್ದಾರ. ಅಲ್ಲದೆ ಮಕ್ಕಳು ಶಿಕ್ಷಕರು ಭಾಗವಹಿಸಿ ದರು. (ಮಲ್ಲಮ್ಮ ನುಡಿ ಚಿತ್ರ)

# ಹಾರಕೂಡ ಶ್ರೀಗಳ ಅಮೃತ ಹಸ್ತದಿಂದ ಹೊನ್ನ ಕಿರಣ ಗ್ರಂಥ ಲೋಕಾರ್ಪಣೆ.

ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ನಗರದ ಗಂಗಾ ಮದೀನಾ ಕಾಲೋನಿಯಲ್ಲಿ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಅಮೃತ ಹಸ್ತದಿಂದ ಹೊನ್ನ ಕಿರಣ ಗ್ರಂಥ ಬಿಡುಗಡೆ ಮಾಡಲಾಯಿತು.

ಕೃಷ್ಣಾ ಕಾಡಾ ಅಧ್ಯಕ್ಷರಾದ

ಬಾಬುಹೊನ್ನಾ ನಾಯಕ ಹಾಗೂ ಶಾಂತಾಬಾಯಿ ಬಾಬುಹೊನ್ನಾ ನಾಯಕ ದಂಪತಿಯ ಮತ್ತು ಝುಮಕಾಬಾಯಿ ಗೋಪಾಲ ಹೊನ್ನಾನಾಯಕ ದಂಪತಿಯ 50ನೇ ವಿವಾಹ ಸುವರ್ಣ ಮಹೋತ್ಸವ ನಿಮಿತ್ಯ ಹಾರಕೂಡದ

ಪರಮಪೂಜ್ಯರು ಬಾಬು ಹೊನ್ನಾನಾಯಕ ದಂಪತಿಗಳಿಗೆ ಸತ್ಕರಿಸಿ ಆಶೀರ್ವದಿಸಿದರು. ನಾಡಿನ ಅನೇಕ ಪೂಜ್ಯರು ಸೇರಿದಂತೆ ತಾಲೂಕಿನ ಶಾಸಕರಾದ ಶರಣು ಸಲಗರ, ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ,



ಮಾಜಿ ವಿಧಾನ ಪರಿಷತ್ ಸದಸ್ಯರಾದ ವಿಜಯಸಿಂಗ, ಮಲ್ಲಿನಾಥ ಹಿರೇಮಠ ದಂಪತಿ ಹಾಗೂ ಹೊನ್ನಾ ನಾಯಕ ಪರಿವಾರ ಹಾಗೂ ಬಂಧು ಮಿತ್ರರು ಸೇರಿದಂತೆ ಬಾಬು ಹೊನ್ನಾ ನಾಯಕರ ಅನೇಕ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

# ಕೆಂಪು ಮಣ್ಣಿನ ಕಣದಲ್ಲಿ ಪೈಲ್ವಾನರ ಜಿದ್ದಾಜಿದ್ದಿ

ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಗತವೈಭವ ನೆನಪಿಸುವಂತೆ, ಹಂಪಿಯ ಹೊಸಮಲಪನಗುಡಿಯ ವಿದ್ಯಾರಣ್ಯ ಪೀಠದ ಮೈದಾನದಲ್ಲಿ ಶನಿವಾರ ಸಾಂಪ್ರದಾಯಿಕ ಮಣ್ಣಿನ ಕುಸ್ತಿ ಪಂದ್ಯಾವಳಿ ಪ್ರೇಕ್ಷಕರ ಮೈನವಿರೇಳಿಸಿತು.

ಸುತ್ತಲೂ ಹೂವುಗಳಿಂದ ಅಲಂಕೃತಗೊಂಡಿದ್ದ ಕೆಂಪು ಮಣ್ಣಿನ ಅಖಾಡವು ಪೈಲ್ವಾನರ ಸೆಣಸಾಟಕ್ಕೆ ಸಾಕ್ಷಿಯಾಯಿತು. ಕೇಸರಿ ಮತ್ತು ಕೆಂಪು ಬಣ್ಣದ ಲಂಗೋಟಿ ಧರಿಸಿ ಅಖಾಡಕ್ಕಿಳಿದ ಪೈಲ್ವಾನರು, ಮಣ್ಣನ್ನು ಮೈಗೆ ಹಚ್ಚಿಕೊಂಡು ಪರಸ್ಪರ ಸವಾಲು ಹಾಕಿದರು. ಮಣ್ಣಿನಲ್ಲಿ ಉರುಳಾಡುತ್ತಾ, ಒಬ್ಬರನ್ನೊಬ್ಬರು ಕೆಡವಲು ನಡೆಸಿದ ಕಸರತ್ತು ನೆರೆದಿದ್ದ ಸಹಸ್ರಾರು ಕ್ರೀಡಾಭಿಮಾನಿಗಳನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತು.

ಅಖಾಡದಲ್ಲಿ ರೆಫರಿಗಳ ತೀಕ್ಷ್ಣ ನೋಟದ ನಡುವೆ ನಡೆದ ಪಂದ್ಯದಲ್ಲಿ



ಪೈಲ್ವಾನರು ತಮ್ಮ ದೈಹಿಕ ಬಲದ ಜೊತೆಗೆ ಮಾನಸಿಕ ತಂತ್ರಗಾರಿಕೆಯನ್ನು ಪ್ರದರ್ಶಿಸಿದರು. ಮೈದಾನದ ಸುತ್ತಲೂ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರು ಪ್ರತಿ ಪಟ್ಟುಗಳಿಗೂ ಚಪ್ಪಾಳೆ ತಟ್ಟಿ ಪೈಲ್ವಾನರನ್ನು ಪ್ರೋತ್ಸಾಹಿಸಿದರು.

ಉಸಿರು ಬಿಗಿಹಿಡಿಯುವಂತೆ ಮಾಡಿದ '

**ಗುಂಡು ಎತ್ತುವ ಸ್ಪರ್ಧೆ':** ಶಕ್ತಿ ಪ್ರದರ್ಶನದ ಕೇಂದ್ರಬಿಂದುವಾಗಿದ್ದ ಗುಂಡು ಎತ್ತುವ ಸ್ಪರ್ಧೆಯಲ್ಲಿ ಯುವಕರು ನೂರಾರು ಕೆಜಿ ತೂಕದ ಕಲ್ಲನ್ನು ಭುಜದ ಮೇಲೆ ಆಡಿಸಿ ವೀಕ್ಷಕರನ್ನು ಬೆರಗುಗೊಳಿಸಿದರು.

ಬಿಜಾಪುರದ ಶೇಖಪ್ಪ ಬಸಪ್ಪ ಅವರು 175 ಕೆಜಿ ತೂಕದ ಗುಂಡನ್ನು ಲೀಲಾಜಾಲವಾಗಿ ಎತ್ತಿ ಪ್ರಥಮ ಸ್ಥಾನ ಗಳಿಸಿದರು. ಅದೇ ಜಿಲ್ಲೆಯ ನಬಿ ನದಾಫ್ (155 ಕೆಜಿ) ದ್ವಿತೀಯ ಹಾಗೂ ರಾಯಚೂರಿನ ರಂಗಸ್ವಾಮಿ (135 ಕೆಜಿ) ತೃತೀಯ ಸ್ಥಾನ ಪಡೆದರು.

**ಬಂಡಿ ಗಾಲಿ ಜೋಡಣೆ:**

ಕೇವಲ ಶಕ್ತಿಯಷ್ಟೇ ಅಲ್ಲದೆ, ವೇಗ ಮತ್ತು ಕೌಶಲದ ಪರೀಕ್ಷೆಯಾಗಿದ್ದ ಎತ್ತಿನಬಂಡಿ ಗಾಲಿ ಜೋಡಿಸುವ ಸ್ಪರ್ಧೆಯು ನೋಡುಗರ ಕಣ್ಣು ಮಿಟುಕದಂತೆ ಮಾಡಿತು. ನೂರಾರು ಕೆಜಿ ತೂಕದ ಮರದ ಗಾಲಿಗಳನ್ನು ಏಕಾಂಗಿಯಾಗಿ ಜೋಡಿಸುವ ಸಾಹಸದಲ್ಲಿ ಬಡಗಿ ಶ್ರೀನಿವಾಸ ಅವರು ಪ್ರಥಮ ಸ್ಥಾನಕ್ಕೆ ಮುತ್ತಿಕ್ಕಿದರು. ಹೊಸಪೇಟೆಯ ದೇವಪ್ಪ ದ್ವಿತೀಯ ಹಾಗೂ ಬಡಗಿ ವೆಂಕೋಬ ತೃತೀಯ ಸ್ಥಾನ ಗಳಿಸಿದರು. ಶಾಸಕ ಹೆಚ್.ಆರ್ ಗವಿಯಪ್ಪ ಅವರು ವಿಜೇತರಿಗೆ ತಮ್ಮ ವೈಯಕ್ತಿಕ ನಿಧಿಯಿಂದ ಕ್ರಮವಾಗಿ ರೂ10,000, ರೂ5,000 ಹಾಗೂ ರೂ3,000 ನಗದು ಬಹುಮಾನ ವಿತರಿಸಿ ಪ್ರೋತ್ಸಾಹಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಉಪವಿಭಾಗಾಧಿಕಾರಿ ವಿವೇಕ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

**ರಾಜ್ಯಮಟ್ಟದ ಪುರುಷ ಕುಸ್ತಿ ಪಂದ್ಯ ವಿಜೇತರು:** 57 ರಿಂದ 65 ಕೆಜಿ ತೂಕದ ಕುಸ್ತಿಯಲ್ಲಿ ರಾಜ್ಯಮಟ್ಟದ ಹಂಪಿ ಕಿಶೋರ ಪ್ರಶಸ್ತಿಗೆ ವಿರೂಪಾಕ್ಷ ಪ್ರಥಮ ಸ್ಥಾನ, ಕಾರ್ತಿಕ್ ಮಾರುತಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. 64 ರಿಂದ 74 ಕೆಜಿ ತೂಕದ ಕುಸ್ತಿಯಲ್ಲಿ ರಾಜ್ಯ ಮಟ್ಟದ ಹಂಪಿ ಕುಮಾರ ಪ್ರಶಸ್ತಿಗೆ ಕೆ ಸಂಜೀವನ ಪ್ರಥಮ ಸ್ಥಾನ, ಭರತ್ ಕುಡ್ಡೆಮ್ಮಿ ದ್ವಿತೀಯ ಸ್ಥಾನ. 75 ರಿಂದ 85 ಕೆಜಿ ತೂಕದ ಕುಸ್ತಿಯಲ್ಲಿ ರಾಜ್ಯ ಮಟ್ಟದ ಹಂಪಿ ಕೇಸರಿ ಪ್ರಶಸ್ತಿಗೆ ಬೀರಲಿಂಗೇಶ್ವರ ಪ್ರಥಮ ಸ್ಥಾನ, ಶಿವಾನಂದ ದ್ವಿತೀಯ ಸ್ಥಾನ. 86ಕ್ಕೂ ಮೇಲ್ಪಟ್ಟ ತೂಕದ ಕುಸ್ತಿಯಲ್ಲಿ ರಾಜ್ಯಮಟ್ಟದ ಹಂಪಿ ಕಂಠೀರವ ಪ್ರಶಸ್ತಿಗೆ ಪರಮಾನಂದ ಪ್ರಥಮ, ವಿಜಯಕುಮಾರ ಜಿ ದ್ವಿತೀಯ ಸ್ಥಾನ.


# ಸರಕಾರಿ ಶಾಲೆಗಳಲ್ಲಿ ಪೋಲಿಸರ ನೇಮಕಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ರಾಜಧಾನಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಮಕ್ಕಳ ಕಿಡ್ನ್ಯಾಪ್ ಆಗಿರುವುದನ್ನು ಸಾಮಾಜಿಕ ಜಾಲತಾಣದಲ್ಲಿ ಕಂಡಿದ್ದೇವೆ. ಮಕ್ಕಳನ್ನು ಟಾರ್ಗೆಟ್ ಮಾಡಿ ಶಾಲಾ ಮಕ್ಕಳನ್ನು ಕಿಡ್ನ್ಯಾಪ ಮಾಡುತ್ತಿರುವ ಗ್ಯಾಂಗ್ಸ್ಟರ್ ಗಳ ಗುಂಪು ಪ್ರತಿಯೊಂದು ಜಿಲ್ಲೆಯಲ್ಲಿ ಬಂದಿರುವ ಮಾಹಿತಿ ಈಗಾಗಲೇ ತಿಳಿದಿರುವುದರಿಂದ ಮಕ್ಕಳ ಗಳ್ಳರನ್ನು ಬಂಧಿಸುವಲ್ಲಿ ಹಾಗೂ ಮಕ್ಕಳ ಹಿತದೃಷ್ಟಿಯಿಂದ ಮಕ್ಕಳ ರಕ್ಷಣೆಗಾಗಿ ಕೂಡಲೇ ಪೋಲಿಸ ಇಲಾಖೆಯೂ ಎಲ್ಲಾ ಶಾಲೆಗಳಲ್ಲಿ ಪೋಲಿಸ ಅಧಿಕಾರಿಗಳನ್ನು ನೇಮಕ ಮಾಡಬೇಕು. ಪ್ರತಿಯೊಂದು ಬಸ್ ಸ್ಟಾಪ್ ಗಳಲ್ಲಿ ಸಿ.ಸಿ ಟಿವಿ ಕ್ಯಾಮೆರಾ ಅಳವಡಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಶಿವುಕುಮಾರ ಗೋಕುಲ ಅವರು ಮನವಿ ಮಾಡಿಕೊಂಡರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಈಗಾಗಲೇ ಬೆಂಗಳೂರು ಸೇರಿದಂತೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಕ್ಕಳರ ಕಿಡ್ನಾಪ ಗ್ಯಾಂಗ ( ಮಹಿಳೆಯರ ಗ್ಯಾಂಗ) ಬಂದಿದು ಪೋಲಿಸರ ಗಮನಕ್ಕೆ ಬಂದಿರುತ್ತದೆ. ಈ ವಿಷಯವನ್ನು ಪೋಲಿಸರು ಗಂಭೀರವಾಗಿ ಪರಿಗಣಿಸಬೇಕು. ಶಾಲೆಗಳಲ್ಲಿ ಮಕ್ಕಳ ಕಳ್ಳರ ಹಾವಳಿ ಕುರಿತು ಅಭಿಯಾನ ನಡೆಸಬೇಕು. ಕಿಡ್ನಾಪ ಕುರಿತು ಸರಕಾರಿ ಶಾಲೆಗಳಲ್ಲಿ ಜಾಗೃತಿ ಮೂಡಿಸಬೇಕು. ಈ ಕುರಿತು ಪೋಲಿಸ ಇಲಾಖೆಯೂ ಮಕ್ಕಳ ರಕ್ಷಣೆಗಾಗಿ ಪ್ರತಿ ಶಾಲೆಗಳಲ್ಲಿ ಪೋಲಿಸ ಅಧಿಕಾರಿಗಳನ್ನು ನೇಮಕ ಮಾಡಿ ಮಕ್ಕಳನ್ನು ಕಾಪಾಡಬೇಕೆಂದು ಅವರು ಒತ್ತಾಯಿಸಿದ್ದಾರೆ.

# ಚಾರಿತ್ರ್ಯವೇ ಪ್ರಥಮ ಎಂದು ಪ್ರತಿಪಾದಿಸುತ್ತಿದ್ದ ಭೀಮಣ್ಣ ಖಂಡ್ರೆ : ಈಶ್ವರ ಖಂಡ್ರೆ ಸ್ಮರಣೆ




• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಜಾತಿ ಭೇದ, ವರ್ಗಭೇದ, ಧರ್ಮ ಭೇದ, ಶ್ರೇಣಿ ಭೇದ, ಲಿಂಗಭೇದವಿಲ್ಲದ ಸಮಾಜದ ಪ್ರತಿಪಾದಕರಾಗಿದ್ದ ಲಿಂಗೈಕ್ಯ ಡಾ. ಭೀಮಣ್ಣ ಖಂಡ್ರೆ ಅವರು, ವಿಶ್ವಗುರು ಬಸವಣ್ಣನವರ ತತ್ವಾದರ್ಶಗಳನ್ನೇ ಮೈಗೂಡಿಸಿ ಬಾಳಿ ಬದುಕಿದರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸ್ಮರಿಸಿದರು. ಬೆಂಗಳೂರಿನ ಗಾಯತ್ರಿ ವಿಹಾರದಲ್ಲಿ ಬೃಹತ್ ಜನಸ್ತೋಮದ ಹಾಗೂ ಗಣ್ಯಾತಿಗಣ್ಯರ ಸಮ್ಮುಖದಲ್ಲಿ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ತಂದೆ ಯಾರೇ ಬಡವರು, ನಿರ್ಗತಿಕರು, ಶೋಷಿತರು ಸಹಾಯ ಬೇಡಿ ಬಂದರೂ ಅವರ ಕಣ್ಣೀರು ಒರೆಸಿ ಅವರಿಗೆ ನ್ಯಾಯ ದೊರಕಿಸುದ್ದರು ಎಂದರು.


ಮಹಾನ್ ರಾಷ್ಟ್ರಭಕ್ತರು ಮತ್ತು ರಾಷ್ಟ್ರೀಯವಾದಿಗಳಾಗಿದ್ದ ತಮ್ಮ ತಂದೆ ಭೀಮಣ್ಣ ಖಂಡ್ರೆ, ಸದಾ ರಾಷ್ಟ್ರವೇ ಪ್ರಥಮ ಎಂದು ಪ್ರತಿಪಾದಿಸುತ್ತಿದ್ದರು. ಬಿಡುವು ದೊರೆತಾಗಲೆಲ್ಲಾ ಮಕ್ಕಳೆಲ್ಲರನ್ನೂ ಕೂರಿಸಿಕೊಂಡು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಹಾನ್ ನಾಯಕರ ಬಗ್ಗೆ ತಿಳಿಸುತ್ತಿದ್ದರು ಎಂದರು. ತಮ್ಮ ದೀಕ್ಷಾಗುರು ಡಾ. ಚನ್ನಬಸವಸ್ವಾಮಿ ಪಟ್ಟದ್ದೇವರ ಶತಮಾನೋತ್ಸವ ಹಾಗೂ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಭವ್ಯ ಎಂಜಿನಿಯರಿಂಗ್ ಕಟ್ಟಡ ಉದ್ಘಾಟನೆಗೆ ಅಂದಿನ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರನ್ನೇ ಕರೆಸಿ ಒಂದು ವಾರದಲ್ಲಿ ಕಾರ್ಯಕ್ರಮ ಆಯೋಜಿಸಿದ್ದರು. ಅವರು ಹಠವಾದಿ, ಛಲವಾದಿಯಾಗಿದ್ದರು ಎಂದು ಹೇಳಿದರು.

ಅನ್ನದಾತನ ಬಗ್ಗೆ ಅವರಿಗೆ ಅಪಾರವಾದ ಕಾಳಜಿ ಇತ್ತು. ರೈತರ ಪರವಾಗಿ ಸದಾ ಹೋರಾಟ ಮಾಡುತ್ತಿದ್ದರು. ಅವರಿಗೆ ಅನ್ಯಾಯ ಆದಾಗ ನ್ಯಾಯ ಕೊಡಿಸುತ್ತಿದ್ದರು. ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಎಲ್ಲರನ್ನೂ ಒಗ್ಗೂಡಿಸಲು ಗುರುವಿರಕ್ತರ ಸಮಾವೇಶವನ್ನು ನಡೆಸಿದ್ದರು.

12ನೇ ಶತಮಾನದ ಅನುಭವ ಮಂಟಪದ ಸ್ಥಳದಲ್ಲಿ ಈಗಿರುವ ಲಿಂಗಾಕೃತಿಯ ಗೋಪುರದ ಆಧುನಿಕ ಅನುಭವ ಮಂಟಪಕ್ಕೆ ತನು, ಮನ, ಧನವನ್ನೇ ಧಾರೆ ಎರೆದಿದ್ದರು. ತಾವೇ ತಲೆಯ ಮೇಲೆ ಮಣ್ಣು, ಜಲ್ಲಿ, ಕಲ್ಲು, ಸಿಮೆಂಟ್ ಹೊತ್ತು ಕೆಲಸಗಾರರನ್ನು ಹುರಿದುಂಬಿಸಿ, ಬೆಳಗಾಗುವುದರೊಳಗೆ ಕಾಮಗಾರಿ ಪೂರ್ಣಗೊಳಿಸಿದ ಹಿರಿಮೆ ತಮ್ಮ ತಂದೆ ಭೀಮಣ್ಣ ಖಂಡ್ರೆ ಅವರದಾಗಿತ್ತು ಎಂದರು. ಬಸವಕಲ್ಯಾಣದ ಸಮಗ್ರ ಅಭಿವೃದ್ಧಿ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕು ಎಂದು ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿ, ಅವರ ಜೊತೆಗೂಡಿ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಮನವಿ ಸಲ್ಲಿಸಿ, ಘೋಷಣೆ ಮಾಡಿಸಿದರು. ನಂತರ ಧರ್ಮಸಿಂಗ್ ಅವರ ಕಾಲದಲ್ಲಿ ಶಾಸನಬದ್ಧಗೊಳಿಸಲೂ ಅವಿರತವಾಗಿ ಶ್ರಮಿಸಿದರು ಎಂದು ಸ್ಮರಿಸಿದರು. 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಗಳಾಗಿ ಬಸವ ಜಯಂತಿಯಂದೇ ಪ್ರಮಾಣ ವಚನ ಸ್ವೀಕರಿಸಿದ ಶ್ರೀ ಸಿದ್ದರಾಮಯ್ಯನವರು ಈಗ ನಿರ್ಮಾಣವಾಗುತ್ತಿರುವ ಅತ್ಯಾಧುನಿಕ ಅನುಭವ ಮಂಟಪ ನಿರ್ಮಾಣದ ರೂಪುರೇಶೆ ತಯಾರಿಸಲು ಹಿರಿಯ ವಿದ್ವಾಂಸರಾದ ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಕಾರ್ಯಯೋಜನೆ ಸಿದ್ಧಪಡಿಸಿ, ಬಜೆಟ್ ನಲ್ಲಿ ಘೋಷಿಸಿದರು. ನಂತರ ಮುಖ್ಯಮಂತ್ರಿಗಳಾದ ಶ್ರೀ ಯಡಿರೂಪ್ಪನವರು ಹಣ ಬಿಡುಗಡೆ ಮಾಡಿ ಶಂಕುಸ್ಥಾಪನೆ ನೆರವೇರಿಸಿದರು. ಈಗ ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿಗಳಾದ ತರುವಾಯ 200 ಕೋಟಿ ರೂ. ಬಿಡುಗಡೆ ಮಾಡಿದ್ದು ಕಾಮಗಾರಿ ಭರದಿಂದ ನಡೆಯುತ್ತಿದೆ. 770 ಅಮರಗಣಂಗಳ ಹೆಸರಿನ ಕಂಬಗಳ ಆಧಾರದ ಮೇಲೆ ಆಧುನಿಕ ಅನುಭವ ಮಂಟಪ ನಿರ್ಮಾಣವಾಗುತ್ತಿದೆ. ಮುಂದಿನ ವರ್ಷಾಂತ್ಯದೊಳಗೆ ಅನುಭವ ಮಂಟಪವನ್ನು ಲೋಕಾರ್ಪಣೆ ಮಾಡುವುದು ಸರ್ಕಾರದ ಗುರಿಯಾಗಿದೆ ಎಂದರು. ಬೆಂಗಳೂರು ನಗರದಲ್ಲಿ 1000 ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿನಿಲಯ ಕಟ್ಟಬೇಕು ಎಂಬುದು ತಮ್ಮ ತಂದೆ ಕನಸಾಗಿತ್ತು. ಹಿಂದಿನ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರಿಗೂ ಈ ಕನಸಿತ್ತು. ಈಗ ನನ್ನನ್ನು ಅವಿರೋಧವಾಗಿ ಮಹಾಸಭಾ ಅಧ್ಯಕ್ಷರನ್ನಾಗಿ ಮಾಡಿದ್ದು, ವಸತಿ ನಿಲಯ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುವುದಾಗಿ ಹೇಳಿದರು.

ಸಮಾಜದ ಎಲ್ಲ ಒಳಪಂಗಡಗಳನ್ನು ಒಗ್ಗೂಡಿಸಬೇಕು ಎಂಬುದು ಅವರ ಧ್ಯೇಯವಾಗಿತ್ತು. ಸಮಾಜದ ಒಳಿತಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದ ಈಶ್ವರ ಖಂಡ್ರೆ, ಅಭಿಮಾನವಿಟ್ಟು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಎಲ್ಲ ಗುರು, ಹಿರಿಯವರು ಮತ್ತು ಜನನಾಯಕರುಗಳಿಗೆ ಕೃತಜ್ಞತೆ ಸಮರ್ಪಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಭಾಲ್ಕಿ ಹಿರೇಮಠದ ಶ್ರೀ ಬಸವಲಿಂಗ ಪಟ್ಟದ್ದೇವರು, ಕಿರಿಯ ಸ್ವಾಮೀಜಿ ಶ್ರೀ ಗುರುಬಸವ ಪಟ್ಟದ್ದೇವರು, ಹುಲಸೂರು ಶ್ರೀ ಶಿವಾನಂದ ಸ್ವಾಮೀಜಿಸ ಬೆಲ್ದಾಳೆಯ ಸಿದ್ದರಾಮ ಶರಣರು, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವ ವಿ. ಸೋಮಣ್ಣ, ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಎಂ. ವೀರಪ್ಪ ಮೊಯ್ಲಿ, ಬಿ.ಎಸ್. ಯಡಿಯೂರಪ್ಪ, ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಡಾ. ಜಿ. ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಎಂ.ಸಿ. ಸುಧಾಕರ್, ಎಂ.ಬಿ. ಪಾಟೀಲ್, ಬೋಸ್ ರಾಜ್, ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಬೈರತಿ ಸುರೇಶ್, ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ, ರಾಜಶೇಖರ ಪಾಟೀಲ್, ಬಂಡೆಪ್ಪ ಕಾಶೆಂಪೂರ, ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಸಂಸತ್ ಸದಸ್ಯರಾದ ಬಸವರಾಜ ಬೊಮ್ಮಾಯಿ, ಸಾಗರ್ ಖಂಡ್ರೆ, ಶಾಸಕರುಗಳಾದ ಡಾ. ಶೈಲೇಂದ್ರ ಬೆಲ್ದಾಳೆ, ಮಹಾಸಭಾದ ರಾಜ್ಯಾಧ್ಯಕ್ಷರಾದ ಶಂಕರ ಬಿದರಿ ಹಾಗೂ ಹರಗುರು ಚರಮೂರ್ತಿಗಳು ಪಾಲ್ಗೊಂಡಿದ್ದರು.

# ದೇವಿಯ ಆಶೀರ್ವಾದ ಪಡೆದ ರಾಜಗೋಪಾಲ ಅಡಿ ಗುರೂಜಿ



ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :


ಯಲ್ಲಾಪುರದಲ್ಲಿ ನಡೆಯುತ್ತಿರುವ ಶ್ರೀ ದೇವಮ್ಮ ಮತ್ತು ಶ್ರೀ ದುರ್ಗಮ್ಮ ಗ್ರಾಮ ದೇವಿಯ ಜಾತ್ರೆಯಲ್ಲಿ ಅನುವಂಶೀಯ ಉಪಾಧಿವಂತ ಮಂಡಳದ ಅಧ್ಯಕ್ಷರು ಹಾಗೂ ಪುಣ್ಯಾಶ್ರಮದ ರಾಜಗೋಪಾಲ ಅಡಿ ಗುರೂಜಿ ಅವರು ದೇವಿಯ ದರ್ಶನ ಮಾಡಿ ಆಶೀರ್ವಾದ ಪಡೆದರು.



ಕಲಬುರಗಿ: ನಗರದ ಶಹಾಬಾದ ಕ್ರಾಸ್‌ನಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಖ್ಯಾತ ಉದ್ದಿಮೇದಾರರಾದ ಅಶೋಕ ಸಿ. ಹೋನ್ನಳ್ಳಿ ಅವರ ಜನ್ಮದಿನದ ನಿಮಿತ್ತ ಅನ್ನದಾಸೋಹ ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಮೇಯರ್ ರವಿ ಸಿ. ಹೋನ್ನಳ್ಳಿ, ಕಾಂಗ್ರೆಸ್ ಮುಖಂಡ ಶರಣಗೌಡ ಅಲ್ಲಮಪ್ರಭು ಪಾಟೀಲ, ಪಾಲಿಕೆ ಮಾಜಿ ಸದಸ್ಯ ರಾಹುಲ ಎ. ಹೋನ್ನಳ್ಳಿ, ಮುಖಂಡರಾದ ಸಮಿರ ಬಾಗವಾನ, ಕುಮಾರ ಯಾದವ, ಪ್ರಮೋದಕುಮಾರ, ದೇವಿಂದ್ರ ನಡುವಿನಮನಿ, ಹರೀಶ ಖಾನಪೂರ, ಸಂಘಪಾಲ ಕಾಂಬಳೆ, ಮಲ್ಲಿಕಾರ್ಜುನ ಕನವಳಕರ್ ಸೇರಿದಂತೆ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳು ಇದ್ದರು.

# ಶಿಕ್ಷಣದಲ್ಲಿ ಮಕ್ಕಳಿಗೆ ಒತ್ತಾಯಕ್ಕಿಂತ ಅಭಿರುಚಿಗೆ ಆದ್ಯತೆ ನೀಡಿ

## ಶಾಂತಗೌಡ ಪಾಟೀಲ್




• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:

ಮಕ್ಕಳಿಗೆ ಒತ್ತಾಯದ ಮೇರೆಗೆ ಶಿಕ್ಷಣ ನೀಡುವ ಬದಲು ಅವರ ಅಭಿರುಚಿ ಆಸಕ್ತಿ ಅರಿತು ಶಿಕ್ಷಣ ನೀಡುವಲ್ಲಿ ಶಿಕ್ಷಕರ, ಪಾಲಕರ ಪಾತ್ರ ಪ್ರಮುಖವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ವಿಶ್ರಾಂತ ಉಪನಿರ್ದೇಶಕ ಶಾಂತಗೌಡ ಪಾಟೀಲ ಹೇಳಿದರು. ಪಟ್ಟಣದ ಸಾಯಿ ಹಿರಿಯ ಪ್ರಾಥಮಿಕ ಶಾಲೆಯ 13 ನೇ ವರ್ಷದ ವಾರ್ಷಿಕೋತ್ಸವ ಹಾಗೂ 8 ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಹೊರ ತರುವ ಮೂಲಕ ಸಾಯಿ ಶಿಕ್ಷಣ ಸಂಸ್ಥೆ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದ ಅವರು ಮುಂದಿನ ದಿನಗಳಲ್ಲಿ ಹೈಸ್ಕೂಲ್ ವಿಭಾಗ ತೆರೆಯುವಂತೆ ಕರೆ ನೀಡಿದರು. ಹಿರೇಮಠದ ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಸಾನಿಧ್ಯವಹಿಸಿದ್ದರು. ಪುರಸಭೆ ಅಧ್ಯಕ್ಷೆ ಶ್ರೀಮತಿ ಪ್ರೀಯ ರಾಮನಗೌಡ ಪೋಲೀಸ್ ಪಾಟೀಲ್ ಉದ್ಘಾಟಿಸಿದರು, ಕಾರ್ಯಕ್ರಮದಲ್ಲಿ ಸಾಹಿತಿ ಗುಂಡಪ್ಪ ಆರ್ ವಿಶೇಷ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ವೆಂಕಟೇಶ ಎಇಇ ಕೃಭಾಜನಿ, ಆದಿತ್ಯಗೌಡ ಪೋಲೀಸ್ ಪಾಟೀಲ್, ಶ್ರೀನಿವಾಸರಡ್ಡಿ ಪಾಟೀಲ್ ಯಾಳಗಿ, ಸಿ.ಆರ್.ಪಿ ಬಂದೇನವಾಜ ನಾಲತವಾಡ, ಮಲ್ಲಿನಾಥ ಗುರುಮಠ, ಡಾ ಯಂಕನಗೌಡ ಪಾಟೀಲ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನೀಲಕಂಠರಾಯಗೌಡ, ಮುಖ್ಯ ಶಿಕ್ಷಕಿ ಜ್ಯೋತಿ ಪಾಟೀಲ, ಶಿಕ್ಷಕರು, ಪಾಲಕರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ವೇಶ್ಯವಾಟಿಕೆ ಅಡ್ಡೆ ಮೇಲೆ ದಾಳಿ




ಮಲ್ಲಮ್ಮ ನುಡಿ ವಾರ್ತಬೀದರ್: ಲೋಟಸ್ ಸ್ಪಾ ಹೆಸರಿನಲ್ಲಿ ವೇಶ್ಯವಾಟಿಕೆ ದಂಧೆ ನಡೆಸುತ್ತಿದ್ದ ಅಡ್ಡೆಯ ಮೇಲೆ ದಾಳಿ ಮಾಡಿದ ಜಿಲ್ಲಾ ಪೊಲೀಸರು ವಿವಿಧ ರಾಜ್ಯದ ಐವರು ಯುವತಿಯರನ್ನು ರಕ್ಷಣೆ ಮಾಡಿ, ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ನಗರದ ಶಿವನಗರ್ ಟ್ರಾಫಿಕ್ ಸಿಗ್ನಲ್ ಬಳಿ ಇರುವ ಲೋಟಸ್ ಸ್ಪಾದಲ್ಲಿ ವೇಶ್ಯವಾಟಿಕೆ ದಂಧೆ ನಡೆಯುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಮೇರೆಗೆ ಎಸ್‌ಪಿ ಪ್ರದೀಪ್ ಗುಂಟಿ ಅವರ ಮಾರ್ಗದರ್ಶನದಲ್ಲಿ ಸೇನ್ ಪೊಲೀಸ್ ಠಾಣೆಯ ಡಿವೈಎಸ್‌ಪಿ ಎಸ್.ಎನ್ ಸನದಿ ಅವರ ನೇತೃತ್ವದ ತಂಡ ದಾಳಿ ನಡೆಸಿದೆ. ದಾಳಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ವಿಜಯಕುಮಾರ್, ಸೆನ್ ಪೊಲೀಸ್ ಠಾಣೆ, ನೂತನ ನಗರ ಪೊಲೀಸ್ ಠಾಣೆ ಮತ್ತು ವಿಶೇಷ ಘಟಕದ ಸಿಬ್ಬಂದಿ ಭಾಗವಹಿಸಿದ್ದರು. ಈ ವೇಳೆ ಮಹಾರಾಷ್ಟ್ರದ ಇಬ್ಬರು, ಅಸ್ಸಾಂನ ಒಬ್ಬರು, ಹರ್ಯಾಣದ ಒಬ್ಬರು ಹಾಗೂ ಮಧ್ಯಪ್ರದೇಶದ ಒಬ್ಬರು ಸೇರಿ ಒಟ್ಟು ಐವರು ಯುವತಿಯರನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ.

ಸ್ಪಾ ಹೆಸರಿನಲ್ಲಿ ವೇಶ್ಯವಾಟಿಕೆ ದಂಧೆ ನಡೆಸುತ್ತಿರುವ ಇಬ್ಬರನ್ನು ಬಂಧಿಸಿ ಬೀದರ್ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ. "ಬೀದರ್ ಜಿಲ್ಲೆಯಲ್ಲಿ ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸಿದರೆ ಅಂತಹ ಸ್ಪಾ ಮೇಲೆ ದಾಳಿ ಮಾಡಿ ಅಂತಹವರ ವಿರುದ್ಧ ಕಾನೂನುಕ್ರಮ ಕೈಕೊಳ್ಳಲಾಗುವುದು' ಎಂದು ಎಸ್‌ಪಿ ಪ್ರದೀಪ್ ಗುಂಟಿ ಎಚ್ಚರಿಕೆ ನೀಡಿದ್ದಾರೆ.



ಯಾದಗಿರಿ ತಾಲೂಕಿನ ಗೌಡಗೇರ ಗ್ರಾಮದಲ್ಲಿ ನಡೆದ ಶ್ರೀ ಮೈಲಾರಲಿಂಗೇಶ್ವರ ಸಂಸ್ಥಾನ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಗುರುಮಿಠಕಲ್ ಮತಕ್ಷೇತ್ರದ ಜನಪ್ರಿಯ ಮಾಜಿ ಶಾಸಕರಾದ ಲಿಂಗೈಕ್ಯ ಶ್ರೀ ನಾಗನಗೌಡ ಕಂದಕೂರ ರವರ ದ್ವಿತೀಯ ಪುಣ್ಯಸ್ಮರಣೆ ಅಂಗವಾಗಿ ಟೆನ್ನಿಸ್ ಬಾಲ್ ಕ್ರಿಕೇಟ್ ಟೂರ್ನಮೆಂಟ್ ನಲ್ಲಿ ಗುರುಮಿಟಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ರವರು ಪ್ರಥಮ ಸ್ಥಾನ 25,000 ನಗದು ಮತ್ತು ಕಪ್ಪು ವಿತರಿಸಿದರು. ಜೆಡಿಎಸ್ ಮುಖಂಡ ಮೋದಿನ್ ತಂಡದ ನಾಯಕತ್ವದಲ್ಲಿ ಉಮೇಶ್ ಧೋತ್ರೆ ಮಹಿಮೂದ್, ಎಂ ಡಿ ಶಾಹಿದ್, ರೆಹನ್, ಭೀಮು, ಖಾಸಿಂ, ಹಫೀಜ್, ನಿಂಗು, ಅನಿಲ್ ಪ್ರಥಮ ಸ್ಥಾನ ಪಡೆದರು.



ಯಾದಗಿರಿ ತಾಲೂಕಿನ ಸುಕ್ಷೇತ್ರ ಕಿಲ್ಲನಕೆರಾದ ಶ್ರೀ ಚನ್ನವೀರೇಶ್ವರ ಸಂಸ್ಥಾನ ಮೂಲಮಠದ ನೂತನ ಗೋಪುರ ನಿರ್ಮಿಸಿದ ಶ್ರೀಮತಿ ನೀಲಮ್ಮ ಗಂಡ ರಾಜು ಪುರಿ ರವರ ಭಕ್ತಿ ಸೇವೆಗೆ ಪರಮಪೂಜ್ಯ ತಪೋ ರತ್ನ ಶ್ರೀ ಷ. ಬ್ರ. ಶ್ರೀ ಶ್ರೀ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಮಾತಾಶ್ರೀ ವಿದ್ಯಾವತಿ ಅಮ್ಮನವರು ಹಾಗೂ ಗ್ರಾಮದ ಹಿರಿಯ ಮುಖಂಡರು ಸೇರಿ ಗೌರವ ಸತ್ಕರಿಸಿ ಅಭಿನಂದನೆಗಳು ಸಲ್ಲಿಸಿದರು.

# ಮಠ ಮಂದಿರಗಳು ಮನುಷ್ಯನಿಗೆ ಶಾಂತಿ ನೆಮ್ಮದಿ ನಿಡುವ ತಾಣಗಳು: ಶಾಂತಮಯ ಶ್ರೀ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಪುರಾಣ ಪ್ರವಚನಗಳ ಕೇಳುವುದರಿಂದ ಮನಸ್ಸಿಗೆ ಶಾಂತಿ ನೆಮ್ಮದಿ ಜೊತೆಗೆ ಆಧ್ಯಾತ್ಮಿಕ ಚಿಂತನೆ ಬಗ್ಗೆ ಒಲವು ಮೂಡುತ್ತದೆ ಎಂದು ಸರೂರ ಅಗತಿರ್ಥದ ಹಾಲುಮತ ಗುರು ಪಿಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ರೇವಣಸಿದ್ದೇಶ್ವರ ಶಾಂತಮಯ ಮಹಾಸ್ವಾಮಿಗಳು ನುಡಿದರು.ಹುಣಸಗಿ ತಾಲೂಕಿನ ಸದಬ ಗ್ರಾಮದಲ್ಲಿ ಶ್ರೀ ಯಲ್ಲಾಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ 5 ದಿನಗಳ ಕಾಲ ಹಮ್ಮಿಕೊಂಡಿದ್ದ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಶುಕ್ರವಾರದಂದು ಸಾಯಂಕಾಲ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಬ್ಬರು ಸಾಮಾಜಿಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಒತ್ತಡ ನಿವಾರಣೆ ಜೊತೆಗೆ ಪುಣ್ಯ ದೊರೆಯುತ್ತದೆ.ಇತ್ತೀಚಿನ ದಿನಗಳಲ್ಲಿ ಮನುಷ್ಯ ಅವಸರದ ಜೀವನಕ್ಕೆ ಬಲಿಯಾಗಿ ಆರೋಗ್ಯ ಕಳೆದುಕೊಳ್ಳುತ್ತಿದ್ದಾನೆ ಪ್ರತಿಯೊಬ್ಬರು ದಿನನಿತ್ಯ ಯೋಗ ವ್ಯಾಯಾಮ ಪೂಜಾ ದ್ಯಾನಕ್ಕೆ ಸಮಯ ಮೀಸಲಿಡಬೇಕು ಮಠ ಮಂದಿರಗಳು ಮನುಷ್ಯನಿಗೆ ನೆಮ್ಮದಿ ನೀಡುವ ತಾಣಗಳಾಗಿವೆ ಎಂದು ಹೇಳಿದರು.

ಪರಮಪೂಜ್ಯ ಶ್ರೀ ಅಮೋಘೇಪ್ಪ ಶಾಸ್ತ್ರಿಗಳು ಮಾತನಾಡಿ ಶ್ರೀ ಯಾಲ್ಲಾಲಿಂಗ ಮಹಾರಾಜರು ಮಹಾನ್ ಪವಾಡ ಪುರುಷರಾಗಿದ್ದರು ಸಂಸಾರಿಕ ಜೀವನದಿಂದ ಮುಕ್ತಿ ಹೊಂದಿ ವೈರಾಗ್ಯ ಜಿವನ ತೊರೆದು ಗುರು ಪರೀಕ್ಷೆಯಲ್ಲಿ ಗೆದ್ದು ಮಹಾನ್ ಶರಣರಾಗಿ ಯಲ್ಲಾಲಿಂಗ ಮಹಾರಾಜರು ಇಂದಿಗೂ ಕೂಡಾ ಸಾಕ್ಷಾತ್ ದೇವರಾಗಿ ಭಕ್ತರ ಮನಸ್ಸಿನಲ್ಲಿ ಅಚ್ಚಳೆಯದೆ ಉಳಿದಿದ್ದಾರೆ.ಯುವಕರು ದುಶ್ಚಟಗಳಿಂದ ದೂರವಿದ್ದು ವ್ಯಸನ ಮುಕ್ತ ಜೀವನ ನಡೆಸಬೇಕು ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ಮೌಲ್ಯಗಳನ್ನು ಬಿತ್ತಬೇಕು ಗುರು ಹಿರಿಯರಿಗೆ ಗೌರವ ನಿಡುವುದನ್ನು ಕಲಿಸಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಯಲ್ಲಾಲಿಂಗ ಮಹಾರಾಜರು ಸದಬ,ಮಲ್ಲಯ್ಯಸ್ವಾಮಿ ಸದಬ,ಗವಾಯಿ ಬಸವರಾಜ್ ಬಂಟನುರ, ತಬಲ ವಾದಕ ಈಶ್ವರ್ ಬಡಿಗೇರ್, ಶರಣರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.ಈ ಕಾರ್ಯಕ್ರಮವನ್ನು ಗುರಣ್ಣ ಪತ್ತಾರ್ ನಿರೂಪಿಸಿ ವಂದಿಸಿದರು.

# ಸಂಸಾರ ಸಸಾರವಾಗಬೇಕಾದರೆ ಭಕ್ತಿಯ ಸಂಸ್ಕಾರ ಬೇಕು: ಪ್ರಣವ ಪ್ರಕಾಶ ಮಹಾರಾಜರು

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮನ ಅರಳಲು ಭಕ್ತಿಯ ಬೆಳಕು ಬೇಕು, ನರಜನ್ಮವನ್ನು ಪಡೆದು ಬಂದ ಈ ಬದುಕಿಗೆ ಹರಜನ್ಮ ವಾಗಿಸಲು ಧ್ಯಾನ ಭಕ್ತಿ ಬಹಳ ಮುಖ್ಯವಾದುದು ಬದುಕಿನ ಸಂತೋಷ ಸುಖ ನೆಮ್ಮದಿ ಯಾವ ಅಂಗಡಿಯಲ್ಲಿಯೂ ದೊರೆಯುವುದಿಲ್ಲ ಅದನ್ನು ಅಂತರ್ಮುಖಿಯಾಗಿ ಆತ್ಮಶುದ್ಧಿಯಿಂದ ಭಗವಂತನ ಸ್ಮರಣೆಯಿಂದ ಮಾತ್ರ ಸಾಧಿಸಿಕೊಳ್ಳಲು ಸಾಧ್ಯವೆಂದು ವಿಜಯಪುರದ ಕೈವಲ್ಯ ಕುಟೀರ ಆಶ್ರಮದ ಪರಮಪೂಜ್ಯಶ್ರೀ ಪ್ರಣವ ಪ್ರಕಾಶ ಮಹಾರಾಜರು ತಮ್ಮ ಆಶೀರ್ವಚನದಲ್ಲಿ ನುಡಿದರು.

ಬಸವೇಶ್ವರನಗರದ ವಿಶ್ವನಾಥ ಬಡಿಗೇರ ಹತ್ತಿಕುಣಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಸತ್ಸಂಗ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು ಔಷಧಾಲಯ ಗ್ರಂಥಾಲಯ ವಸ್ತ್ರಾಲಯ ಆಭರಣಾಲಯ ಎಲ್ಲಾ ವಸ್ತುಗಳನ್ನು ಮಾರಾಟ ಮಾಡುತ್ತಾರೆ ಅವುಗಳನ್ನ ನಾವು ಕೊಳ್ಳುತ್ತೇವೆ ಆದರೆ ಸುಖ ಶಾಂತಿ ನೆಮ್ಮದಿಗಳನ್ನು ಯಾವುದೇ ಅಂಗಡಿಗಳಿಂದ ದುಡ್ಡು ಕೊಟ್ಟು ಖರೀದಿಸಲು ಸಾಧ್ಯವಿಲ್ಲ ಅದನ್ನು ನಾವು ಆಧ್ಯಾತ್ಮ ಜ್ಞಾನದ ಮುಖಾಂತರ ಸಿದ್ದಿಸಿಕೊಳ್ಳಲು ಸಾಧ್ಯ. ಕೈ ಮನಸು ಹೃದಯದ ಕಲ್ಮಶವನ್ನು ದೂರ ಮಾಡಿ ಪರಿಶುದ್ಧಗೊಳಿಸುವ ಶಕ್ತಿ ಸತ್ಸಂಗಕ್ಕಿದೆ ಲೌಕಿಕ



ಸಂಸಾರದ ಬಲೆಯಲ್ಲಿ ಬಿದ್ದಿರುವ ಮನುಷ್ಯ ಪ್ರಾಣಿ ಪಕ್ಷಿಗಳಂತೆ ಬದುಕು ಸಾಗಿಸುತ್ತಿದ್ದಾನೆ ಈ ಸಂಸಾರ ಸಸಾರವಾಗಬೇಕಾದರೆ ಭಕ್ತಿಯ ಸಂಸ್ಕಾರವಾಗಬೇಕು ಅಂದಾಗ ಮನುಷ್ಯ ಮಹಾತ್ಮನಾಗುತ್ತಾನೆ. ಮನುಷ್ಯ ಭವಸಾಗರವನ್ನು ದಾಟಲು ಭಾವದಲ್ಲಿ ಭಕ್ತಿಯ ಧ್ಯಾನವನ್ನು ರೂಡಿಸಿಕೊಳ್ಳಬೇಕು ಸುಖ ಹುಡುಕಿದರೆ ಸಿಗುವುದಿಲ್ಲ ಅದು ನಮ್ಮೊಳಗೆ ಇದೆ ಎಲ್ಲ ಜೀವಿಗಳಲ್ಲಿ ನರಜನ್ಮ ದೊಡ್ಡದು ಅದಕ್ಕೆ ಶ್ರೇಷ್ಠವಾದ ಬೆಲೆ ಇದೆ ಯೋಗ್ಯವಾದ ಗೌರವವಿದೆ ಅದನ್ನು ಭಗವಂತ ನಮಗೆ ಕರುಣಿಸಿದ್ದಾನೆ. ಬಂಧು ಬಾಂಧವರು ಬಿದ್ದಾಗ ಅವರನ್ನ ನಾವು ಮಾತನಾಡಿಸಲು ಹಣ್ಣು ಹಂಪಲುಗಳನ್ನು ತೆಗೆದುಕೊಂಡು ಹೋಗುತ್ತೇವೆ ಅದೇ ಬಂಧು ಬಾಂಧವರು ಬಳಿ ಇದ್ದಾಗ ಒಳ್ಳೆಯ ಒಂದೆರಡು ಮಾತುಗಳನ್ನು ಆಡುವುದಿಲ್ಲ ಇದು ನಮ್ಮ ಸ್ವಭಾವ ಹೆತ್ತ ತಂದೆ ತಾಯಿಗಳು ಜೀವಂತವಿದ್ದಾಗ ಅವರಿಗೆ ಒಂದು ತುತ್ತು ಅನ್ನ ಕೊಡಲು ಯೋಚಿಸುತ್ತೇವೆ, ಸತ್ತಾಗ ಅವರ ಭಾವಚಿತ್ರಕ್ಕೆ ದುಡ್ಡು ಕೊಟ್ಟು ಹಾರ ತಂದು ಹಾಕುತ್ತೇವೆ ಇದು ವಾಸ್ತವ ವಾತ್ಸಲ್ಯವಲ್ಲ ಅದಕ್ಕೆ ತಂದೆ ತಾಯಿಗಳ ಸೇವೆ ಬಹಳ ದೊಡ್ಡದು ಗುಡಿ ಗುಂಡಾರಗಳನ್ನು ಹುಡುಕಿ ದೇವರನ್ನ ಕಾಣುವುದಕ್ಕಿಂತ ಮನೆಯಲ್ಲಿರುವ ಹಿರಿಯರ ಸೇವೆಯನ್ನ ಮಾಡಿ ದೈವ ಭಕ್ತಿಯನ್ನ ಕಾಣಬೇಕು ಮನುಷ್ಯನಿಗೆ ಸೌಕರ್ಯಗಳು ಹೆಚ್ಚಾದಂತೆ ಮನದ ಆನಂದ ಕಡಿಮೆಯಾಗುತ್ತಿದೆ ಅದಕ್ಕೆ ನಿರಂತರವಾಗಿ ಜನರು ಸತ್ಸಂಗದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಇಂಜಿನಿಯರ್ ವಿಶ್ವನಾಥ ಬಡಿಗೇರ, ಹತ್ತಿಕುಣಿ ಸಾಹಿತಿ ವೆಂಕಟೇಶ ಕಲಕಂಭ, ಸುಭಾಷರೆಡ್ಡಿ ಪಾಟೀಲ ಬೀರನೂರ, ರವಿ ಬಡಿಗೇರ, ಬಸವರಾಜ ಬಡಿಗೇರ, ಕಲ್ಯಾಣಿ ಬಡಿಗೇರ, ವಿಶ್ವಕರ್ಮ ಜಾಗೃತಿ ಸೇವಾ ಸಮಿತಿಯ ಅಧ್ಯಕ್ಷ ವಿಶ್ವನಾಥ ಪತ್ತಾರ, ಬಿ ಇ ಓ ಕಾರ್ಯಾಲಯದ ವ್ಯವಸ್ಥಾಪಕ ಚನ್ನಾರೆಡ್ಡಿ ಪಾಟೀಲ, ಖಜಾನೆ ಇಲಾಖೆ ಅಧಿಕ್ಷಕ ಮಲ್ಲಿಕಾರ್ಜುನ ಕೊ-ಟ್ಟೆಯರ, ಹಳಗೇರಾ ಭಾಗ್ಯವಂತಿ ಹುಡ್ ವರ್ಕ್ ನ ಮಲ್ಲಿಕಾರ್ಜುನ ಬಡಿಗೇರ, ಕೆಬಿಜೆಎನ್ಎಲ್ ನೌಕರ ಸಂಘದ ಪ್ರತಿನಿಧಿ ರಮೇಶ ಪತ್ತಾರ, ಸಲಬಣ್ಣ ಗೋಡಿಹಾಳ, ಶಿಕ್ಷಕಿಯರಾದ ಕಮಲಾಬಾಯಿ ಬಡಿಗೇರ, ಪುಷ್ಪ ಸುರೇಖಾ, ಸುತಾರ ಹಾಗೂ ಚಂದ್ರಕಲಾ ಪತ್ತಾರ, ಮಲ್ಲಮ್ಮ, ಜಯಶ್ರೀ, ತಾರಾ ಪತ್ತಾರ, ಪಾರ್ವತಿ ಪತ್ತಾರ, ನಾಗರತ್ನ, ರೇಖಾ ಬಡಿಗೇರ, ರಾಜಮ್ಮ ಪತ್ತಾರ ಕೋಟಗೇರ, ಸುಜಾತ ಮುಂತಾದವರು ಉಪಸ್ಥಿತರಿದ್ದರು.



ವಡಿಗೇರ: ತಾಲೂಕಿನ ಕಾಡಂಗೇರಾ ಗ್ರಾಮದ ಕೃಷ್ಣಾ ಶಾಲೆಯಲ್ಲಿ ರಾಷ್ಟ್ರೀಯ ಜಂತು ಹುಳ ನಿವಾರಣ ದಿನದ ಅಂಗವಾಗಿ ಮಕ್ಕಳಿಗೆ ಅಲ್ಬೆಂಡಜೋಲ್ ಮಾತ್ರೆ ನುಂಗಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥ ಮಾಳಪ್ಪ ಯಾದವ ಕಾಡಂಗೇರಾ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಇದ್ದರು.

# ಸಿಂಡಿಕೇಟ್ ಸದಸ್ಯ ಚಂದ್ರಶೇಖರ್ ಲಿಂಗದಳ್ಳಿ ಅವರಿಗೆ ಮನವಿ ಸಲ್ಲಿಕೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಯೋಗ ವಿಜ್ಞಾನ ವಿಭಾಗದಲ್ಲಿ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಪಿಎಚ್ಡಿ ಪದವಿ ಪಡೆದ ನಿರುದ್ಯೋಗಿಗಳ ಪರವಾಗಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ ಯೋಗ ವಿಜ್ಞಾನ ಕೋರ್ಸ್ ಪ್ರಾರಂಭಿಸುವಂತೆ ಸಿಂಡಿ-ಕೇಟ್ ಸದಸ್ಯರಾದ ಚಂದ್ರಶೇಖರ್ ಲಿಂಗದಳ್ಳಿ ಅವರಿಗೆ ಮನವಿ ಸಲ್ಲಿಕೆ ಸಲ್ಲಿಸಿದರು. ಈ ಕುರಿತು ಯೋಗ ಬಳಗದ ಯುವಕರ ಪರವಾಗಿ ಭೀಮಶಂಕರ್ ರವರು ಮಾತನಾಡಿ ಯೋಗ ವಿಜ್ಞಾನ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸುವುದರಿಂದ ಆರೋಗ್ಯ ಶಿಕ್ಷಣ ಸಂಶೋಧನೆ ಮತ್ತು ಉದ್ಯೋಗವಕಾಶಗಳನ್ನು ಸೃಷ್ಟಿಸಲು ಸಹಕಾರಿಯಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಲಾಗುತ್ತದೆ ಎಂದು ತಿಳಿಸಿದರು.

ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವು ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ವಿಶ್ವವಿದ್ಯಾಲಯವಾಗಿದ್ದು, ಈ ವಿಶ್ವವಿದ್ಯಾಲಯದಲ್ಲಿ ಯೋಗ ವಿಜ್ಞಾನ ಸ್ನಾತಕೋತ್ತರ ವಿಭಾಗ ತೆರೆಯುವುದು ಅತ್ಯಂತ ಅವಶ್ಯಕವಾಗಿದೆ. ಯಾಕೆ-ಂದರೆ ಭಾರತೀಯ ಋಷಿಮುನಿಗಳ ಅಧ್ಯಯನದಿಂದ ಮತ್ತು ಅವರ ಪರಿಶ್ರಮದಿಂದ ಯೋಗ ಎನ್ನುವ ವಿಷಯ ಕಂಡುಹಿಡಿಯಲಾಗಿದ್ದು. ಪ್ರಪಂಚದಲ್ಲಿ ಯೋಗ ಕಂಡುಹಿಡಿದವರು ಭಾರತೀಯರು ಎನ್ನುವ ಇತಿಹಾಸವಿದೆ. ಮತ್ತು ಯೋಗ ವಿಷಯವೂ ಅಂತರಾಷ್ಟ್ರೀಯ ಮಟ್ಟದ ವಿಷಯವಾಗಿ ಹೊರ ರಾಷ್ಟ್ರಗಳಲ್ಲಿ ಅತ್ಯಂತ ಬೇಡಿಕೆ-ಯ ವಿಷಯವಾಗಿದ್ದು, ನಮ್ಮ ವಿಶ್ವವಿದ್ಯಾಲಯದಲ್ಲಿ ಯೋಗ ವಿಜ್ಞಾನ ಅಧ್ಯಯನ ಮಾಡಲು ಕೋರ್ಸ್ ಇರುವುದಿಲ್ಲ. ಈ ವಿಷಯದ ಅಧ್ಯಯನಕ್ಕಾಗಿ ದೂರದ ಬೆಂಗಳೂರು ಮಂಗಳೂರು ಮತ್ತು ಧಾರವಾಡ ಗಳಂತಹ ನಗರಗಳಿಗೆ ವಲಸೆ ಹೋಗಬೇಕಾಗಿದೆ. ಅದನ್ನು ತಪ್ಪಿಸಲು ಶ್ರೀ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ ಯೋಗ ವಿಜ್ಞಾನ ಕೋರ್ಸ್ ಪ್ರಾರಂಭಿಸಿದಾಗ ವಿದ್ಯಾರ್ಥಿಗಳು ವಲಸೆ ಹೋಗುವುದನ್ನು ನಿಲ್ಲಿಸಿ ಈ ಕಡೆ ಬರುತ್ತಾರೆ. ಯೋಗ ವಿಜ್ಞಾನ ವಿಷಯ ಪ್ರಾರಂಭಿಸುವುದರಿಂದ ಆರೋಗ್ಯ ಮತ್ತು ಸಮತೋಲಿನ ಜೀವನಕ್ಕೆ ಸಹಕಾರಿಯಾಗುತ್ತದೆ, ವೈಜ್ಞಾನಿಕ ಆಧಾರಿತ ಅಧ್ಯಯನಕ್ಕೂ ಸಹಕಾರಿ, ಯೋಗ ಶಿಕ್ಷಕರು, ಯೋಗ ಥೆರಪಿಸ್ಟ್, ವೆಲ್ ನೇಸ್ ಟ್ರೈನರ್ ಗಳು, ಕೌನ್ಸಿಲರ್ ಗಳು ಎಂಬ ವೃತ್ತಿಪರ ವಿದ್ಯಾರ್ಥಿಗಳಿಗೆ ಉದ್ಯೋಗದ ಅವಕಾಶಗಳು ಸಿಗುತ್ತವೆ,

ಯೋಗ ಪ್ರಾಚೀನ ತತ್ವಗಳ ಸಂಶೋಧನೆಗೆ ಉತ್ತೇಜನ ನೀಡಿದಂತಾಗುತ್ತದೆ, ಭಾರತೀಯ ಯೋಗಪ ಪರಂಪರೆಯನ್ನು ಕಾಪಾಡಲು ಸಹಕಾರಿಯಾಗುತ್ತದೆ, ಯೋಗದ ಮೂಲಕ ಗ್ರಾಮೀಣ ಹಾಗೂ ನಗರ ಸಮುದಾಯಗಳಲ್ಲಿ ಮಾನಸಿಕ ಒತ್ತಡ ಜೀವನ ಶೈಲಿ ಜನ್ಯ ರೋಗಗಳು(ಮಧುಮೇಹ ರಕ್ತದೊತ್ತಡ ಅತಿಬಾರ) ಮುಂತಾದವುಗಳು ಕಡಿಮೆ ಸಾಮಾಜಿಕ ಆರೋಗ್ಯ ಸೇವೆಗೆ ಸಹಕಾರಿಯಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಭೀಮರಾಯ, ಹೊನ್ನಪ್ಪ ನಾಟೆಕಾರ್ , ಜಟ್ಟೆಪ್ಪ, ಅನಿಲ ಕುಮಾರ, ಯಲ್ಲಾಲಿಂಗ, ಸಿದ್ದಯ್ಯ, ಮೌನೇಶ್ ಹಾಗು ಮಲ್ಲಿಕಾರ್ಜುನ ಮಳಿಕೇರಿ, ಮಲ್ಲಪ್ಪ ರೋಜಾ ಮಲ್ಲಿಕಾರ್ಜುನ್ ಕಟ್ಟಿಮನಿ ಉಪಸ್ಥಿತರಿದ್ದರು.

**ಶಾಲಾ ವಾರ್ಷಿಕೋತ್ಸವ ಗುರುವಂದನ ಸಂಭ್ರಮ:**

# 8ನೇ ತರಗತಿ ವಿದ್ಯಾರ್ಥಿಗಳಿಗೆ ಭಾವನಾತ್ಮಕ ಬೀಳ್ಕೊಡುಗೆ




• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್:**

ಗುರುಮಠಕಲ್: ತಾಲೂಕಿನ ಕೇಶ್ವಾರ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2025-26ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಶನಿವಾರ ಅದ್ದೂರಿಯಾಗಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಭಾವನಾತ್ಮಕ ಹಾಗೂ ಗೌರವಪೂರ್ಣ ಬೀಳ್ಕೊಡುಗೆ ನೀಡಲಾಯಿತು.

1960ರಿಂದ ಇಂದಿನವರೆಗೆ ಶಾಲೆಯಲ್ಲಿ ಸೇವೆ ಸಲ್ಲಿಸಿದ 33 ಮಂದಿ ಶಿಕ್ಷಕರಿಗೆ ವಿಶೇಷವಾಗಿ ಸನ್ಮಾನಿಸಿ ಗೌರವ ಸಲ್ಲಿಸಲಾಯಿತು. ಗಡಿ ಭಾಗದಲ್ಲಿ ತೆಲುಗಿನ ಪ್ರಭಾವ ಹೆಚ್ಚಾಗಿದ್ದರೂ ಶಾಲೆಯ ಆರಂಭದಿಂದಲೇ ಕನ್ನಡ ಭಾಷೆ ಬಲಪಡಿಸಲು ಶ್ರಮಿಸಿದ ಶಿಕ್ಷಕರ ಸೇವೆಯನ್ನು ಸ್ಮರಿಸಿ ಪುಷ್ಪವೃಷ್ಠಿ ಮಾಡಲಾಯಿತು.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಖಾಸಮಠದ ಶಾಂತವೀರ ಗುರುಮುರುಘ ರಾಜೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಕ್ಕರೆ ಶಾಖೆ-ಯ ಆಯುಕ್ತ ಗೋವಿಂದರೆಡ್ಡಿ, ಚಂದ್ರಶೇಖರರೆಡ್ಡಿ ನಡುಮನಿ ಹಾಗೂ ಮುಖ್ಯಗುರು ಮೈಮುದಾ ಬೇಗಂ ಸೇರಿದಂತೆ ಗಣ್ಯರು ವೇದಿಕೆ ಅಲಂಕರಿಸಿದರು. ಸಸಿಗೆ ನೀರೆ-ರೆದು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿಗಳು ಗಾಯನ, ನೃತ್ಯ ಹಾಗೂ ಬಂಜಾರ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಅತಿಥಿಗಳು ಹಾಗೂ



ಪ್ರೇಕ್ಷಕರ ಮನರಂಜನೆ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಿಕ್ಷಕರು ವಿದ್ಯಾರ್ಥಿಗಳು ಶಿಸ್ತು, ಪರಿಶ್ರಮ ಮತ್ತು ಸಾಧನೆಯ ಮೂಲಕ ಮುಂದಿನ ವಿದ್ಯಾಭ್ಯಾಸದಲ್ಲಿ ಯಶಸ್ಸು ಸಾಧಿಸಬೇಕೆಂದು ಹಾರೈಸಿದರು.

8ನೇ ತರಗತಿ ವಿದ್ಯಾರ್ಥಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ಕೆಲ ವಿದ್ಯಾರ್ಥಿಗಳು ತಮ್ಮ ಶಾಲಾ ಅನುಭವಗಳನ್ನು ಹಂಚಿಕೊಂಡು ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು. ಶಿಕ್ಷಕರು ಹಾಗೂ ಪೋಷಕರ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮ ಭಾವುಕ ಕ್ಷಣಗಳಿಗೆ ಸಾಕ್ಷಿಯಾಯಿತು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ, ಹಳೆಯ ವಿದ್ಯಾರ್ಥಿಗಳು, ಗ್ರಾಮದ ಗಣ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಸ್ವಚ್ಛ ಬಳ್ಳಾರಿಗೆ ಮ್ಯಾರಾಥಾನ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿಯನ್ನು ಸ್ವಚ್ಛಗೊಳಿಸುವ ಸಂಕಲ್ಪ ಕೇವಲ ಮಾತಿಗೆ ಸೀಮಿತವಾಗಬಾರದು. ಅದು ನಿತ್ಯದ ಅಭ್ಯಾಸವಾಗಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಮಹಾನಗರ ಪಾಲಿಕೆಯಿಂದ 2025-26 ನೇ ಸಾಲಿಗೆ ನಮ್ಮ ಬಳ್ಳಾರಿ-ಸ್ವಚ್ಛ ಬಳ್ಳಾರಿ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಮ್ಯಾರಾಥಾನ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾರ್ವಜನಿಕರು ಶಿಸ್ತುಬದ್ಧ ಜೀವನಶೈಲಿ ಅಳವಡಿಸಿಕೊಂಡಾಗ



ಮಾತ್ರ ಸ್ವಚ್ಛ ಭಾರತ್ ಮಿಷನ್ ಗುರಿ ತಲುಪಲು ಸಾಧ್ಯ. ಬಹಿರ್ದೆಸೆ ಮುಕ್ತ ಭಾರತದ ಜೊತೆಗೆ ಸಂಪೂರ್ಣ ಸ್ವಚ್ಛ ಭಾರತದ ಗುರಿ ತಲುಪಲು ನಾವೆಲ್ಲರೂ ಕೈಜೋಡಿಸೋಣ ಎಂದು ಕರೆ ನೀಡಿದರು.

ಮ್ಯಾರಾಥಾನ್‌ನಲ್ಲಿ ವೃತ್ತಿಪರ ಓಟಗಾರರು ಮಾತ್ರವಲ್ಲದೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತೋಷದ ವಿಷಯವಾಗಿದೆ ಎಂದರು.

ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಮಾತನಾಡಿ, ನಗರದ 39 ವಾರ್ಡ್‌ಗಳಲ್ಲಿ ಪೂರ್ಣ ಪ್ರಮಾಣದ ಸ್ವಚ್ಛತೆ ಕಾಪಾಡಲು ಪಾಲಿಕೆಯ ಪ್ರಯತ್ನದ ಜೊತೆಗೆ ಜನರ ಸಹ ಭಾಗಿತ್ವವೂ ಮುಖ್ಯ ಎಂದರು. ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿಯೇ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಪಾಲಿಕೆಯ ವಾಹನಗಳಿಗೆ ನೀಡಬೇಕು. ಸಾರ್ವಜನಿಕರ ಬೆಂಬಲವಿಲ್ಲದೆ ಇಡೀ ನಗರವನ್ನು ಶುಚಿಯಾಗಿಡುವುದು ಅಸಾಧ್ಯ ಎಂದು ತಿಳಿಸಿದರು.

ಮ್ಯಾರಾಥಾನ್ ಮಾರ್ಗ:

ನಮ್ಮ ಬಳ್ಳಾರಿ-ಸ್ವಚ್ಛ ಬಳ್ಳಾರಿ ಅಂಗವಾಗಿ ನಗರದ ಮುನಿಸಿಪಲ್ ಕಾಲೇಜು ಮೈದಾನದಿಂದ ಆರಂಭವಾದ ಓಟವು ಗಡಿಗಿ ಚೆನ್ನಪ್ಪ ವೃತ್ತ, ಎಚ್.ಆರ್.ಗವಿಯಪ್ಪ ವೃತ್ತ, ವಾಲ್ಮೀಕಿ ವೃತ್ತ (ಎಸ್.ಪಿ ವೃತ್ತ) ಮತ್ತು ದುರ್ಗಮ್ಮ ದೇವಸ್ಥಾನದ ಮಾರ್ಗವಾಗಿ ಸಾಗಿ ಮತ್ತೆ ಮುನಿಸಿಪಲ್ ಮೈದಾನದಲ್ಲಿ ಅಂತ್ಯಗೊಂಡಿತು.

ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ-ಆನಂದ್, ಪ್ರಶಾಂತ್-ದ್ವಿತೀಯ, ತೃತೀಯ ಸ್ಥಾನ ಶಫಿ ಪಡೆದುಕೊಂಡರು.

ಮಹಿಳೆಯರ ವಿಭಾಗದಲ್ಲಿ ಸರಳಾದೇವಿ ಕಾಲೇಜಿನ ಸಂಧ್ಯ-ಪ್ರಥಮ, ಬಿಎಂಸಿಆರ್ಸಿ ನರ್ಸಿಂಗ್ ಕಾಲೇಜಿನ ಪವಿತ್ರ-ದ್ವಿತೀಯ, ಸಂಗೀತ ತೃತೀಯ ಸ್ಥಾನ ಪಡೆದರು.

ಯುವಕರ ವಿಭಾಗದಲ್ಲಿ ವಾರ್ಡ್ಲಾ ಕಾಲೇಜಿನ ಪ್ರಜ್ವಲ್ ಪ್ರಥಮ, ಮನು ದ್ವಿತೀಯ, ಲೋಕೇಶ್ ತೃತೀಯ ಸ್ಥಾನ ಪಡೆದರೆ, ಬಾಲಕಿಯರ ವಿಭಾಗದಲ್ಲಿ ನಂದಿ ಶಾಲೆಯ ಸಿರೀಶಾ-ಪ್ರಥಮ, ವೈಷ್ಣವಿ-ದ್ವಿತೀಯ,

ತೃತೀಯ-ನಿಧಿ, ಸ್ಥಾನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಸ್ವಚ್ಛತೆ ಅಂಗವಾಗಿ ಹಮ್ಮಿಕೊಂಡಿದ್ದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ, ಪ್ರಮಾಣ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್, ಜಿಲ್ಲಾ ಖಾಸಗಿ ಶಾಲೆಗಳ ಸಂಘದ ಅಧ್ಯಕ್ಷ ಮರಿಸ್ವಾಮಿ ರೆಡ್ಡಿ, ಪಾಲಿಕೆ ಸದಸ್ಯರಾದ ವಿವೇಕ್, ರಾಜೇಶ್ವರಿ ಸುಬ್ಬರಾಯುಡು,

ಸುರೇಖಾ ಮಲ್ಲನಗೌಡ, ಕುಬೇರಾ, ಪರಿಸರ ಕಾರ್ಯಪಾಲಕ ಅಭಿಯಂತರ ಮುನಾಫ್ ಪಟೇಲ್ ಹಾಗೂ ಪಾಲಿಕೆ ಸಿಬ್ಬಂದಿ, ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಹಂಪಿಯ ಸ್ಮಾರಕಗಳಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಪ್ರತಿಧ್ವನಿ



• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ:**

ಹಂಪಿಯ ಆನೆಲಾಯ ಅಥವಾ ಕಮಲ್ ಮಹಲ್‌ನಂತಹ ಬೃಹತ್ ಸ್ಮಾರಕಗಳ ಮೇಲೆ ಬೀಳುವ ಬೆಳಕಿನ ಆಟ ಮತ್ತು ಹಿನ್ನೆಲೆಯಲ್ಲಿ ಕೇಳಿಬರುವ ಗಂಭೀರ ಧ್ವನಿ ಕೇಳುಗರ ನೋಡುಗರ ಮೈ ಪುಳಕಿಸುವಂತಿತ್ತು.

ಹಂಪಿ ಉತ್ಸವದಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ಕೇಂದ್ರ ಸಂವಹನ ಇಲಾಖೆ, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಹಕ್ಕಬುಕ್ಕ ವೇದಿಕೆಯಲ್ಲಿ 'ಧ್ವನಿ ಮತ್ತು ಬೆಳಕು' ಆಯೋಜಿಸಲಾಗಿತ್ತು.

ಹಂಪಿಯ ಅವಶೇಷ, ಆನೆ ಸಾಲು ಸಮುಚ್ಚಯ ಸೇರಿದಂತೆ 10 ಕ್ಕೂ ಅಧಿಕ ರಂಗ ವೇದಿಕೆಗಳಲ್ಲಿ ಅನಾವರಣಗೊಂಡಿತು. ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಆಕರ್ಷಕ ನೃತ್ಯ, ರೋಮಾಂಚನಕಾರಿ ಯುದ್ಧ ಸನ್ನಿವೇಶಗಳು ಇಂಪಾದ ಸಂಗೀತ, ಬಗೆ ಬಗೆಯ ಬಣ್ಣದ ಉಡುಗೆ ತೊಡುಗೆ, ಇಂಪಾದ ಸಾಹಿತ್ಯ ಕಣ್ಣು ಕೋರೈಸುವ ಬೆಳಕು ಹೀಗೆ ಅನೇಕ ವಿಶೇಷತೆಗಳಿಂದ ಮೂಡಿದ ಈ ಕಾರ್ಯಕ್ರಮ ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿತು. ಧ್ವನಿ ಮತ್ತು ಬೆಳಕು ಕಾರ್ಯಕ್ರಮದಲ್ಲಿ 110 ಜನ ಸ್ಥಳೀಯ ಕಲಾವಿದರು ಹಾಗೂ ಬೆಂಗಳೂರು, ದೆಹಲಿ, ಪುಣೆ ಸೇರಿದಂತೆ ಹಲವು ತಂಡಗಳಿಂದ ವಿಜಯನಗರ ಗತವೈಭವ ಮರು ಸೃಷ್ಟಿಸಿದರು. ಭಾರತೀಯ ಶಾಸ್ತ್ರೀಯ ಭರತ ನಾಟ್ಯ ಪ್ರಮುಖ ಆಕರ್ಷಣೀಯವಾಗಿತ್ತು. ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಇದು ಕೇವಲ ಒಂದು ಮನೋರಂಜನಾ ಪ್ರದರ್ಶನವಲ್ಲ, ಶತಮಾನಗಳ ಹಿಂದೆ ವೈಭವದಿಂದ ಆಡಳಿತ ನಡೆಸಿದ ವಿಜಯನಗರ ಸಾಮ್ರಾಜ್ಯದ ಅರಸರ ಶೌರ್ಯ ಪರಾಕ್ರಮ, ವಿಜಯನಗರ ಸಾಮ್ರಾಜ್ಯದ ಏಳು-ಬೀಳುಗಳನ್ನು ಜನಸಾಮಾನ್ಯರಿಗೆ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸುವುದು ಕಾರ್ಯಕ್ರಮದ ಉದ್ದೇಶ.

ಈ ಧ್ವನಿ ಮತ್ತು ಬೆಳಕಿನ ಕಾರ್ಯಕ್ರದಲ್ಲಿ ನಿರ್ಜೀವವಾಗಿ ನಿಂತಿರುವ ಕಲ್ಲಿನ ಸ್ಮಾರಕಗಳಿಗೆ ಅತ್ಯಾಧುನಿಕ ಬೆಳಕಿನ ವಿನ್ಯಾಸ ಮತ್ತು ಧ್ವನಿ ಮುದ್ರಿಕೆಗಳನ್ನು ಅಳವಡಿಸುವ ಮೂಲಕ ಜೀವಂತಿಕೆಯನ್ನು ಸ್ಮಾರಕಗಳಿಗೆ ಜೀವ ತುಂಬಿದ್ದು ನೋಡುಗರ ಮೈ ನವಿರೇಳಿಸುವಂತಿತ್ತು. ಇದರಿಂದ ಯುವ ಪೀಳಿಗೆಗೆ ನಮ್ಮ ನಾಡಿನ ವೀರ ಪರಂಪರೆ, ಕಲೆ, ಮತ್ತು ವಾಸ್ತುಶಿಲ್ಪದ ಬಗೆಗಿನ ಗೌರವ ಹಿರಿಮೆ ಹೆಚ್ಚಿಸುವುದರ ಜತೆಗೆ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಸ್ಮಾರಕಗಳ ಪ್ರಾಮುಖ್ಯತೆಯನ್ನು ಸಾರುತ್ತದೆ. ಜನರು ಈ ಐತಿಹಾಸಿಕ ತಾಣಗಳನ್ನು ಗೌರವಿಸಲು ಮತ್ತು ಸಂರಕ್ಷಿಸಲು ಪ್ರೇರಿತರಾಗಳು ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಸಾಕ್ಷಿಯಾಯಿತು. ವಿಜಯನಗರ ಸಾಮ್ರಾಜ್ಯದ ಆಡಳಿತ ಗತ ವೈಭವವನ್ನು ಪುಸ್ತಕಗಳಲ್ಲಿ ಓದಿ ತಿಳಿದುಕೊಳ್ಳುವ ಇತಿಹಾಸಕ್ಕಿಂತ, ಕಣ್ಣೆದುರು ದೃಶ್ಯರೂಪದಲ್ಲಿ ಕಾಣುವ ಇತಿಹಾಸ ವಿದ್ಯಾರ್ಥಿಗಳ, ಸಾರ್ವಜನಿಕರು ವಿಜಯನಗರ ಸಾಮ್ರಾಜ್ಯದ ವೈಭವ, ಸಂಸ್ಕೃತಿಯನ್ನು ಮತ್ತಷ್ಟು ಶ್ರೀಮಂತಗೊಳಿಸಲು ಸಹಕಾರಿಯಾಗಲಿದೆ. ಹಂಪಿಯ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ನೀಡಿ, ದೇಶ-ವಿದೇಶದ ಪ್ರವಾಸಿಗರನ್ನು ರಾತ್ರಿಯ ಸಮಯದಲ್ಲೂ ಹಂಪಿಯ ಸೌಂದರ್ಯ ಸವಿಯುವಂತೆ ಮಾಡಿದ್ದು, ವರ್ಣನೆಗೆ ನಿಲುಕದಾಗಿದೆ. ಈ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಫೆಬ್ರವರಿ 19ವರೆಗೆ ಹಂಪಿಯ ಗಜಶಾಲೆ ಆವರಣದಲ್ಲಿ ಪ್ರದರ್ಶನಗೊಳ್ಳಲಿದೆ. ಮೈಸೂರಿನ ನೃತ್ಯ ಸಂಯೋಜಕಿ ಡಾ.ಶೀಲಾ ಶ್ರೀಧರ, ನವದೆಹಲಿ ಸಿ.ಬಿ.ಸಿ. ಉಪನಿರ್ದೇಶಕಿ, ಡಾ. ಸಂತೋಷ ಆಶಿಶ್, ಕೊಪ್ಪಳದ ಡಯಟ್ನ ಹಿರಿಯ ಉಪನ್ಯಾಸಕ ಎಲ್. ಡಿ.ಜೋಷಿ, ಬೆಂಗಳೂರಿನ ಸಿಬಿಸಿಯ ನಿರ್ದೇಶಕ ಜಿ.ಜಯಕುಮಾರ, ಸಹಾಯಕ ವಿ.ಗಂಗಾಧರ ಇದ್ದರು.

### ವಿಶ್ವವಿಖ್ಯಾತ ಹಂಪಿ ಉತ್ಸವ 2026 ಉದ್ಘಾಟಿಸಿದ ಸಿಎಂ

# ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲು ಸಾಧ್ಯವಿಲ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ:**

2026 ರಿಂದಲೇ ಪ್ರತಿ ವರ್ಷದ ನವೆಂಬರ್ 3, 4, 5 ರಂದು ಹಂಪಿ ಉತ್ಸವದ ಆಯೋಜಿಸುವುದಾಗಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ವಿಜಯನಗರ ಜಿಲ್ಲೆಯಲ್ಲಿ ಹಂಪಿ ಉತ್ಸವ 2026 ನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರ ಹಂಪಿ ಉತ್ಸವ 2026 ವನ್ನು ವಿಜೃಂಭಣೆಯಿಂದ ಆಚರಿಸುತ್ತಿದೆ. ಮಾಜಿ ಸಚಿವ ದಿವಂಗತ ಎಂ ಪಿ ಪ್ರಕಾಶ್ ಅವರು ಹಿಂದೆ ಕನ್ನಡ ಮತ್ತು ಸಂಸ್ಕೃತಿಯ ಸಚಿವರಾಗಿದ್ದ ಸಂದರ್ಭದಲ್ಲಿ , ಮೈಸೂರು ದಸರಾ ಉತ್ಸವದ ವಿಜೃಂಭಣೆಯನ್ನು ಮನಗಂಡು, ಇದೇ ರೀತಿಯ ಉತ್ಸವವನ್ನು ಹಂಪಿಯಲ್ಲಿಯೂ ನೆರವೇರಿಸಬೇಕೆಂದು ಆಶಿಸಿದ್ದರು. ಎಂ ಪಿ ಪ್ರಕಾಶ್ ಅವರು, ಕನ್ನಡ ನಾಡು ನುಡಿ, ಸಾಹಿತ್ಯಗಳಲ್ಲಿ ಅಪಾರ ಆಸಕ್ತಿ ವಹಿಸಿದ್ದರು. ಈ ರೀತಿಯ ಅದ್ದೂರಿ ಹಂಪಿ ಉತ್ಸವದ ಆಚರಣೆಗೆ ಮೂಲಕಾರಣ ಎಂಪಿ ಪ್ರಕಾಶ್ ಅವರು. ಅವರೊಬ್ಬ ಅಪರೂಪದ ವ್ಯಕ್ತಿ ಎಂದರು.

**ಕನ್ನಡ ನಾಡು ನುಡಿಗೆ ಸರ್ಕಾರದ ಪ್ರೋತ್ಸಾಹ**

ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಸಂಪತ್ಭರಿತವಾಗಿತ್ತು. ನಮ್ಮ ಸರ್ಕಾರ ಕೂಡ ಸಾಹಿತ್ಯ ಸಂಸ್ಕೃತಿ ಕಲೆ ಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ವಿಜಯನಗರ ಕಾಲದಲ್ಲಿ ಸಂಪ್ಭರಿತವಾದ ಹಂಪಿಯ ಹಿರಿಮೆಯನ್ನು ಹಂಪಿ ಉತ್ಸವದಿಂದ ತಿಳಿಯಬಹುದಾಗಿದೆ. ವಿದೇಶಿ



ಪ್ರವಾಸಿಗ ಅಬ್ದುಲ್ ರಜಾಕ್ , ವಿಜಯನಗರ ಶ್ರೀಮಂತವಾದ ಸ್ಥಳವಾಗಿತ್ತುಎಂದು ಉಲ್ಲೇಖಿಸಿದ್ದನ್ನು ಮುಖ್ಯಮಂತ್ರಿಗಳು ವಿವರಿಸಿದರು.

**ಅಸಮಾನತೆ ನಿವಾರಣೆಯಿಂದ ಸಮಸಮಾಜ ನಿರ್ಮಿಸಲು ಸಾಧ್ಯ***

ಸಮಾಜದಲ್ಲಿ ಬಡವ ಶ್ರೀಮಂತ, ಉತ್ತಮ ಮತ್ತು ಕೆಳ ಜಾತಿಗಳೆಂಬ ಬೇಧವಿದೆ. ಡಾ.ಬಿ.ಆರ್.ಅಂಬೇಡ್ಕರ್ ರವರು ಸಂವಿಧಾನ ರಚಿಸದಿದ್ದರೆ, ಸಮಾನ ಅವಕಾಶಗಳು ದೊರೆಯಲು ಸಾಧ್ಯವಾಗುತ್ತಿರಲಿಲ್ಲ. ಸಮಾಜದ ಅಸಮಾನತೆಯನ್ನು ತೊಡೆದುಹಾಕಿದರೆ ಸಮಸಮಾಜ ನಿರ್ಮಾಣ ಸಾಧ್ಯ. 2013 ರಲ್ಲಿ ಮತ್ತು 2023 ರಲ್ಲಿ ಮುಖ್ಯಮಂತ್ರಿಯಾಗಿ ನಾನು ತಂದಿರುವ ಕಾರ್ಯಕ್ರಮಗಳು ಅಸಮಾನತೆಯ ನಿವಾರಣೆಗೆ ತಂದವುಗಳಾಗಿವೆ. ಸಮಸಮಾಜ ನಿರ್ಮಿಸಿದಾಗ ಮಾತ್ರ ದುರ್ಬಲವರ್ಗದವರೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದರು.

**ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಆರ್ಥಿಕ ಶಕ್ತಿ**

ನಮ್ಮ ಸರ್ಕಾರ ಅನೇಕ ಭಾಗ್ಯ ಯೋಜನೆಗಳನ್ನು ನೀಡಿದ್ದು, 2023 ರಿಂದಲೂ ಗ್ಯಾರಂಟಿ ಯೋಜನೆಗಳನ್ನು ನೀಡಿ, ಅಸಮಾನತೆಯನ್ನು ನಿವಾರಿಸುವ ಉದ್ದೇಶ ಹೊಂದಿದೆ. ಜನರಿಗೆ ಆರ್ಥಿಕ, ಸಾಮಾಜಿಕ ಶಕ್ತಿಯನ್ನು ಸಾಧ್ಯವಾಗಿಸದೇ ಇದ್ದರೆ, ಜಾತಿ ವ್ಯವಸ್ಥೆ ಹೋಗಲಾಡಿಸಬಹುದು. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಪ್ರತಿ ಕುಟುಂಬಕ್ಕೆ ವಾರ್ಷಿಕವಾಗಿ ಸುಮಾರು 60 ಸಾವಿರ ರೂ.ಗಳ ಆರ್ಥಿಕ ಬಲವನ್ನು ತುಂಬುತ್ತಿದೆ. ಗ್ಯಾರಂಟಿ ಯೋಜನೆಗಳು ಜನರಿಗೆ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತಿದೆ. ಜಾತಿವ್ಯವಸ್ಥೆ ಇಲ್ಲವಾಗಲು ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಸ್ವಾತಂತ್ರ್ಯ ಬರಬೇಕು ಎಂದರು.

**ನಾಡು ನುಡಿ ಸಂಸ್ಕೃತಿಗಳ ರಕ್ಷಣೆಗೆ ಸರ್ಕಾರ ಬದ್ಧ**

ಸರ್ಕಾರ ಆಚರಿಸುವ ಚಾಲುಕ್ಯ ಉತ್ಸವ, ಹಂಪಿ ಉತ್ಸವ, ಕಿತ್ತೂರು ಉತ್ಸವ, ಆನೆಗುಂದಿ ಉತ್ಸವ, ಬನವಾಸಿ, ಮೈಸೂರು ದಸರಾ, ಕರಾವಳಿ ಉತ್ಸವ ಗಳ ಮೂಲಕ ನಾಡಿನ ಸಾಹಿತ್ಯ, ಕಲೆ, ಸಂಗೀತ ಪರಂಪರೆಗಳನ್ನು ಸಂರಕ್ಷಿಸುವ ದಿಸೆಯಲ್ಲಿ ಮುಖ್ಯವಾಗಿದೆ. ಮುಂದಿನ ಪೀಳಿಗೆಗೆ ಕನ್ನಡದ ಶ್ರೀಮಂತ ಪರಂಪರೆ ಕೊಂಡೊಯ್ಯುವ ದಿಸೆಯಲ್ಲಿ ಸರ್ಕಾರ ಎಲ್ಲ ರೀತಿಯ ನೆರವು ನೀಡಲು ಬದ್ಧವಾಗಿದೆ ಎಂದರು.

# ಪುಲ್ವಾಮಾ ಹುತಾತ್ಮ ಸೈನಿಕರಿಗೆ ಮಾಜಿ ಅರೆ ಸೇನಾ ಸೈನಿಕರಿಂದ ಶ್ರದ್ಧಾಂಜಲಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕಳೆದ ಏಳು ವರ್ಷಗಳ ಹಿಂದೆ ಜಮ್ಮು ಕಾಶ್ಮೀರದಲ್ಲಿ ಪಾಕಿಸ್ತಾನ ಪ್ರಚೋದಿತ ಉಗ್ರಗಾಮಿಗಳಿಂದ ನಡೆದ ಕುತಂತ್ರದ ದಾಳಿಯಲ್ಲಿ ದೇಶದ ಅನೇಕ ಸೈನಿಕರು ವೀರ ಮರಣವನ್ನು ಅಪ್ಪಿರುತ್ತಾರೆ. ಅವರ ನೆನಪಿಗಾಗಿ ಇಂದು ಮಾಜಿ ಸೈನಿಕರು ಮತ್ತು ಅರೆ ಸೈನಿಕರ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಕ್ಯಾಂಡಲ್ ಮೆರವಣಿಗೆ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರುತ್ತಿದ್ದೇವೆ ಎಂದು ಮಾಜಿ ಅರೆ ಸೇನಾ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಪ್ರಹ್ಲಾದ ರೆಡ್ಡಿ ತಿಳಿಸಿದರು. ಅವರು ಇಂದು ನಗರದ ಗಡಿಗಿ ಚೆನ್ನಪ್ಪ ವೃತ್ತದಲ್ಲಿ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಸೈನಿಕರಿಗೆ ಕ್ಯಾಂಡಲ್ ಬೆಳಗುವುದರ ಮೂಲಕ ಕ್ಯಾಂಡಲ್ ಮಾರ್ಚ್ ಫಾಸ್ಟ್ ಕಾರ್ಯಕ್ರಮವನ್ನು ಆಯೋಜಿಸಿ ಮಾತನಾಡಿದರು.

ಕಾರ್ಯಕ್ರಮವನ್ನು ಕ್ಯಾಂಡಲ್ ಹಚ್ಚುವ ಮೂಲಕ ರೈತ ಸಂಘದ ಅಧ್ಯಕ್ಷರಾದ ಕರೂರು ಮಾಧವ ರೆಡ್ಡಿ ಹಾಗೂ ಮಹಾನಗರ ಪಾಲಿಕೆ ಸದಸ್ಯರಾದ ವಿಕ್ಕಿ ಮತ್ತು ಮಾಜಿ ತಹಸೀಲ್ದಾರ ಅವರು ಕ್ಯಾಂಡಲ್ ಮಾರ್ಚ್ ಫಾಸ್ಟ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಜಿ ಅರೆ ಸೇನಾ ಪಡೆಯ ಸೈನಿಕ ಈಶ್ವರ ರೆಡ್ಡಿ ಮಾತನಾಡಿ, ಇಂದು ವಿಶ್ವದಾದ್ಯಂತ ಅಂದರೆ ಏಪ್ರಿಲ್ 14ರಂದು ಪ್ರೇಮಿಗಳ ದಿನವನ್ನಾಗಿ ಯುವಕರು ಆಚರಿಸುತ್ತಿದ್ದಾರೆ ಇದರ ತದ್ವಿರುದ್ಧವಾಗಿ ನಾವು ಪುಲ್ವಾಮಾ ದಾಳಿಯನ್ನು ಖಂಡಿಸಿ ಬ್ಲಾಕ್ ಡೇ ಯನ್ನಾಗಿ ಆಚರಿಸುತ್ತಿದ್ದೇವೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ದೇಶಭಕ್ತರು ಈ ಫೆಬ್ರವರಿ 14ರಂದು ಪ್ರೇಮಿಗಳ ದಿನದ ಬದಲಾಗಿ ಸೈನಿಕರ ಆತ್ಮಕ್ಕೆ ಶಾಂತಿ ಕೋರುವ ಬ್ಲಾಕ್ ಡೇ ಯನ್ನಾಗಿ ಆಚರಿಸಲು ಸಹಕರಿಸಬೇಕೆಂದು ವಿನಂತಿಸಿದರು.

ಈ ಕ್ಯಾಂಡಲ್ ಮಾರ್ಚ್ ಫಾಸ್ಟ್ ನಲ್ಲಿ ನಗರದ ಅನೇಕ ನಾಗರಿಕರು ವಿದ್ಯಾರ್ಥಿಗಳು ಸೇರಿದಂತೆ ಹಲವಾರು ಜನ ಭಾಗವಹಿಸಿದ್ದರು.

# ಚಾಹ್ನಾ ಶ್ರೀ ಅವರು ಫಾರ್‌ಎವರ್ ಮಿಸ್ ಟೀನ್ ಕರ್ನಾಟಕ ರನ್ನರ್ ಅಪ್ ಟೈಟಲ್



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ / ಫಾರ್‌ಎವರ್ ಸ್ಟಾರ್ ಇಂಡಿಯಾದಿಂದ ಜೈಪುರದ ಜಿ ಸ್ಟುಡಿಯೋದಲ್ಲಿ ನಡೆದ ಫಾರ್‌ಎವರ್ ಯೂನಿವರ್ಸ್ ಮತ್ತು ಇಂಡಿಂ-ಯಾ ಗ್ರ್ಯಾಂಡ್ ಫೈನಾಲೆ ಸೀಸನ್ 5 ರಲ್ಲಿ ಬಳ್ಳಾರಿ, ಕರ್ನಾಟಕದ ನಿವಾಸಿ ಚಾಹ್ನಾ ಶ್ರೀ ಅವರು ಫಾರ್‌ಎವರ್ ಮಿಸ್ ಟೀನ್ ಕರ್ನಾಟಕ ರನ್ನರ್‌ಅಪ್ ತಾಜವನ್ನು ಗೆದ್ದಿದ್ದಾರೆ. ಫಾರ್‌ಎವರ್ ಸ್ಟಾರ್ ಇಂಡಿಂ-ಯಾದ ಸ್ಥಾಪಕ ರಾಜೇಶ್ ಅಗ್ರವಾಲ್ ಮತ್ತು ಡೈರೆಕ್ಟರ್ ಜಯಾ ಚೌಹಾನ್ ಅವರು ತಿಳಿಸಿದಂತೆ, ಭಾರತದ ವಿವಿಧ ರಾಜ್ಯಗಳ ವಿಜೇತರಿಗೆ ಫಾರ್‌ಎವರ್ ಯೂನಿವರ್ಸ್ ಮತ್ತು ಫಾರ್‌ಎವರ್ ಇಂಡಿಯಾ ಟೈಟಲ್‌ಗಳನ್ನು ನೀಡಲಾಗಿತ್ತು. ಚಾಹ್ನಾ ಗಾಯನದ ಜೊತೆಗೆ ಶಾಸ್ತ್ರೀಯ, ಹಿಪ್-ಹಾಪ್ ಮತ್ತು ಕೆ-ಪಾಪ್‌ನಂತಹ ನೃತ್ಯಶೈಲಿಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಚಾಹ್ನಾ ನೀನಗಾರಿಕೆ ಮತ್ತು ಸ್ಪೋರ್ಟ್ಸ್‌ನಲ್ಲೂ ಸಕ್ರಿಯವಾಗಿರುತ್ತಾರೆ. ಫಾರ್‌ಎವರ್ ಮಿಸ್ ಟೀನ್ ಕರ್ನಾಟಕ ರನ್ನರ್‌ಅಪ್ ಟೈಟಲ್ ಗೆದ್ದಿದ್ದು ಫಾರ್‌ಎವರ್ ಸ್ಟಾರ್ ಇಂಡಿಯಾಕ್ಕೆ ಧನ್ಯವಾದಗಳ ನೀಡುತ್ತಾ ಚಾಹ್ನಾ ಹೇಳಿದರು, ಇಂತಹ ಪ್ಲಾಟ್‌ಫಾರ್ಮ್‌ಗಳ ಮೂಲಕ ಜಾಗತಿಕ ಗುರುತಿನೊಂದಿಗೆ ನಮ್ಮ ಕನಸುಗಳನ್ನು ನೆರವೇರಿಸಬಹುದು.

# ಶಾಸ್ತ್ರೀಯ ಸಂಗೀತ ನಮ್ಮ ಸಂಸ್ಕೃತಿಯ ಜೀವಾಳ: ಸುರೇಶ್




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಶಾಸ್ತ್ರೀಯ ಸಂಗೀತ ನಮ್ಮ ಸಂಸ್ಕೃತಿಯ ಜೀವಾಳ. ಇದು ನಮ್ಮ ಪರಂಪರೆ, ಮೌಲ್ಯಗಳು ಮತ್ತು ಆತ್ಮ ಸಾಧನೆಯ ಪ್ರತಿಬಿಂಬವಾಗಿದೆ. ಇಂತಹ ಸಂಗೀತ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಭಾರತೀಯ ಸಂಸ್ಕೃತಿಯ ಅರಿವು ಬೆಳಸಿ, ಅವರ ಮನಸ್ಸಿನ ಶಾಂತಿ ಮತ್ತು ಶಿಸ್ತಿನ ಭಾವನೆ ಮೂಡಿಸುತ್ತವೆ". ಎಂದು ಶ್ರೀ ವಾಸವಿ ಎಜ್ಯುಕೇಷನ್ ಟ್ರಸ್ಟ್ ನ ಕಾರ್ಯದರ್ಶಿಗಳಾದ ಪಿ.ಎನ್. ಸುರೇಶ್ ರವರು ಹೇಳಿದ್ದಾರೆ.

ಶ್ರೀ ವಾಸವಿ ವಿದ್ಯಾಲಯದಲ್ಲಿ ಮಹಾಶಿವರಾತ್ರಿ ಪರ್ವದ ಅಂಗವಾಗಿ ವಿಶೇಷ ಸಾಂಸ್ಕೃತಿಕ ಹಾಗೂ ಭಕ್ತಿ ಭಾವ ಪೂರ್ಣ ಕಾರ್ಯಕ್ರಮವನ್ನು ಶ್ರೀ ವಾಸವಿ ಎಜ್ಯುಕೇಷನ್ ಟ್ರಸ್ಟ್, ಅನುಭವ ಮಂಟಪ ಮತ್ತು ಅನಂತ ಪ್ರವಾಹ ಸಹಯೋಗದಲ್ಲಿ ಶಿಸ್ತಿನಿಂದ ಮತ್ತು ಸೌಹಾರ್ದಯುತವಾಗಿ ಆಯೋಜಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ವಾಸವಿ ಮಾತೆಗೆ ಪುಷ್ಪಾರ್ಪಣೆ ನೆರವೇರಿಸುವ ಮೂಲಕ ದೈವಿಕ ವಾತಾವರಣಕ್ಕೆ ಭವ್ಯವಾಗಿ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಅಂಗವಾಗಿ ಶಾಸ್ತ್ರೀಯ ಸಂಗೀತ ಪ್ರಸ್ತುತಿಯೂ ಆಯೋಜಿಸಲಾಯಿತು. ವೀಣೆಯಲ್ಲಿ ವಿದ್ವಾನ್ ರಕ್ಷಿತಾ ರಮೇಶ್ ಮತ್ತು ಮೃದಂಗದಲ್ಲಿ ವಿದ್ವಾನ್ ಅನಿರುದ್ಧ ಭಟ್ ರವರ ಭಕ್ತಿ ರಸಪೂರ್ಣ ಹಾಗೂ ಮನಮುಟ್ಟುವ ಸಂಗೀತ ಪ್ರಸ್ತುತಿಯನ್ನು ನೀಡಿ ಸಭಿಕರನ್ನು ಮಂತ್ರ ಮುಗ್ಧರನ್ನಾಗಿ ಮಾಡಿದರು.

ಕು.ಸಿಂಚನ ಹಾಗೂ ಕು.ಅನನ್ಯ ಮಹಾಶಿವರಾತ್ರಿಯ ವೈಜ್ಞಾನಿಕ ಹಾಗೂ ಐತಿಹಾಸಿಕ ಮಹತ್ವದ ಕುರಿತು ಭಾಷಣಗಳನ್ನು ಮಾಡಿ ಕಾರ್ಯಕ್ರಮಕ್ಕೆ ವಿಶೇಷ ಅರ್ಥವನ್ನು ತುಂಬಿದರು. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಭಾರತೀಯ ಸಂಸ್ಕೃತಿಯ ಪರಂಪರೆ ಹಾಗೂ ನೈತಿಕ ಮೌಲ್ಯಗಳ ಅರಿವನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿತು.

ಕಾರ್ಯಕ್ರಮದ ಕೊನೆಯಲ್ಲಿ ಸಂಗೀತ ಕಲಾವಿದರಾದ ವಿದ್ವಾನ್ ರಕ್ಷಿತಾ ರಮೇಶ್ ಮತ್ತು ವಿದ್ವಾನ್ ಅನಿರುದ್ ಭಟ್ ರವರನ್ನು ಶಾಲಾ ಆಡಳಿತ ಮಂಡಳಿಯ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

# ಕರ್ನಾಟಕ ಪ್ರಾಂತ ರೈತ ಸಂಘ ಬಳ್ಳಾರಿ ಜಿಲ್ಲಾ ಸಮ್ಮೇಳನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಹನೀಯರೇ, ಕರ್ನಾಟಕ ಪ್ರಾಂತ ರೈತ ಸಂಘ ಅಖಿಲ ಭಾರತ ಕಿಸಾನ್ ಸಭ ಸಂಯೋಜಿತ ಸಂಘಟನೆಯಾಗಿದೆ. ದೇಶದ ರೈತರ ಪ್ರತಿಷ್ಠಿತ ಸಂಘಟನೆಯ ಬಳ್ಳಾರಿ ಜಿಲ್ಲಾ ಸಮ್ಮೇಳನ, ಐತಿಹಾಸಿಕ ಭೂ ಚಳುವಳಿ ನಡೆದ ಸಂಡೂರು ನಗರದಲ್ಲಿ ನಡೆಸಲು ಅವಕಾಶ ದೊರೆತ್ತಿದೆ. ಅಖಿಲ ಭಾರತ ಕಿಸಾನ್ ಸಭೆ (ಂಖಏಖ) ಇಂದು ನಮ್ಮ ದೇಶದ 25 ರಾಜ್ಯಗಳಲ್ಲಿ ಹರಡಿರುವ 1 ಕೋಟಿ 37 ಲಕ್ಷ ಸದಸ್ಯತ್ವವನ್ನು ಹೊಂದಿದ್ದು, ಭಾರತದ ಅತ್ಯಂತ ಹಳೆಯ, ಅತಿದೊಡ್ಡ ಮತ್ತು ಅತ್ಯಂತ ಶಕ್ತಿಶಾಲಿ ರೈತ ಸಂಘಟನೆಯಾಗಿದೆ. ಮಾರ್ಚ್ 2026ರಲ್ಲಿ 36ನೇ ರಾಷ್ಟ್ರೀಯ ಸಮ್ಮೇಳನವು ತಮಿಳುನಾಡಿಲ್ಲಿ ನಡೆ-ಯುತ್ತಿದೆ. ಹಲವು ದಶಕಗಳಿಂದ ತೀವ್ರ ಹೋರಾಟಗಳು ಮತ್ತು ತ್ಯಾಗ ಬಲಿದಾನ ಗಳ ಮೂಲಕ ನಿರ್ಮಿಸಲಾದ ಎಐಕೆಎಸ್‌ನ ಬಲಿಷ್ಠ ಘಟಕವನ್ನು ಹೊಂದಿರುವ ಹೆಗ್ಗಳಿಕೆಯನ್ನು ಹೊಂದಿರುವ ರಾಜ್ಯದಲ್ಲಿ ಇದು ನಡೆಯುತ್ತಿದೆ. ಸ್ವಾತಂತ್ರ್ಯದ ಮೊದಲು ಮತ್ತು ನಂತರ ದೇಶಾದ್ಯಂತದ ಸಾವಿರಾರು ಹುತಾತ್ಮರಿಗೆ ಮತ್ತು ಂಖಏಖ ಕೆಂಪು ಧ್ವಜವನ್ನು ಎತ್ತರದಲ್ಲಿ ಹಾರಿಸಲು ತಮ್ಮ ಜೀವನದ ಅತ್ಯುನ್ನತ ತ್ಯಾಗ ಮಾಡಿದವರಿಗೆ ನಾವು ಆಳವಾದ ಗೌರವವನ್ನು ಸಲ್ಲಿಸುತ್ತೇವೆ. ನಮ್ಮ ದಂತಕಥೆಯ ಕಿಸಾನ್ ನಾಯಕರಾದ-ಕಾಮ್ರೇಡ್ ಹರಿಕೃಷ್ಣಸಿಂಗ್ ಸುರ್ಜಿತ್, ಕೃಷ್ಣಪಿಳ್ಳೈ, ಎ ಕೆ ಗೋಪಾಲನ್, ಇಎಂಎಸ್ ನಂಬೂದಿರಿಪಾಡ್ ಕರ್ನಾಟಕದ ಮಾಜಿ ಶಾಸಕರಾದ ರಾಮಚಂದ್ರರಾಯರು, ಶ್ರೀರಾಮರೆಡ್ಡಿ ಹಾಗೂ ಚಂದ್ರಶೇಕರ ಬಾಳೆ, ಮಾರುತಿ ಮಾನ್ಪಡೆ, ಭಯ್ಯಾರೆಡ್ಡಿ ಮತ್ತು ಇತರ ಅನೇಕರ ನಾಯಕತ್ವವನ್ನು ಸ್ಮರಿಸುತ್ತ ಅವರಿಗೆ ಗೌರವವನ್ನು ಸಲ್ಲಿಸುತ್ತೇವೆ. 2022 ರ ಡಿಸೆಂಬರ್ ನಲ್ಲಿ ಕೇರಳದಲ್ಲಿ ನಡೆದ ನಮ್ಮ ಕಳೆದ ಸಮ್ಮೇಳನದ ಮೂರು ವರ್ಷಗಳ ನಂತರ ನಡೆಯಲಿದೆ. ಈ ಮೂರು ವರ್ಷಗಳು ಭಾರತದ ರೈತ ಹೋರಾಟಗಳ ಇತಿಹಾಸದಲ್ಲಿ ಅಭೂತಪೂರ್ವ ಅವಧಿಯನ್ನು ಕಂಡಿವೆ. 2020 ರ ನವೆಂಬರ್ 26 ರಿಂದ 2021 ರ ಡಿಸೆಂಬರ್ 11 ರವರೆಗೆ ದೆಹಲಿಯ ಗಡಿಗಳಲ್ಲಿ ಲಕ್ಷಾಂತರ ರೈತರ ಒಂದು ವರ್ಷದ ಹದಿನೈದು ದಿನಗಳ ಕಾಲ ನಡೆದ ಐಕ್ಯ ಹೋರಾಟದ ಐತಿಹಾಸಿಕ ಕಿರೀಟವನ್ನು ಇದು ಪಡೆದುಕೊಂಡಿತು.

ಈ ಹೋರಾಟಕ್ಕೆ ದೇಶಾದ್ಯಂತ ರೈತರು, ಕೃಷಿ ಕಾರ್ಮಿಕರು ಮತ್ತು ಕಾರ್ಮಿಕ ವರ್ಗದಿಂದ ಭಾರಿ ಒಗ್ಗಟ್ಟು ದೊರೆಯಿತು. ಇದು ನರೇಂದ್ರ ಮೋದಿಯವರ ಜನವಿರೋಧಿ, ಕಾರ್ಪೊರೇಟ್ ಪರ, ಕೋಮುವಾದಿ ಮತ್ತು ಸರ್ವಾಧಿಕಾರಿ ಬಿಜೆಪಿ-ಆರ್‌ಎಸ್‌ಎಸ್ ಸರ್ಕಾರವನ್ನು ಸಂಸತ್ತಿನಲ್ಲಿ ಮೂರು ಕರಾಳ ಕೃಷಿ ಕಾನೂನುಗಳನ್ನು ರದ್ದುಗೊಳಿಸುವಂತೆ ಮಾಡಿದ್ದು ನಿಜಕ್ಕೂ ಅದ್ಭುತ ವಿಜಯವಾಗಿತ್ತು. ವಿಜಯದ ನಂತರ ಇದು ಂಖಏಖ ನ ಎರಡನೇ ರಾಷ್ಟ್ರೀಯ ದ್ವಿತೀಯ ಸಮ್ಮೇಳನ. ಈ ಅಸಾಧಾರಣ ರೈತರ ಹೋರಾಟದ ಯಶಸ್ಸಿ ಅಮೂಲ್ಯವಾದ ಪಾತ್ರ ವಹಿಸಿದ ಸಂಯುಕ್ತ ಕಿಸಾನ್ ಮೋರ್ಚಾ




(ಖಏಒ) ನೇತೃತ್ವದ ಭಾರತದ ರೈತರು, ಕೇಂದ್ರ ಕಾರ್ಮಿಕ ಸಂಘಗಳ (ಅಖಖಿಗ) ನೇತೃತ್ವದ ಭಾರತದ ಕಾರ್ಮಿಕರು ಮತ್ತು ಉದ್ಯೋಗಿಗಳು, ಕೃಷಿ ಕಾರ್ಮಿಕರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಸಣ್ಣ ವ್ಯಾಪಾರಿಗಳು, ವೃತ್ತಿಪರರು ಮತ್ತು ಭಾರತದ ಎಲ್ಲಾ ಇತರ ವಿಭಾಗಗಳು ಮತ್ತು ವಿದೇಶದಲ್ಲಿರುವ ನಮ್ಮ ದೇಶದ ನಾಗರೀಕರ ಬೆಂಬಲ ಶ್ಲಾಘಿಸುತ್ತೇವೆ. ಮುಂದಿನ ದಿನಗಳಲ್ಲಿ ನಾವು ಎದುರಿಸಬೇಕಾದ ಮತ್ತು ಎದುರಿಸಬೇಕಾದ ರಾಜಕೀಯ ಸವಾಲುಗಳ ಬಗ್ಗೆ ನಾವು ಚರ್ಚಿಸಲು ಪ್ರಜಾಸತ್ತಾತ್ಮಕವಾಗಿ ಗ್ರಾಮ ಘಟಕಗಳಿಂದ ತಾಲೂಕ, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಸಮ್ಮೇಳನಗಳನ್ನು ನಡೆಸಲಾಗುತ್ತದೆ.


ಎಡಪಕ್ಷಗಳ ಬಾಹ್ಯ ಬೆಂಬಲದ ಯುಪಿಎ ಸರ್ಕಾರ ಕಮ್ಯುನಿಸ್ಟ್ ಪಕ್ಷಗಳ ಒತ್ತಡಕ್ಕೆ ಮಣಿದು ಅರಣ್ಯ ಹಕ್ಕು ಕಾಯ್ದೆ ಹಾಗೂ ಉದ್ಯೋಗ ಖಾತ್ರಿ ಯೋಜನೆ ಕಾಯ್ದೆಯನ್ನು ಜಾರಿಗೊಳಿಸಿತು. ಮೋದಿ ಸರ್ಕಾರ ಅರಣ್ಯ ಭೂಮಿ ಸಾಗುವಳಿ ರೈತರ ಹಾಗೂ ಕೃಷಿ ಕಾರ್ಮಿಕರ ಬದುಕನ್ನು ದುಸ್ತರಗೊಳಿಸುವ ನೀತಿಯನ್ನು ಅನುಸರಿಸುತ್ತಿದೆ. ಇಪ್ಪತ್ತು ವರ್ಷಗಳಿಂದ ಗ್ರಾಮೀಣ ಭಾರತದಲ್ಲಿ ಪ್ರಗತಿಯ ಮನ್ವಂತರಕ್ಕೆ ಕಾರಣವಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ(ಮನರೇಗಾ) ಯೋಜನೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮತ್ತು ಯಾವುದೇ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೇ ತೆಗೆದುಕೊಳ್ಳದೆ, ಸಾರ್ವಜನಿಕ ವಿಶ್ಲೇಷಣೆ ಇಲ್ಲದಂತೆ 12 ಕೋಟಿ ಗ್ರಾಮೀಣ ಕೂಲಿಕಾರರ ಬದುಕುವ ಹಕ್ಕಿನ ಕಾಯ್ದೆಯನ್ನು ಮೂರೇ ದಿನದಲ್ಲಿ ತೆಗೆದುಹಾಕಿ, ಅದರ ಮೂಲ ಉದ್ದೇಶವನ್ನೇ ಹೊಸಕಿ ಹಾಕುವ ಕೆಲಸವನ್ನು ಮಾಡಿಬಿಟ್ಟಿದ. ಉದ್ಯೋಗ ಮತ್ತು ನ್ಯಾಯಯುತ ವೇತನ ಪ್ರತಿ ಗ್ರಾಮೀಣ ಪ್ರದೇಶದ ಕೂಲಿಕಾರನ ಹಕ್ಕು ಪ್ರತಿಪಾದಿಸಿ, ಅ ಹಕ್ಕುಗಳನ್ನು ಒದಗಿಸಿಕೊಟ್ಟಿದ್ದು ಉಳಿದಿಲ್ಲ. ಬದಲಿಗೆ ಅವನ್ನು ಕೇಂದ್ರ ಸರ್ಕಾರದ ಭಿಕ್ಷೆಯನ್ನಾಗಿಸಿರುವುದು ಈ ನೂತನ ಕಾಯ್ದೆ ಮನರೇಗಾ ಯೋಜನೆಯಲ್ಲಿ ವರ್ಷದ 365 ದಿನವೂ ಕಾರ್ಮಿಕರು ಉದ್ಯೋಗ ಪಡೆಯುವ ಹಕ್ಕನ್ನು ಹೊಂದಿದ್ದರು. ಬದಲಾದ ಕಾಯ್ದೆಯು ಕಾರ್ಮಿಕರ ಉದ್ಯೋಗ ಭದ್ರತೆಯ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ವರ್ಷದ 60 ದಿನಗಳು ಉದ್ಯೋಗವನ್ನು ನಿಷೇಧಿಸಿದೆ. ಈ ಸಮಯದಲ್ಲಿ ಕಾರ್ಮಿಕರನ್ನು ತೀವ್ರ ಶೋಷಣೆಗೆ ಒಳಗಾಗುವಂತೆ ಮಾಡಲಾಗುತ್ತದೆ. ಕೆಲಸ ನಿರ್ವಹಿಸುವುದನ್ನು ಜೀವನೋಪಾಯಕ್ಕೆ ಅರ್ಹ ಮತ್ತು ನ್ಯಾಯಯುತ ಕೂಲಿಯ ವಂಚನೆಗೆ ಒಳಗಾಗುತ್ತಾರೆ. ಇಂತಹ ಒತ್ತಡದ ಪರಿಸ್ಥಿತಿಯು ಕಾರ್ಮಿಕರನ್ನು ನಗರಗಳಿಗೆ ವಲಸೆ ಹೋಗುವಂತಹ ಪರಿಸ್ಥಿತಿ ನಿರ್ಮಿಸಲಾಗಿದೆ. ಇಷ್ಟೇ ಅಲ್ಲದೆ ಕೇಂದ್ರಸರ್ಕಾರದ ಅಧಿಸೂಚನೆಯ ಹೊರಗಿರುವ ಪ್ರದೇಶದ ಜನರ ಜೀವನದ ಬಗ್ಗೆ ಯಾವ ಪ್ರಸ್ತಾಪವಿಲ್ಲ. ಮಹಾತ್ಮ ಗಾಂಧಿಯವರ ಗುಂಡಿಕ್ಕಿ ಕೊಂದ 75ನೇ ವರ್ಷದ ಈ ಸಂದರ್ಭದಲ್ಲಿ ಅವರ ಹೆಸರನ್ನು ತೆಗೆದು ಹಾಕಿ ಮೂರು ದಿನದಲ್ಲಿ ವಿಭಿ ಜಿ ರಾಮ ಜಿ ಕಾಯ್ದೆ ಜಾರಿಗೊಳಿಸಿದೆ. ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯ ಹಿಂಜರಿತದಿಂದ ಇದು ಉದ್ಯೋಗ ಖಾತ್ರಿಯಲ್ಲ ಉದ್ಯೋಗ ಕತ್ತರಿಯಾಗಿದೆ.

ಅರಣ್ಯ ಭೂಮಿ, ಬಗರು ಹುಕಂ, ಹಾಗೂ ಇನಾಂ ಭೂಮಿ ಇತ್ಯಾದಿ ಹೆಸರಿನ ಸರ್ಕಾರಿ ಭೂಮಿಗಳಲ್ಲಿ ಸಾಗುವಳಿ ಮಾಡಿ ತಮ್ಮ ಜೀವನವನ್ನು ನಡೆಸುತ್ತಿರುವ ಜಿಲ್ಲಾದ್ಯಾಂತ ಎಪ್ಪತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳು ಭೂಮಿಯ ಪಟ್ಟಕ್ಕಾಗಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಸಾಗುವಳಿದಾರರ ಮೇಲೆ ಅರಣ್ಯ ಹಾಗೂ ಸರ್ಕಾರಿ ಅಧಿಕಾರಿಗಳ ದೌರ್ಜನ್ಯಗಳು ನಿರಂತರವಾಗಿ ನಡೆ-ಯುತ್ತಿದೆ. ಸಮರ್ಪಕವಾಗಿ ಭೂ ಪಟ್ಟ ನೀಡಲು ಸಾಧ್ಯವಾಗಿಲ್ಲ. ಊಳುವ ಭೂಮಿಯನ್ನು ಕಾಯ್ದಿಟ್ಟ ಅರಣ್ಯ, ನಡುತೋಪು ಕರಾಪು, ರಾಳಗುಡ್ಡ, ಗೋಮಾಳ, ಗಯಾಳು, ಕೆರೆ ಇತ್ಯಾದಿ ಹೆಸರಿನಲ್ಲಿ ಭೂಮಿಯನ್ನು ಪರಿವರ್ತಿಸಿ ಸಾಗುವಳಿ ರೈತರಿಗೆ ಪಟ್ಟ ದೊರೆಯದಂತೆ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಮತ್ತೊಂದೆಡೆ ಈ ಭೂಮಿಗಳನ್ನು ಕೈಗಾರಿಕೋದ್ಯಮಗಳಿಗೆ ಶ್ರೀಮಂತರಿಗೆ ಮತ್ತು ರಾಜಕಾರಣಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ. ಇನ್ನೂ ಪಟ್ಟ ಹೊಂದಿದ ಭೂ ಸಾಗವಾಳಿದಾರರಿಗೆ ಕಿರುಕುಳಗಳು ತಪ್ಪಿಲ್ಲ. ಸರ್ವೇ ಸೆಟ್ಲ್ಮೆಂಟ್ ಗಳಾಗದೆ ಹಲವಡೆ ಸಾಗುವಳಿಯ ಭೂಮಿ ಯಾರೋ ಹೆಸರಿನಲ್ಲಿದೆ. ಅನಕ್ಷರಸ್ತ ಕುಟುಂಬಗಳು ಪೋತಿ, ಪೋಡಿಗಳು ಮಾಡಿಕೊಳ್ಳದೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಹೀಗೆ ಹತ್ತು ಹಲವು ಭೂದಾಖಲೆಗಳ ಸಮಸ್ಯೆಗಳಿಂದ ರೈತರು ಪರದಾಡುತ್ತಿದ್ದಾರೆ. ಸಮಸ್ಯೆಗಳ ಪರಿಹಾರಕ್ಕೆ ಬಲಿಷ್ಠ ಸಂಘಟಿತ ಹೋರಾಟ ಕಟ್ಟಬೇಕಾಗಿದೆ.

ಜಾಗತಿಕ ಆರ್ಥಿಕ ಹಿಂಜ-ರಿತದ ಪರಿಣಾಮವು ತೀವ್ರಗೊಂಡ ಬಂಡವಾಳಶಾಹಿ ಆರ್ಥಿಕ ಶೋಷಣೆಯಿಂದಾಗಿ ಬಹುಪಾಲು ಜನರ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತಿದೆ. ಜಾಗತಿಕ ಹಸಿವಿನ ಮಟ್ಟಗಳು ಹೆಚ್ಚುತ್ತಿವೆ, ಬಡತನದ ಮಟ್ಟಗಳು ಹೆಚ್ಚುತ್ತಿವೆ, ನಿರುದ್ಯೋಗದ ವೇಗ ಹೆಚ್ಚುತ್ತಿದೆ ಮತ್ತು ಪ್ರಪಂಚದ ಬಹುಪಾಲು ಮಕ್ಕಳಿಗೆ ತೀವ್ರವಾದ ಶೈಕ್ಷಣಿಕ ಮತ್ತು ವೈದ್ಯಕೀಯ ಅಭಾವ ಉಂಟಾಗುತ್ತಿದೆ. ಪ್ರತಿ ನಿಮಿಷಕ್ಕೆ 11 ಜನರು ಹಸಿವಿನಿಂದ ಸಾಯುತ್ತಿದ್ದಾರೆ. ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ (ಯುನಿಸೆಫ್) ಅಂದಾಜಿನ ಪ್ರಕಾರ, ಜಾಗತಿಕ ಜನಸಂಖ್ಯೆಯ ಹತ್ತನೇ ಒಂದು ಭಾಗದಷ್ಟು, ಸುಮಾರು 81.1 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ, 15 ಕೋಟಿ ಮಕ್ಕಳು ಕುಂಠಿತರಾಗಿದ್ದಾರೆ; ಮತ್ತು 4.5 ಕೋಟಿ ಮಕ್ಕಳು 2020 ರಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಕಳೆದ ವರ್ಷ ಸುಮಾರು 18 ಕೋಟಿ ಹೆಚ್ಚು ಜನರು ದೀರ್ಘಕಾಲದ ಹಸಿವನ್ನು ಎದುರಿಸುತ್ತಿದ್ದಾರೆ, ಜಾಗತಿಕ ಜನಸಂಖ್ಯೆಯ ಶೇಕಡಾ 30 ರಷ್ಟು, ಅಂದರೆ 237 ಕೋಟಿ ಜನರು, 2020 ರಲ್ಲಿ ಸಾಕಷ್ಟು ಆಹಾರದ ಕೊರತೆಯನ್ನು ಹೊಂದಿದ್ದಾರೆ ಎಂದು ಅಂದಾಜಿಸಲಾಗಿದೆ – ಒಂದು ವರ್ಷದಲ್ಲಿ 32 ಕೋಟಿ ಹೆಚ್ಚಳ. ಆಹಾರ ಬೆಲೆಗಳು ಜಾಗತಿಕ ಬಿಕ್ಕಟ್ಟನ್ನು ಹುಟ್ಟುಹಾಕಿದ್ದು, ಇದು ಲಕ್ಷಾಂತರ ಜನರನ್ನು ತೀವ್ರ ಬಡತನ, ಹಸಿವು ಮತ್ತು ಅಪೌಷ್ಟಿಕತೆಗೆ ದೂಡುತ್ತಿದೆ. ಅಕ್ಟೋಬರ್ 2022 ರಲ್ಲಿ ಸರಾಸರಿ ಗೋಧಿ, ಜೋಳ ಮತ್ತು ಅಕ್ಕಿ ಬೆಲೆಗಳು ಅಕ್ಟೋಬರ್ 2021 ಕ್ಕಿಂತ ಕ್ರಮವಾಗಿ ಶೇ. 18, ಶೇ. 27 ಮತ್ತು ಶೇ. 10 ರಷ್ಟು ಹೆಚ್ಚಾಗಿದೆ. ತೀವ್ರ ಆಹಾರ ಅಭದ್ರತೆಯನ್ನು ಅನುಭವಿಸುತ್ತಿರುವ ಮತ್ತು ತುರ್ತು ಸಹಾಯದ ಅಗತ್ಯವಿರುವ ಜನರ ಸಂಖ್ಯೆ 53 ದೇಶಗಳು ಮತ್ತು ಪ್ರಾಂತ್ಯಗಳಲ್ಲಿ 222 ಮಿಲಿಯನ್ ಜನರಿಗೆ ಏರುವ ಸಾಧ್ಯತೆಯಿದೆ ಎಂದು ಈಂಔ ವರದಿ ತಿಳಿಸಿದೆ. ರಾಷ್ಟ್ರೀಯ ಮಟ್ಟದಲ್ಲಿನ ರಾಜಕೀಯ ಸವಾಲುಗಳನ್ನು ಗಣನೆಗೆ ತೆಗೆದು-ಕೊಂಡು, ಮುಂಬರುವ ದಿನಗಳಲ್ಲಿ ನಾವು ಎಐಕೆಎಸ್ ಚಳುವಳಿ ಮತ್ತು ಸಂಘಟನೆಯನ್ನು ಹಲವು ಪಟ್ಟು ಬಲಪಡಿಸಬೇಕಾಗುತ್ತದೆ. ಪ್ರಜಾಪ್ರಭುತ್ವೀಕರಣದ ಅಗತ್ಯವಿರುತ್ತದೆ. ಬದ್ಧತೆಯ ಕಾರ್ಯಕರ್ತರಿಲ್ಲದೆ ಯಾವುದೇ ಸಂಘಟನೆಯನ್ನು ಎಂದಿಗೂ ನಿರ್ಮಿಸಲಾಗುವುದಿಲ್ಲ. ಕಾರ್ಯಕರ್ತರು ಯಾವಾಗಲೂ ನಮ್ಮ ನಿಜವಾದ ನಿಧಿಯಾಗಿದ್ದಾರೆ, ನಮ್ಮ ಪೂರ್ಣಾವಧಿಯ ಕಾರ್ಯಕರ್ತರಿಗೆ ಗೌರವದ ಸ್ಥಾನ ನೀಡಬೇಕು. ಇವುಗಳೆಲ್ಲ ಸಾಧ್ಯವಾಗುವುದು ದೇಶಪ್ರೇಮಿ ಹಿತೈಷಿಗಳಿಂದ. ಸಮ್ಮೇಳನವನ್ನು ಯಶಸ್ವಿಗೊಳಿಸಿ ಸಂಘಟನೆಯನ್ನು ಬಲಪಡಿಸಲು ಸಹಾಯ ಸಹಕಾರ ನೀಡಲು ಕೇಳಿಕೊಳ್ಳುತ್ತೇವೆ.

# ಉತ್ತರ ಕನ್ನಡ ಮಲ್ಲಮ್ಮ ನುಡಿ ಪತ್ರಿಕಾ ಜಿಲ್ಲಾ ವರದಿಗಾರರಿಂದ ಮಕ್ಕಾ ಮದೀನಾ ಪುಣ್ಯಕ್ಷೇತ್ರ ಭೇಟಿ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**



ಸರಕಾರ ಉಮ್ರಾ ಟ್ರಾವಲ್ಸ್ ಶಿರಾಳಕೊಪ್ಪ ಅಲ್ ಪತಾ ಟೂರ್ ಎಂಡ್ ಟ್ರಾವೆಲ್ಸ್ ಹುಬ್ಬಳ್ಳಿ ಇವರ ಆಶ್ರಯದಲ್ಲಿ ಕರ್ನಾಟಕ ರಾಜ್ಯದ ವಿವಿಧ ತಾಲೂಕುಗಳಿಂದ ಹಾಗೂ ಜಿಲ್ಲೆಗಳಿಂದಸುನ್ನಿಮುಸ್ಲಿಂಬಾಂಧವರು ಮೌಲಾನಾ ಮಹಮ್ಮದ ಜೂನೊನ್ ಚುಸ್ತಿ ಇವರ ನೇತೃತ್ವದಲ್ಲಿ 300 ಜನರ ತಂಡ ಮುಂಬೈ ಜಿದ್ದಾ ಮಾರ್ಗವಾಗಿ ಮಕ್ಕಾ ಪುಣ್ಯಕ್ಷೇತ್ರಕ್ಕೆ ವಿಮಾನದಲ್ಲಿಪ್ರಯಾಣಬೆಳೆಸಿದರು. ಈ ತಂಡದಲ್ಲಿಹಿರಿಯರು,ಮಹಿಳೆಯರು, ಮೌಲ್ವಿಗಳು, ಚಿಕ್ಕಮಕ್ಕಳು ಎಲ್ಲರೂ ಇದ್ದರು.

ಈಮಕ್ಕಾಪ್ರವಾಸಪುಣ್ಯಕ್ಷೇತ್ರಗಳನ್ನು ನೋಡುವುದರೊಂದಿಗೆಭಕ್ತಿಯಿಂದ ಪ್ರಾರ್ಥನೆಮಾಡಲುಅನುಕೂಲಕರ ವಾತಾವರಣ ಒದಗಿಸಿತ್ತು. ದೇವರ ದರ್ಶನದ ಜೊತೆಯಲ್ಲಿ ಉತ್ತಮ ವಾಸ್ತವ್ಯಕ್ಕಾಗಿ ಹೊಟೇಲ್ ವ್ಯವಸ್ಥೆ, ಊಟದವ್ಯವಸ್ಥೆ,ಬಸ್ ವ್ಯವಸ್ಥೆಮತ್ತು ವಾಹನದವ್ಯವಸ್ಥೆಒಳಗೊಂಡುಪ್ರತಿದಿನ ಪ್ರತಿಯೊಬ್ಬರುಮಕ್ಕಾದಲ್ಲಿಕಾಬಾದ ಸುತ್ತಲು 7 ಸುತ್ತುಸುತ್ತುವುದರೊಂದಿಗೆ ಭಕ್ತಿಯಿಂದ ಸಫಾ ಮತ್ತು ಮರ್ವಾ ಇಲ್ಲಿ 7 ಸುತ್ತು ತವಾಫ್ ಮಾಡಲು ಮೌಲ್ವಿಗಳುಜೊತೆಜೊತೆಯಾಗಿದ್ದರು. ಈ ಪ್ರವಾಸದಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ನಿವಾಸಿಗಳು 7 ಜನ ಇದ್ದರು. ಅದರಲ್ಲಿ ದಿ ಡೇಲಿ ನ್ಯೂಸ್ ವರದಿಗಾರ ಅಖ್ತರ ಸೈಯದ್ ಅವರು ಪ್ರಾರ್ಥನೆಯಲ್ಲಿ ಭಾಗವಹಿಸಿ ಮಲ್ಲಮ್ಮನುಡಿ ದಿನಪತ್ರಿಕೆ ಹೆಮ್ಮರವಾಗಿ ಬೆಳೆಯಲಿ ಮತ್ತು ಇದರ ಪತ್ರಿಕೆಗಳು ರಾಜ್ಯದಲ್ಲಷ್ಟೇ ಅಲ್ಲ ರಾಷ್ಟ್ರದಲ್ಲೂ ತನ್ನ ಹೆಸರನ್ನು ಛಾಪಿಸಲಿ ಎಂದು ಪ್ರಾರ್ಥಿಸಿದ್ದು ವಿಶೇಷವಾಗಿತ್ತು.

ಈ ತಂಡ 9 ನೇ ದಿನಕ್ಕೆ ಮಕ್ಕಾದಿಂದ ಮದೀನಾಕ್ಕೆ ಪ್ರವಾಸ ಬೆಳೆಸಿತ್ತು. ಮದೀನಾದಲ್ಲಿ ಪ್ರತಿದಿನ ನಬವಿ ಮಸೀದಿಯಲ್ಲಿ ನಮಾಜ ಮಾಡುವುದರೊಂದಿಗೆ ಮಹಮ್ಮದ ಪೈಗಂಬರರ ಜನ್ಮದ ಅನೇಕ ಸ್ಥಳಗಳನ್ನು ವೀಕ್ಷಿಸಿದರು. ಮತ್ತು ಜನ್ನತುಲ್‌ಬಕೀ ಖಬರಸ್ತಾನ ರಿಯಾಜ್ ಉಲ್ ಜನ್ನಾ ಪುಣ್ಯಕ್ಷೇತ್ರ ಎಲ್ಲವನ್ನು ವೀಕ್ಷಿಸಿ ನಮಾಜನ್ನು ಕೈಗೊಂಡರು. ಈವೇಳೆ ಮದೀನಾದಲ್ಲಿ ವಜೂಖಾನದಲ್ಲಿ ಬೆಕ್ಕು ಟ್ಯಾಪ್‌ನಿಂದ ನೀರನ್ನು ಕುಡಿಯುತ್ತಿರುವುದನ್ನು ವರದಿಗಾರರು ಫೋಟೋ ಕ್ಲಿಕ್ಕಿಸಿದ ಕ್ಷಣ ಎಲ್ಲರಿಗೂ ತಬ್ಬಿಬ್ಬಾಗಿಸಿತು. ಇಲ್ಲಿಯೂ ಸಹ ಅಖ್ತರ ಸೈಯದ್ ಅವರು ಪ್ರಾರ್ಥನೆ ವೇಳೆ ತಮ್ಮ ದಿನಪತ್ರಿಕೆ ಮಲ್ಲಮ್ಮ ನುಡಿ ನ್ಯೂಸ್ ವೇಗವಾಗಿ ರಾಜ್ಯದ ಎಲ್ಲ ಮೂಲೆ ಮೂಲೆಗಳಲ್ಲಿ ತನ್ನ ಛಾಪನ್ನು ಒತ್ತಿ ಜನರನ್ನು ಆಕರ್ಷಿಸಲಿ ಹಾಗೂ ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಹಾಗೆಯೇ ಜಗತ್ತಿನಲ್ಲಿ ಅತ್ಯಂತ ಪುಣ್ಯಗ್ರಂಥವಾದ ಕುರಾನ್‌ನನ್ನು ಮುದ್ರಿಸುತ್ತಿರುವ ಮುದ್ರಣಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿ ಬರುವಂತ ಎಲ್ಲ ಭಕ್ತಾಧಿಗಳಿಗೂ ಉಚಿತವಾಗಿ ಒಂದೊಂದು ಕುರಾನ್‌ನನ್ನು ನೀಡುತ್ತಿರುವುದು ಮತ್ತು ಅದನ್ನು ಪ್ರತಿಯೊಬ್ಬರುಪಡೆದುಶಾಸ್ತ್ರೋಕ್ತವಾಗಿ ತಮ್ಮಜೊತೆಯಲ್ಲಿಒಯ್ಯುತ್ತಿರುವುದು ಎಲ್ಲರನ್ನು ನಿಬ್ಬೆರಗಾಗಿಸಿದೆ.

# ಪೌರತ್ವವನ್ನು ಸಾಬೀತುಪಡಿಸಬೇಕಾದ ಸಂದಿಗ್ಧತೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**




ಮತದಾರರಪಟ್ಟಿವಿಶೇಷಪರಿಷ್ಕರಣೆಯ ನೆಪದಲ್ಲಿ ಈ ದೇಶದ ನಾಗರಿಕರು ತಮ್ಮ ರಾಜಕೀಯ ಹಕ್ಕನ್ನು ಮತ್ತು ದೇಶದ ಪೌರತ್ವವನ್ನುಸಾಬೀತುಪಡಿಸಬೇಕಾದ ಸಂದಿಗ್ದತೆಗೆ ಈಡಾಗಿದ್ದಾರೆ. ಇದು ಪ್ರಜಾಪ್ರಭುತ್ವವನ್ನುವೈಫಲ್ಯಗೊಳಿಸುವ ಹುನ್ನಾರದಂತೆ ಕಂಡುಬರುತ್ತದೆ ಎಂದು ಸರಳಾದೇವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಶ್ರೀನಿವಾಸ ಮೂರ್ತಿ ಆತಂಕ ವ್ಯಕ್ತಪಡಿಸಿದರು.

ನಗರದ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ರೂಸಾ ಅನುದಾನದಡಿಯಲ್ಲಿ ರಾಜ್ಯಶಾಸ್ತ್ರ ವಿಭಾಗದವತಿಯಿಂದಆಯೋಜಿಸಿದ್ದ 'ಭಾರತದ ಪ್ರಜಾಪ್ರಭುತ್ವ: ಅವಕಾಶ ಮತ್ತುಸವಾಲುಗಳು 'ಒಂದು ದಿನದ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಭಾರತ ಸಂವಿಧಾನ ಅಂಗೀಕರಿಸಿದ ನಂತರ ಯಾವುದೇ ಅರ್ಹತೆ, ಸ್ಥಾನಮಾನಗಳನ್ನು ಪರಿಗಣಿಸದೆ ಕೇವಲ ವಯೋಮಿತಿಯನ್ನು ಆಧರಿಸಿ ಮತದಾನದ ಹಕ್ಕನ್ನು ನೀಡಲಾಯಿತು.ನಂತರ ಮತದಾನದ ವಯೋಮಿತಿಯನ್ನುಇಳಿಸಲಾಯಿತು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದಕಲಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಕಿರಣ ಗಾಜನೂರು ಎರಡನೇ ಮಹಾಯುದ್ಧದ ನಂತರ ತೃತೀಯ ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆತು ತಮ್ಮದೇ ಸಂವಿಧಾನವನ್ನುಅಳವಡಿಸಿಕೊಂಡು ಸರ್ಕಾರವನ್ನು ಸ್ಥಾಪಿಸಿಕೊಂಡಿವೆ. ಅವುಗಳಲ್ಲಿ ಭಾರತವು ಒಂದು. ಇತರೆ ಪ್ರಜಾಪ್ರಭುತ್ವರಾಷ್ಟ್ರಗಳಿಗೆಹೋಲಿಸಿದರೆ ಭಾರತವು ಸ್ಥಿರವಾದ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿದೆ ಎಂದು ವಿಶ್ಲೇಷಿಸಿದರು.

ಅಂಬೇಡ್ಕರ್ ರೂಪಿಸಿದ ಸಂವಿಧಾನ ಇದರ ರಚನಾ ಸಮಿತಿಯ ಹಲವಾರು ತಳ ಸಮುದಾಯಗಳ ಶೋಷಿತರ ಮತ್ತು ಮಹಿಳೆಯರ ಪ್ರಾತಿನಿಧ್ಯವನ್ನು ಹೊಂದಿತ್ತು. ಇವರೆಲ್ಲರ ದೂರದೃಷ್ಟಿ ಮತ್ತುಪರಿಶ್ರಮದಿಂದರೂಪಿಸಲ್ಪಟ್ಟ ಸಂವಿಧಾನ ಸ್ಥಿರತೆಯನ್ನುಪಡೆದು–ಕೊಂಡಿದೆ. ಭಾರತೀಯ ನಾಗರಿಕ ಭಾರತದಪ್ರಜಾಸತ್ತಾತ್ಮಕವ್ಯವಸ್ಥೆಯನ್ನು ಇನ್ನೂ ಹೆಚ್ಚು ದೃಢಪಡಿಸಲು ವೈಯಕ್ತಿಕ ಪ್ರಜಾಸತ್ತಾತ್ಮಕಗುಣಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ವ್ಯಕ್ತಿಗತವಾಗಿ ಪ್ರಜಾಸತ್ತಾತ್ಮಕ ಗುಣಗಳನ್ನು ರೂಪಿಸಿಕೊಳ್ಳದ ವ್ಯಕ್ತಿ ತನ್ನ ರಾಷ್ಟ್ರವನ್ನು ಪ್ರಜಾಸತ್ತಾತ್ಮಕಗೊಳಿಸಲು ಸಾಧ್ಯವಿಲ್ಲ ಎಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹೊನ್ನೂರಾಲಿ ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ. ಕಳೆದ 70 ವರ್ಷಗಳಲ್ಲಿ ಹಲವಾರು ವಲಯಗಳಲ್ಲಿ ಭಾರತ ಪ್ರಜಾಪ್ರಭುತ್ವ ತನ್ನಸಾಧನೆ ಕಂಡುಕೊಂಡಿದೆ. ಆದರೆ ಇಂದಿಗೂ ಕೂಡ ಪ್ರಜಾಪ್ರಭುತ್ವಕ್ಕೆ ಹೊಸ ಸವಾಲುಗಳು ಎದುರಾಗುತ್ತಿವೆ. ಇಂತಹ ಸವಾಲುಗಳ ಮೇಲೆ ಬೆಳಕು ಚೆಲ್ಲುವುದು ಇಂದಿನ ವಿಚಾರ ಸಂಕಿರ್ಣದ ಆಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಜಿ.ಪ್ರಹ್ಲಾದ್ ಚೌದ್ರಿ ವಹಿಸಿದ್ದರು. ವೇದಿಕೆಯ ಮೇಲೆ ಪ್ರಾಧ್ಯಾಪಕರಾದಡಾ.ವಿಜಯಕುಮಾರ್, ಡಾ. ಸರೋಜಾ ಬಿ, ಡಾ.ಕುಂಚಂ ನರಸಿಂಹಲು,ಡಾ.ಮಲ್ಲಿಕಾರ್ಜುನಮೋಕಾ, ಡಾ.ಹುಚ್ಚೂಸಾಬ್,ಡಾ.ದಸ್ತಗೀರಸಾಬ್ ದಿನ್ನಿ, ಡಾ.ಟಿ.ದುರುಗಪ್ಪ,ಇದ್ದರು

ಈಸಂದರ್ಭದಲ್ಲಿಪ್ರಾಧ್ಯಾಪಕರುಗಳಾದ ಡಾ.ಬಸವರಾಜ್,ಡಾ.ಶ್ರೀಧರ್‌ಬರ್ಕಿ,ಡಾ. ರಾಬಿಯಾ ಬೇಗಂ, ಡಾ. ವೀರ ಪ್ರಸಾದ್, ಅತಿಥಿ ಉಪನ್ಯಾಸಕರಾದ ಗುರುರಾಜ್,ತಿಪ್ಪೇರುದ್ರ,ಬಸವರಾಜ್, ಪಾರ್ವತಮ್ಮ,ಶ್ರೀವಾಣಿ,ಸುಜಾತ,ಶ್ರೀನಿವಾಸ, ಕುಮಾರ್, ರೇವಣಸಿದ್ದಯ್ಯ, ನಾಗರಾಜ,ರವಿಚಂದ್ರಉಪಸ್ಥಿತರಿದ್ದರು.

# ಅಮೃತೇಶ್ವರ ನೂತನ ರಥೋತ್ಸವ ಆಯೋಜನೆ

ಬಳ್ಳಾರಿ,: ಕುವೆಂಪು ನಗರ ಕಂಟೋನ್‌ಮೆಂಟ್ ಪ್ರದೇಶದ ಶ್ರೀ ಅಮೃತೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ 16ನೇ ವರ್ಷದ ಅಮೃತೇಶ್ವರ ನೂತನ ರಥೋತ್ಸವ ಹಾಗೂ ಮಹಾಶಿವರಾತ್ರಿ ಉತ್ಸವವನ್ನು ಫೆಬ್ರವರಿ 14 ಮತ್ತು 15ರಂದು ಭಕ್ತಿ ಸಂಭ್ರಮದಿಂದ ಆಯೋಜಿಸಲಾಗಿದೆ.

ಫೆ.14ರಂದು ನೂತನ ರಥದ ಶುದ್ದಿಕರಣ ಹಾಗೂ ಹೋಮ ಕಾರ್ಯಕ್ರಮವು ಪೂಜ್ಯ ಶ್ರೀ ಮ.ಘ.ಚ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿದೆ. ಫೆ.15ರಂದು ಬೆಳಿಗ್ಗೆ 5 ಗಂಟೆಗೆ ರುದ್ರಾಭೀಷೇಕ, ಬೆಳಿಗ್ಗೆ 9ಕ್ಕೆ ಮಡಿತೇರು ಉದ್ಘಾಟನೆ ಮತ್ತು ಕಳಸಾರೋಹಣ ಕಾರ್ಯಕ್ರಮಗಳು ಪೂಜ್ಯ ಶ್ರೀ ಮ.ನಿ.ಪ್ರ. ಡಾ. ಸಿದ್ದಲಿಂಗ ಮಹಾಸ್ವಾಮಿಗಳು ಮತ್ತು ಪೂಜ್ಯ ಶ್ರೀ ಮ.ನಿ.ಪ್ರ. ಕಲ್ಯಾಣ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಲಿವೆ.ಬೆಳಿಗ್ಗೆ 11 ಗಂಟೆಗೆ ಶಿವಪಾರ್ವತಿ ಕಲ್ಯಾಣೋತ್ಸವ ಮತ್ತು ಸಂಜೆ 5ಕ್ಕೆ ಮಹಾರಥೋತ್ಸವ ನಡೆಯಲಿದ್ದು, ಈ ಮಹೋತ್ಸವಕ್ಕೆ ಪೂಜ್ಯ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಸಮಾರಂಭದಲ್ಲಿ ಪೂಜ್ಯ ಶ್ರೀ ಮ.ನಿ.ಪ್ರ. ಬಸವಲಿಂಗ ಮಹಾಸ್ವಾಮಿಗಳು ಹಾಗೂ ಪೂಜ್ಯ ಶ್ರೀ ಮ.ನಿ.ಪ್ರ. ತೋಂಟದಾರ್ಯ ಮಹಾಸ್ವಾಮಿಗಳು ಸಮ್ಮುಖರಾಗಲಿದ್ದಾರೆ. ಮುಖ್ಯ ಅತಿಥಿಗಳಾಗಿ ಇ. ತುಕಾರಾಂ, ಬಿ. ನಾಗೇಂದ್ರ, ಬಿ. ಶ್ರೀರಾಮುಲು, ಪಿ. ಗಾದೆಪ್ಪ, ಮಹಾನಗರ ಪಾಲಿಕೆಯ ಉಪಮಹಾಪೌರರಾದ ಮುಬೀನಾ ಬಿ. ಹಾಗೂ ಸದಸ್ಯೆ ಜಾನಕಿ ಭಾಗವಹಿಸಲಿದ್ದಾರೆ.ಪ್ರಸಾದ ವಿನಿಯೋಗವನ್ನು ಪ್ರತಿಭ, ಬಸವರಾಜ ಹಿರೇಮಠ ಹಾಗೂ ಕುಟುಂಬದವರು ದಾನವಾಗಿ ನೀಡುತ್ತಿದ್ದು, ಸಮಿತಿಯ ಅಧ್ಯಕ್ಷ ವಿ.ಬಿ. ಹಿರೇಮಠ ಮತ್ತು ಸದಸ್ಯರು ನಾಗರಿಕರನ್ನು ಉತ್ಸವದಲ್ಲಿ ಪಾಲ್ಗೊಂಡು ಧಾರ್ಮಿಕ ಕಾರ್ಯಕ್ರಮಗಳಿಗೆ ಸಾಕ್ಷಿಯಾಗುವಂತೆ ಆಹ್ವಾನಿಸಿದ್ದಾರೆ.

## ದುರದುಂಡೇಶ್ವರ ಮಠದ ಪೂಜ್ಯ ಶಿವಕುಮಾರ ಸ್ವಾಮೀಜಿ ಅಭಿಮತ

# ಧಾರ್ಮಿಕ ಮೌಲ್ಯ ಪಾಲನೆಯಿಂದ ಶಾಂತಿ



• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ಮಹಾತ್ಮರ,ಸಂತ ಶರಣರ ಬದುಕಿನ ಆದರ್ಶಗಳನ್ನು ಅಳವಡಿಸಿಕೊಂಡು ಧಾರ್ಮಿಕ ಮೌಲ್ಯಗಳ ಪರಿಪಾಲನೆಯನ್ನು ಮಾಡಿದರೆ ಜೀವನದಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿ ಪ್ರಾಪ್ತಿಯಾಗುತ್ತದೆ ಎಂದು ಕೊಡೆಕಲ್ ದುರದುಂಡೇಶ್ವರ ಮಠದ ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿ ಹೇಳಿದರು. ತಾಲೂಕಿನ ನಾವದಗಿ ಗ್ರಾಮದ ಪರ್ವತೇಶ್ವರ ಬ್ರಹನ್ಮಠದ ಪೂಜ್ಯಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡ ಗುಡ್ಡಾಪುರದ ಶ್ರೀ ದಾನಮ್ಮ ದೇವಿ ತೊಟ್ಟಿಲೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಶುಕ್ರವಾರ ಸಂಜೆ ಆಶೀರ್ವಚನ ನೀಡಿದರು. ಬದುಕು ಎಷ್ಟು ಶ್ರೀಮಂತವಾಗಿದೆ ಅನ್ನುವುದಕ್ಕಿಂತ ಎಷ್ಟು ನೆಮ್ಮದಿಯಿಂದ ಕೂಡಿದೆ ಎಂಬುದು ಮುಖ್ಯ. ಸದಾ ಅನ್ಯರ ಕುರಿತು ಚಿಂತಿಸದೆ ನಮ್ಮ ಕುರಿತು ಚಿಂತಿಸುವ ಅಗತ್ಯವಿದೆ, ಆಧ್ಯಾತ್ಮಿಕ ಬದುಕಿನೊಂದಿಗೆ ಸತ್ಯ, ಧರ್ಮದ ಮಾರ್ಗದಲ್ಲಿ ನಡೆದರೆ ಸುಖ ಶಾಂತಿ ದೊರಕುತ್ತದೆ. ಪೂಜ್ಯ ರಾಜೇಂದ್ರ ಒಡೆಯರ್ ಶಿವಾಚಾರ್ಯರು ಈ ಭಾಗದ ಭಕ್ತರನ್ನು ಸಂಸ್ಕರಿಸಲು ಹಗಲಿರಳು ಶ್ರಮಿಸುತ್ತಿದ್ದಾರೆ ಅವರ ಧರ್ಮ ಜಾಗೃತಿಯ ಕಾರ್ಯ ಎಲ್ಲರಿಗೂ ಅನುಕರಣೀಯವಾಗಿದೆ. ಅವರ ಗುರು ಪಟ್ಟಾಧಿಕಾರದ ಐತಿಹಾಸಿಕ ಕಾರ್ಯಕ್ರಮವನ್ನು ಮಾಡಿ ಇಡೀ ನಾಡಿಗೇ ಒಳ್ಳೆಯ ಸಂದೇಶವನ್ನು ಕೊಟ್ಟಿದ್ದೀರಿ ಮುಂದೆಯೂ ಅವರು ಮಾಡುವ ಎಲ್ಲ ಧರ್ಮ ಕಾರ್ಯಗಳಲ್ಲಿ ನಿಮ್ಮೆಲ್ಲರ ಸಹಕಾರ ಅವರೊಂದಿಗಿರಲಿ ಎಂದರು. ಪೂಜ್ಯ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಚಬನೂರಿನ ರಾಮಲಿಂಗಯ್ಯ ಶ್ರೀಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಸಿಂಧನೂರಿನ ಡಾ.ಗುರುಮೂರ್ತಯ್ಯ ಹಿರೇಮಠ,ಸಾಹಿತಿ ಬಸವರಾಜ ಗೊರಜಿ, ಪುರಾಣಿಕ ರಾಚಯ್ಯ ಹಿರೇಮಠ,ಸಂಗೀತಗಾರ ಸೋಮಯ್ಯ ಸ್ವಾಮಿ,ತಬಲವಾದಕ ಮಹಾಂತೇಶ ಬಿರಾದಾರ ಹಾಗೂ ಶ್ರೀಮಠದ ಭಕ್ತರು ಉಪಸ್ಥಿತರಿದ್ದರು.

# ನಮ್ಮ ಬಳ್ಳಾರಿ ಸ್ವಚ್ಛ ಬಳ್ಳಾರಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರವನ್ನುಸ್ವಚ್ಛಹಾಗೂ ಆರೋಗ್ಯಕರವಾಗಿಡುವ ಉದ್ದೇಶದಿಂದ ಬಳ್ಳಾರಿ ನಗರದಲ್ಲಿ ಇಂದು "ನಮ್ಮ ಬಳ್ಳಾರಿ ಸ್ವಚ್ಛ ಬಳ್ಳಾರಿ" ಘೋಷಣೆಯೊಂದಿಗೆ 5 ಕಿಲೋಮೀಟರ್ ಮ್ಯಾರಥಾನ್ ಯಶಸ್ವಿಯಾಗಿ ನಡೆಯಿತು. ಬೆಳಗ್ಗೆ 6:30ಕ್ಕೆ ಮುನಿಸಿಪಾಲ್ ಮೈದಾನದಲ್ಲಿ ಆರಂಭವಾದ ಈ ಓಟದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳು, ಕ್ರೀಡಾಪಟುಗಳು, ಯುವಕರು ಮತ್ತು ಹಿರಿಯ ನಾಗರಿಕರು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದರು.

ಮುನಿಸಿಪಾಲ್ ಮೈದಾನದಿಂದ ಆರಂಭವಾದ ಮ್ಯಾರಥಾನ್ ರಾಯಲ್ ಸರ್ಕಲ್, ಮೂತಿ ಸರ್ಕಲ್, ವಾಲ್ಮೀಕಿ ವೃತ್ತ ಹಾಗೂ ದುರ್ಗಮ್ಮ ಗುಡಿ ಮಾರ್ಗವಾಗಿ ಮತ್ತೆ ಪ್ರಾರಂಭದ ಸ್ಥಳದಲ್ಲೇ ಸಮಾಪ್ತಿಯಾಯಿತು.

ಮಾರ್ಗದುದ್ದಕ್ಕೂ ಸ್ವಚ್ಛತಾ ಜಾಗೃತಿ ಘೋಷಣೆಗಳು, ಬ್ಯಾನರ್‌ಗಳು ಹಾಗೂ ಸ್ವಚ್ಛತೆ ಬಗ್ಗೆ ಸಂದೇಶಗಳನ್ನು ಹೊತ್ತ ಫಲಕಗಳು ಗಮನ ಸೆಳೆದವು. ಪಾಲ್ಗೊಂಡವರು "ಸ್ವಚ್ಛ ನಗರ ಆರೋಗ್ಯಕರ ಜೀವನ" ಎಂಬ ಘೋಷಣೆಗಳನ್ನು ಕೂಗಿ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಿದರು.

ಮ್ಯಾರಥಾನ್ ಮುಗಿದ ಬಳಿಕ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ನಡೆಯಿತು.

ಈ ಸಂದರ್ಭದಲ್ಲಿ ಮಹಾಪೌರರಾದ ಗಾದೆಪ್ಪ ಅವರು ಮಾತನಾಡಿ, ಸ್ವಚ್ಛತೆ ಕೇವಲ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕರ ಕರ್ತವ್ಯವೂ ಹೌದು ಎಂದು ಹೇಳಿದರು. ಇಂತಹ ಕಾರ್ಯಕ್ರಮಗಳು ಯುವಕರಲ್ಲಿ ಸಾಮಾಜಿಕ ಜವಾಬ್ದಾರಿತನ ಹೆಚ್ಚಿಸುವುದರ ಜೊತೆಗೆ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುತ್ತವೆ ಎಂದರು.

ನಗರವನ್ನು ಸ್ವಚ್ಛವಾಗಿಡುವ ಸಂಕಲ್ಪದೊಂದಿಗೆ ನಡೆದ ಈ ಮ್ಯಾರಥಾನ್ ಸಾಮಾಜಿಕ ಸಂದೇಶ ಸಾರುವ ಮೂಲಕ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತರಾದ ಮಂಜುನಾಥ್, ಮಹಾಪೌರರಾದ ಪಿ ಗಾದೆಪ್ಪ, ರಾಜೇಶ್ ಪಾಲಿ ಶುಭ ರಾಯುಡು, ಸದಸ್ಯರಾದ ಪಿರಮ್ ವಿವೇಕ್, ಕುಬೇರ್ ಹನುಮಂತು ಮತ್ತು ಹೊನ್ನೂರಪ್ಪ, ಛಡಿಟ ಸೇನ ಸೇರಿದಂತೆ ಬಳ್ಳಾರಿ ಮಹಾನಗರ ಪಾಲಿಕೆ ಸದಸ್ಯರು ಉಪಸ್ಥಿತರಿದ್ದರು.

## ಸಾರ್ವಜನಿಕರಿಂದ ಬಾರಿ ಮೆಚ್ಚುಗೆ ಪಡೆದ ಚಿಣ್ಣರ ಸಂತೆ

# ಸಂಸಾರದ ಒತ್ತಡಗಳಿಗೆ ವಿರಾಮ ಕೊಡಿ ಮಕ್ಕಳ ಸಂತೆಯಲ್ಲಿ ಪಾಲ್ಗೊಂಡ ಪೋಷಕರು




**ಜಗದೀಶ್ ಕುಮಾರ್ ಭೂಮಾ**

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್:**

ಗುರುಮಠಕಲ್: ತಾಲೂಕಿನ ಚೆಪೆಟ್ಲಾ ಗ್ರಾಮದ ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಮಕ್ಕಳಲ್ಲಿ ಆರ್ಥಿಕ ಬುದ್ದಿಮಟ್ಟ ವೃದ್ದಿಗಾಗಿ ಚಿಣ್ಣರ ಸಂತೆಯನ್ನು ಶುಕ್ರವಾರ ಆಯೋಜಿಸಲಾಗಿತ್ತು.

ವೇಗದ ಜೀವನದಲ್ಲಿ ಸಂಸಾರದ ಒತ್ತಡಗಳು ಎಲ್ಲರನ್ನೂ ಆವರಿಸಿರುವ ಸಂದರ್ಭದಲ್ಲಿ, ಗ್ರಾಮದ ಶಾಲಾ ಆವರಣದಲ್ಲಿ ಆಯೋಜಿಸಲಾದ ಮಕ್ಕಳ ಸಂತೆಯು ಪೋಷಕರಿಗೂ ಮಕ್ಕಳಿಗೂ ವಿಶಿಷ್ಟ ಅನುಭವ ನೀಡಿತು. ಚಿಣ್ಣರ ಕಿರು ನಗು, ಬಣ್ಣಬಣ್ಣದ ಮಳಿಗೆಗಳು ಮತ್ತು ಆಟೋಪಾಟಗಳ ಸಂಭ್ರಮ ಎಲ್ಲರ ಮನಸೂರೆಗೊಂಡವು. ಸಂತೆಯಲ್ಲಿ ಮಕ್ಕಳು ಆಟಿಕೆಗಳು, ತಿಂಡಿ–ತಿನಿಸು, ಸೀರೆ, ತರಕಾರಿಗಳನ್ನು ಮಾರಾಟ ಮಾಡಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ದೀಪ ಬೆಳಗುವ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು, ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಡಾ. ಪುರುಷೋತ್ತಮ ಜೋಶಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರು ಚಿಣ್ಣರ ಸಂತೆ ಮಕ್ಕಳಿಗೆ ಪುಸ್ತಕದ ಜ್ಞಾನದ ಜೊತೆ ವ್ಯಾವಹಾರಿಕ ಜ್ಞಾನ ನೀಡುತ್ತದೆ, ಹಣದ ಮೌಲ್ಯ ಮತ್ತು ಸಹಕಾರ ಮನೋಭಾವ, ವ್ಯಾಪಾರ ಮಾಡುವ ಕೌಶಲ್ಯ ಅಭಿವೃದ್ಧಿಗೆ

> "ಚಿಣ್ಣರ ಸಂತೆ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುತ್ತವೆ.
> ಗೌರಿಶಂಕರ ಪಾಟೀಲ
> ಶಾಲೆಯ ವ್ಯವಸ್ಥಾಪಕರು.

ಈ ಕಾರ್ಯಕ್ರಮ ಸಹಕಾರಿ ಒಂದು ಒಳ್ಳೆಯ ಅನುಭವ ಮಕ್ಕಳಿಗೆ ಹಾಗೂ ಪೋಷಕರಿಗೆ ಎಂದು ಹೇಳಿದರು.

ಪೋಷಕರು ತಮ್ಮ ಮಕ್ಕಳ ವ್ಯಾಪಾರದ ಚುರುಕುತನವನ್ನು ನೋಡಿ ಹರ್ಷ ವ್ಯಕ್ತಪಡಿಸಿದರು. ಮಕ್ಕಳೂ ಕೂಡ ಸಂಭ್ರಮದಿಂದ ಪಾಲ್ಗೊಂಡು ಕಾರ್ಯಕ್ರಮಕ್ಕೆ ಕಳೆ ತಂದರು. ಮಕ್ಕಳ ಸಂತೆಯು ಸಂಸಾರದ ಒತ್ತಡಗಳಿಗೆ ಸ್ವಲ್ಪ ವಿರಾಮ ನೀಡಿದಂತೆ ಕಂಡುಬಂದಿದ್ದು, ಬಾಲ್ಯದ ಮಧುರ ನೆನಪುಗಳನ್ನು ಮೂಡಿಸಿದ ಸಂಭ್ರಮಮಯ ಕಾರ್ಯಕ್ರಮವಾಗಿ ಪರಿಣಮಿಸಿತು.ಕಾರ್ಯಕ್ರಮದಲ್ಲಿ ಹಿರಿಯ ನಿವೃತ್ತ ವೈದ್ಯಾಧಿಕಾರಿ ಡಾ. ವಿ ಸಿ ಮೈತ್ರಿ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಚಪೆಟ್ಲಾ, ಮುಖ್ಯಾಧಿಕಾರಿ ಶರಣಪ್ಪ ಎಮ್, ವಿಶ್ವನಾಥರೆಡ್ಡಿ ದೇಶಮುಖ, ಸಿದ್ದಲಿಂಗ ರೆಡ್ಡಿ ಕಂದಕೂರು, ಪರಮ ರೆಡ್ಡಿ ನಿವೃತ್ತ ಶಿಕ್ಷಕರು, ಸಾಬಣ್ಣ ತಾಪಂ ಸದಸ್ಯರು, ಗೌರಿಶಂಕರ ಪಾಟೀಲ, ವಿಷ್ಣುವರ್ಧನ್ ರೆಡ್ಡಿ, ಶಿವಾನಂದ ಬೂದಿ, ಅಮರನಾಥ ಕಲಾಲ್ ಸೇರಿದಂತೆ ಶಾಲಾ ಮುಖ್ಯಗುರುಗಳು ಹಾಗೂ ಶಿಕ್ಷಕರು, ಪೋಷಕರು ಪಾಲ್ಗೊಂಡಿದ್ದರು.

# 15, 16 ಕ್ಕೆ ಕುರುಗೋಡು ಉತ್ಸವಕ್ಕೆ ಜಮೀರ್ ಅಹ್ಮದ್ ಖಾನ್ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವತಿಯಿಂದ ಫೆ.15 ಮತ್ತು 16 ರಂದು ಕುರುಗೋಡು ಉತ್ಸವ ಆಯೋಜಿಸಲಾಗಿದೆ. ಫೆ.16 ರಂದು ಸಂಜೆ 06 ಗಂಟೆಗೆ ಕಂಪ್ಲಿ ರಸ್ತೆಯ ಶ್ರೀ ಖಾದರ್‌ಲಿಂಗ ದರ್ಗಾ ಹತ್ತಿರದ ಶ್ರೀ ದೊಡ್ಡ ಬಸವೇಶ್ವರ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ನೆರವೇರಲಿದ್ದು, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಉದ್ಘಾಟಿಸುವರು.

ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಎಸ್.ಶಿವರಾಜ ತಂಗಡಗಿ, ಕಾನೂನು, ನ್ಯಾಯಾಲಯ ಹಕ್ಕುಗಳು, ಸಂಸದೀಯ ವ್ಯವಹಾರ ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್. ಕೆ. ಪಾಟೀಲ್, ಕಾರ್ಮಿಕ ಸಚಿವ ಸಂತೋಷ್ ಲಾಡ್.ಎಸ್ ಅವರು ಘನ ಉಪಸ್ಥಿತಿ ಇರುವರು. ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿ "ಕುರುಗೋಡು ಉತ್ಸವ ಐತಿಹಾಸಿಕ ದೇವಸ್ಥಾನಗಳ ದರ್ಶನ" ಪುಸ್ತಕ ಬಿಡುಗಡೆ ಮಾಡುವರು. ಕಂಪ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್. ಗಣೇಶ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರುಗಳಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯ ಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್, ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ್, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ನ ಉಪಾಧ್ಯಕ್ಷ ಹೆಚ್.ಲಕ್ಷಣ್, ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ ಸೇರಿದಂತೆ ಇತರರು ಭಾಗವಹಿಸುವರು.




ವಿಶೇಷಗಣ್ಯ ಆಹ್ವಾನಿತರಾಗಿ ಸವದತ್ತಿ ಯಲ್ಲಮ್ಮ ಕ್ಷೇತ್ರ ಶಾಸಕ ವಿಶ್ವಾಸ್ ವಸಂತ್ ವೈದ್ಯ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರೂ ಆದ ಮಸ್ಕಿ ಕ್ಷೇತ್ರ ಶಾಸಕ ಬಸವನಗೌಡ ತುರ್ವಿಹಾಳ್, ಬೆಳಗಾವಿ ಉತ್ತರ ಕ್ಷೇತ್ರ ಶಾಸಕ ಆಸೀಫ್ ಸೇಟ್, ಜಗಳೂರು ಕ್ಷೇತ್ರ ಶಾಸಕ ದೇವೇಂದ್ರಪ್ಪ, ಕಿತ್ತೂರು ಕ್ಷೇತ್ರ ಶಾಸಕ ಬಾಬಾ ಸಾಹೇಬ್ ಪಾಟೀಲ್, ಮಾಯಕೊಂಡ ಕ್ಷೇತ್ರ ಶಾಸಕ ಕೆ. ಎಸ್. ಬಸವಂತಪ್ಪ ಸೇರಿದಂತೆ ಇತರರು ಭಾಗವಹಿಸುವರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮಂಜುನಾಥ, ಕಲಬುರಗಿ ಪ್ರಾದೇಶಿಕ ಆಯುಕ್ತರಾದ ಜಹೀರಾ ನಾಸೀಮ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ. ಗಾಯತ್ರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ ಪೆನ್ನೇಕರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ರಾಜೇಶ್.ಹೆಚ್.ಡಿ ಸೇರಿದಂತೆ ಇತರರು ಉಪಸ್ಥಿತರಿರುವರು.

ಫೆ.15ರಂದು ವಿವಿಧ ಕಾರ್ಯಕ್ರಮಗಳು:

ಕುರುಗೋಡು ಉತ್ಸವದ ಅಂಗವಾಗಿ ಹಲವಾರು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.ಫೆ.15 ರಂದು ಬೆಳಿಗ್ಗೆ 07 ಗಂಟೆಗೆ ವದ್ದಟ್ಟಿ ಕ್ರಾಸ್‌ನಿಂದ ಕುರುಗೋಡು ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದವರೆಗೆ ಮ್ಯಾರಾಥಾನ್ ಓಟ, ಬೆಳಿಗ್ಗೆ 08.30 ಗಂಟೆಗೆ ಕುರುಗೋಡಿನ ಮಿನಿ ವಿಧಾನಸೌಧದಿಂದ ಮುಖ್ಯವೃತ್ತದ ವರೆಗೆ ಎತ್ತಿನಬಂಡಿ ಪ್ರದರ್ಶನ, ಬೆಳಿಗ್ಗೆ 10 ಗಂಟೆಗೆ ಶ್ರೀ ನಾಡಗೌಡರ ಮರಿಬಸವನಗೌಡರ ಸ್ಮಾರಕ ಸರ್ಕಾರಿ ಬಾಲಕರ ಪ್ರೌಢಶಾಲಾ ಮೈದಾನದಲ್ಲಿ ಕುರುಗೋಡು ಬೈ ಸೈ (ಆಗಸದಿಂದ ಕುರುಗೋಡು), ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿಣ್ಣರ ಚಿತ್ರಕಲಾ ಉತ್ಸವ, ಬೆಳಿಗ್ಗೆ 10 ಗಂಟೆಗೆ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನ ಮುಂಭಾಗ ಹವ್ಯಾಸಿ ಚಿತ್ರಕಲಾವಿದರ ಚಿತ್ರಕಲಾ ಉತ್ಸವ, ಬೆಳಿಗ್ಗೆ 10.30 ಗಂಟೆಗೆ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನ ಎದುರುಗಡೆ ಹಾಗೂ ಕಂಪ್ಲಿ ರಸ್ತೆಯ ಶ್ರೀ ಸಂಕ್ಲಮ್ಮ ದೇವಸ್ಥಾನದ ಹತ್ತಿರ ರಂಗೋಲಿ ಉತ್ಸವ, ಬೆಳಿಗ್ಗೆ 11.30 ಗಂಟೆಗೆ ಬಾದನಹಟ್ಟಿ ರಸ್ತೆಯ ಪೆಟ್ರೋಲ್ ಬಂಕ್ ಎದುರುಗಡೆಯ ರಜಾಬ್ ಅಲಿಸಾಬ್ ಮತ್ತು ಸಹೋದರರ ಜಮೀನಿನಲ್ಲಿ ಕೆಸರು ಗದ್ದೆ ಓಟ (ಪುರುಷರಿಗೆ) ಮತ್ತು ಹಗ್ಗ–ಜಗ್ಗಾಟ (ಮಹಿಳೆಯರಿಗೆ), ಮಧ್ಯಾಹ್ನ 2.30 ಕ್ಕೆ ಪಟ್ಟಣದ ಸಿಂಧಿಗೇರಿ ರಸ್ತೆಯಲ್ಲಿರುವ ಶ್ರೀ ಗಾದಿಲಿಂಗೇಶ್ವರ ದೇವಸ್ಥಾನದಿಂದ ಜಾನಪದ ಮೆರವಣಿಗೆ, ಬಳಿಕ ಮಧ್ಯಾಹ್ನ 03 ಗಂಟೆಯಿಂದ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದ ಆರತಿ ವೇದಿಕೆಯಲ್ಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ನಂತರ ಸಂಜೆ 06.30 ಗಂಟೆಗೆ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದ ಆರತಿ ವೇದಿಕೆಯಲ್ಲಿ ವಾರಣಾಸಿ ಅರ್ಚಕರ ತಂಡದಿಂದ ಶಿವಬಸವ ಆರತಿ ನಡೆಯಲಿದೆ. ನಂತರ ಸಾಮೂಹಿಕ ಭರತನಾಟ್ಯ ಉತ್ಸವ ಕಾರ್ಯಕ್ರಮ, ನಂತರ ಸಾಧಕರಿಗೆ ಹಾಗೂ ನೌಕರರಿಗೆ ಸನ್ಮಾನ ಜರುಗಲಿವೆ.

ಫೆ.16 ರಂದು ಕಾರ್ಯಕ್ರಮಗಳು:ಕುರುಗುಡು ಪಟ್ಟಣದ ಕಂಪ್ಲಿ ರಸ್ತೆಯ ಶ್ರೀ ದೊಡ್ಡ ಬಸವೇಶ್ವರ ಮುಖ್ಯ ವೇದಿಕೆ ಮುಂಭಾಗದಲ್ಲಿ ಹಲವು ವಿವಿಧ ವಸ್ತುಪ್ರದರ್ಶನ ಮಳಿಗೆಗಳ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಶಾಸಕರು ಉದ್ಘಾಟನೆ ನೆರವೇರಿಸುವರು.

ಅಂದು ಬೆಳಿಗ್ಗೆ 10 ಗಂಟೆಗೆ ಫಲ ಪುಷ್ಪ ಪ್ರದರ್ಶನ, ಬೆಳಿಗ್ಗೆ 10.15 ಗಂಟೆಗೆ ಆಹಾರ ಮೇಳ ಪ್ರದರ್ಶನ ಮಳಿಗೆಗಳ ಉದ್ಘಾಟನೆ, ಬೆಳಿಗ್ಗೆ 10.30 ಗಂಟೆಗೆ ಮಲ್ಲಕಂಭ ಪ್ರದರ್ಶನ, ಬೆಳಿಗ್ಗೆ 11 ಗಂಟೆಗೆ ಗಾಳಿಪಟ ಉತ್ಸವ, ಮಧ್ಯಾಹ್ನ 02.30 ಕ್ಕೆ ಕವಿಗೋಷ್ಠಿ, ಮಧ್ಯಾಹ್ನ 03.15 ರಿಂದ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 05 ಗಂಟೆಗೆ ಕೇಶ ವಿನ್ಯಾಶ, ಸಂಜೆ 5.30 ಗಂಟೆಗೆ ವಿಶೇಷ ಸಾಧಕರಿಗೆ ಸನ್ಮಾನ, ಸಂಜೆ 06 ಗಂಟೆಗೆ ಕುರುಗೋಡು ಉತ್ಸವದ ಉದ್ಘಾಟನಾ ಸಮಾರಂಭ ನೆರವೇರಲಿದೆ. ಬಳಿಕ ರಾತ್ರಿ 07 ಗಂಟೆಗೆ ಬೆಂಗಳೂರಿನ ಜೀ ಕನ್ನಡ ಕಾಮಿಡಿ ಕಿಲಾಡಿಗಳ ತಂಡದಿಂದ ಹಾಸ್ಯ ಸಂಜೆ ಕಾರ್ಯಕ್ರಮ, ರಾತ್ರಿ 08 ಗಂಟೆಗೆ ಖ್ಯಾತ ಸಂಗೀತ ಕಲಾವಿದ ಆಲ್ ಓಕೆ (ಅಲೋಕ್ ಬಾಬು) ಮತ್ತು ಸಂಗಡಿಗರಿಂದ ಕನ್ನಡಗೀತೆಗಳ ರಸಮಂಜರಿ ಕಾರ್ಯಕ್ರಮ, ರಾತ್ರಿ 09 ಗಂಟೆಗೆ ಖ್ಯಾತ ಸಂಗೀತ ಕಲಾವಿದ ಚಂದನ್ ಶೆಟ್ಟಿ ಮತ್ತು ಸಂಗಡಿಗರಿಂದ ಕನ್ನಡಗೀತೆಗಳ ರಸಮಂಜರಿ ಕಾರ್ಯಕ್ರಮ ನಡೆಯಲಿವೆ.

## ಆಕಸ್ಮಿಕ ಬೆಂಕಿಗೆ ಕಡಲೆ ಬಣವೆ ಭಸ್ಮ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಹುನಗುಂದ ತಾಲ್ಲೂಕಿನ ಹಗೇದಾಳ ಗ್ರಾಮದಲ್ಲಿ ಹೊಲದಲ್ಲಿ ಕೂಡಿ ಹಾಕಿದ್ದ ಕಡಲೆ ಬಣವಿಗೆ (ಗುಡ್ಡೆಗೆ) ಆಕಸ್ಮಿಕ ಬೆಂಕಿ ತಗುಲಿ ಕಡಲೆ ಬೆಳೆ ಸಂಪೂರ್ಣ ಸುಟ್ಟು ಕರಕಲಾದ ಘಟನೆ ಜರುಗಿದೆ.

ಗ್ರಾಮದ ಭರಮಗೌಡ ಸಕ್ಕರಗೌಡ ಅಗಸಿಮುಂದಿನ ಅವರಿಗೆ ಸೇರಿದ್ದ ಜಮೀನಿನಲ್ಲಿ ಬೇರೆ ಹೊಲಗಳಿಂದ ಕಟಾವು ಮಾಡಿ ತಂದಿದ್ದ ಕಡಲೆಯನ್ನು ಗುಡ್ಡೆ ಹಾಕಲಾಗಿತ್ತು. ನಸುಕಿನ ಜಾವ ಹೊತ್ತಿಕೊಂಡ ಬೆಂಕಿಯ ಕೆನ್ನಾಲಿಗೆಗೆ 18 ಕ್ವಿಂಟಲ್ಲಿಗೂ ಹೆಚ್ಚು ಕಡಲೆ ಬೆಳೆ ಸಂಪೂರ್ಣ ಸುಟ್ಟು ಬೂದಿಯಾಗಿದ್ದು, ಅಂದಾಜು 1 ಲಕ್ಷ ರೂಪಾಯಿ ಮೌಲ್ಯದ ಕಡಲೆ ಬೆಳೆ ಹಾನಿಯಾಗಿದೆ ಎಂದು ಹೇಳಲಾಗಿದೆ.

ಸ್ಥಳಕ್ಕೆ ಕಂದಾಯ ನಿರೀಕ್ಷಕ ನಾಗರಾಜ ಬಿಸನಾಳ, ಗ್ರಾಮ ಆಡಳಿತ ಅಧಿಕಾರಿ ಮುರಳಿ ಹೊಸಮನಿ, ಗ್ರಾಮ ಸಹಾಯಕ ರೆಹಮಾನಸಾಬ್ ವಾಲಿಕಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಸಾಲ ಮಾಡಿ ಕಡಲೆ ಬಿತ್ತನೆ ಮಾಡಿದ್ದು ಈಗ ಬೆಳೆಯೇ ಸುಟ್ಟು ಬೂದಿಯಾಗಿದೆ. ಆಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಭರಮಗೌಡ ಅಗಸಿಮುಂದಿನ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ.

## ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಉತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ಫೆಬ್ರುವರಿ 20ರಂದು ನವನಗರದ ಕಲಾಭವನದಲ್ಲಿ ಬಾಗಲಕೋಟೆ ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಉತ್ಸವ(ಕಾರ್ಯಗಾರ)ಆಯೋಜಿಸಲಾಗುವುದು ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ(ಬ್ಯಾಡಗಿ) ಹೇಳಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಜರುಗಿದ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಉತ್ಸವ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಉತ್ಸವವನ್ನು ಅತ್ಯಂತ ಸಂಭ್ರಮದಿಂದ ಮಾದರಿಯಾಗುವಂತೆ ಆಚರಿಸಿ ಯಶಸ್ವಿಗೊಳಿಸಬೇಕಾದ್ದು ಎಲ್ಲರ ಜವಾಬ್ದಾರಿಯಾಗಿದೆ ಎಂದರು.

ನವನಗರದ ಕಲಾಭವನಕ್ಕೆ ಭೇಟಿ ನೀಡಿ ಸ್ಥಳ ಪರಿಶೀಸಲಾಗಿದ್ದು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಸಹಕಾರ ನೀಡಿ ಸರಕಾರದ ಈ ಪಂಚ ಗ್ಯಾರಂಟಿ ಯೋಜನೆಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಮಾಡಿ ಯಶಸ್ವಿಗೊಳಿಸಬೇಕಾಗಿದೆ ಎಂದು ಪಾಟೀಲ ಹೇಳಿದರು.

ಉತ್ಸವಕ್ಕೆ ಕನಿಷ್ಠ 3 ಸಾವಿರ ಫಲಾನುಭವಿಗಳು ಆಗಮಿಸುವ ನೀರಿಕ್ಷೆ ಇದ್ದು, ಈ ಕಾರ್ಯಕ್ರಮದಲ್ಲಿ ಎಲ್ಲೂ ಲೋಪದೋಷಗಳು ಉಂಟಾಗದಂತೆ ಅಚ್ಚುಕಟ್ಟಾಗಿ ಆಯೋಜಿಸಬೇಕು. ಪ್ರತಿ ತಾಲೂಕು ಹಾಗೂ ಗ್ರಾಮ ಪಂಚಾಯಿತಿಯಿಂದ ಫಲಾನುಭವಿಗಳು ಆಗಮಿಸುವದರಿಂದ ಅವರು ಸುರಕ್ಷಿತವಾಗಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಹಿತಿ ಪಡೆದು ಮತ್ತೆ ನಿಗದಿತ ಸಮಯಕ್ಕೆ ಸುರಕ್ಷಿತವಾಗಿ ಮರಳುವಂತಾಗಬೇಕು. ಈ ನಿಟ್ಟಿನಲ್ಲಿ ಸಮಿತಿಗಳನ್ನು ರಚಿಸಿಕೊಂಡು ವ್ಯವಸ್ಥಿತವಾಗಿ ಕೆಲಸ ಮಾಡಬೇಕು ಎಂದು ಅವರು ಸೂಚಿಸಿದರು.

ಮಹಿಳೆಯರ ಸಬಲೀಕರಣಕ್ಕೆ ಪಂಚ್ ಗ್ಯಾರಂಟಿ ಯೋಜನೆಗಳು ಸಾಕಷ್ಟು ಸಹಕಾರ ನೀಡಿವೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳೇ ಭಾಗವಹಿಸುವರು. ಅವರಿಗೆ ಇನ್ನೂ ಸ್ಫೂರ್ತಿ ನೀಡಲು ಅವರು ತಮ್ಮ ಯಶೋಗಾಥೆಗಳನ್ನು ಹೇಳಲು ಅವಕಾಶ ನೀಡಬೇಕು. ಐದು ಗ್ಯಾರಂಟಿ ಯೋಜನೆಗಳ ಪ್ರತ್ಯೇಕ ಮಾಹಿತಿ ಮಳಿಗೆಗಳನ್ನು ತೆರೆದು, ಗ್ಯಾರಂಟಿ ಯೋಜನೆಗಳ ಮಾಹಿತಿ ನೀಡುವ ಜನಪದ ಗಾಯನ ನೃತ್ಯ ಗಳ ಮೂಲಕ ಜನರನ್ನು ಆಕರ್ಷಿಸಿ ಉತ್ಸವವನ್ನು ಹಮ್ಮಿಕೊಳ್ಳಬೇಕು ಎಂದು ಪಾಟೀಲ ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನಿಲ ದಡ್ಡಿ ಮಾತನಾಡಿ, ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜನಪ್ರತಿನಿಧಿಗಳು ಆಗಮಿಸಲಿದ್ದು, ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ, ವೇದಿಕೆ ವ್ಯವಸ್ಥೆ, ಫಲಾನುಭವಿಗಳೊಂದಿಗೆ ಚರ್ಚೆ ಮತ್ತು ಉಟೋಪಚಾರದ ವ್ಯವಸ್ಥೆ ಸೇರಿ ಎಲ್ಲವೂ ಅಚ್ಚುಕಟ್ಟಾಗಿ ನಡೆಯಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರು, ಸದಸ್ಯರು ಹಾಗೂ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಶಾಮಸುಂದರ ಕಾಂಬಳೆ ಸೇರಿದಂತೆ ಇತರರು ಇದ್ದರು.

### ಅಂತಿಮ ಮತದಾರರ ಪಟ್ಟಿ ಪ್ರಕಟ: ಆಕ್ಷೇಪಣೆ ಸಲ್ಲಿಸಲು ಅವಕಾಶ

## ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 2,58,118 ಮತದಾರರು

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**




ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಅಂತಿಮ ಮತದಾರರ ಪಟ್ಟಿಯನ್ನು ಶನಿವಾರ ಪ್ರಕಟಿಸಲಾಗಿದ್ದು, 1,26,233 ಪುರುಷ ಹಾಗೂ 1,31,863 ಮಹಿಳಾ ಮತದಾರರು ಸೇರಿ ಒಟ್ಟು 2,58,118 ಮತದಾರರು ಇದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಜರುಗಿದ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿಯನ್ನು ವಿವಿಧ ರಾಜಕೀಯ ಪ್ರತಿನಿಧಿಗಳಿಗೆ ವಿತರಿಸಿ ಮಾತನಾಡಿದ ಅವರು, ಬಾಗಲಕೋಟೆ ಮತಕ್ಷೇತ್ರದಲ್ಲಿ ಒಟ್ಟು 2,58,118 ಅಂತಿಮ ಮತದಾರರು, 391 ಸೇವಾ ಮತದಾರರು ಇದ್ದಾರೆ. ಇದರಲ್ಲಿ ಯುವ ಮತದಾರರು 3538, ವಿಕಲಚೇತನ ಮತದಾರರು 2582 ಹಾಗೂ 85 ಕ್ಕಿಂತ ಹೆಚ್ಚಿನ ವಯಸ್ಸಿನ ಮತದಾರರು 3039, ಇತರೆ 22 ಮತದಾರರು ಹಾಗೂ ಸೇವಾ ಮತದಾರರು 391 ಇದ್ದಾರೆಂದು ತಿಳಿಸಿದರು.

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ 3915 ಮತದಾರರು ಹೊಸದಾಗಿ ಸೇರ್ಪಡೆಯಾಗಿದ್ದು, 1300 ಮತದಾರರನ್ನು ತೆಗೆದು ಹಾಕಲಾಗಿದೆ. ತೆಗೆದು ಹಾಕಲಾದ ಮತದಾರರಲ್ಲಿ 543 ಮೃತಪಟ್ಟವರು, 413 ವರ್ಗಾವಣೆಯಾದವರು, ಮತ್ತು 344 ಪುನರಾವರ್ತನೆಗೊಂಡ ಮತದಾರರು ಇದ್ದಾರೆ ಎಂದು ಡಿಸಿ ಸಂಗಪ್ಪ ತಿಳಿಸಿದರು.

ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಮತದಾರರ ನೋಂದಣಿ ಅಧಿಕಾರಿ (ಉಪವಿಭಾಗಾಧಿಕಾರಿಗಳ) ಕಚೇರಿ, ಸಹಾಯಕ ಮತದಾರರ ನೋಂದಣಿ ಅಧಿಕಾರಿ (ತಹಶೀಲ್ದಾರ) ಕಚೇರಿ ಹಾಗೂ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಎಲ್ಲ ಮತಗಟ್ಟೆಗಳಲ್ಲಿ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ಅಧಿಕೃತ ವೆಬ್‌ಸೈಟ್ http://ceo.karnataka.gov.in/enನಲ್ಲಿ ಪ್ರಕಟಿಸಲಾಗಿದೆ. ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಹಾಗೂ ವಿವರಗಳು ಸರಿಯಾಗಿ ಇರುವ ಬಗ್ಗೆ ಪರಿಶೀಲಿಸಿಕೊಳ್ಳಬಹುದಾಗಿದೆ ಎಂದರು.

ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿದ್ದು, ಚುನಾವಣೆ ಘೋಷಣೆಯಾದ ದಿನಾಂಕದಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕದ 10 ದಿನ ಮುಂಚಿತವಾಗಿ ಸ್ವೀಕೃತಗೊಂಡ ಅರ್ಜಿಗಳನ್ನು ವಿಲೇವಾರಿ ಮಾಡಲು ಅವಕಾಶ ವಿರುವದರಿಂದ ಅರ್ಜಿಗಳನ್ನು ಸಂಬಂಧಿಸಿದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಅಧಿಸೂಚಿತ ಮತದಾರರ ನೋಂದಣಿ ಅಧಿಕಾರಿ, ಸಹಾಯಕ ಮತದಾರರನೋಂದಣಿ ಅಧಿಕಾರಿಗಳಲ್ಲಿ ನಿಗದಿತ ನಮೂನೆಗಳಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಅರ್ಹ ಮತದಾರರು ತಮ್ಮ ಮೊಬೈಲ್‌ನಲ್ಲಿ VoterHelpline ಡೌನಲೋಡ್ ಮಾಡಿಕೊಂಡು ಇಲ್ಲವೇ ವೆಬ್‌ಸೈಟ್ http://voters.eci.gov.in/ಮೂಲಕ ಸರಿಯಾದ ವಿವರಗಳೊಂದಿಗೆ ಹಾಗೂ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಮತದಾರರ ಪಟ್ಟಿ, ಮತದಾರರ ಗುರುತಿನ ಚೀಟಿ ಹಾಗೂ ಅರ್ಜಿಗಳ ಸಲ್ಲಿಕೆಗೆ ಸಂಬಂದಿಸಿದ ಮಾಹಿತಿಗಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಚುನಾವಣಾ ವಿಭಾಗದ ಅಧಿಕಾರಿ ಮಹೇಶ ಪಾಂಡವ, ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳಾದ ಶ್ರೀನಿವಾಸ ಬಳ್ಳಾರಿ,

ನಾಗರಾಜ ಹದ್ಲಿ, ಬಸವರಾಜ ಮಲ್ಲಪ್ಪ ಹುನಗುಂದ, ಜಯಂತ ಕುರಂದವಾಡ, ಯಮನಪ್ಪ ಶಿರೂರ, ಭೀಮಪ್ಪ, ಪ್ರಭುರಾಜ ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸೂಳೆಭಾವಿಯಲ್ಲಿ ಶೂಲೇಶ್ವರ ಧಾರ್ಮಿಕ ಉತ್ಸವ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಹುನಗುಂದ ತಾಲೂಕಿನ ಸೂಳೆಭಾವಿ ಗ್ರಾಮದ ಚಾಲುಕ್ಯರ ಕಾಲದ ಶತಮಾನದ ಶ್ರೀ ಶೂಲೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಅಂಗವಾಗಿ ಫೆಬ್ರುವರಿ 15 ಹಾಗೂ 17ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕೈಗಾರಿಕೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಹೇಳಿದರು.

ಗ್ರಾಮದ ಶೂಲೇಶ್ವರ ದೇವಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಧಾರ್ಮಿಕ ಉತ್ಸವದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಗ್ರಾಮದ ಇತಿಹಾಸ ಸಾರುವ ಈ ದೇವಾಲಯವು ಜೀರ್ಣೋದ್ಧಾರಗೊಂಡ ನಂತರ ಸೇವಾ ಸಮೀತಿಯವರು ಹಲವಾರು ಕ್ರಿಯಾತ್ಮಕ ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಬಂದಿದ್ದಾರೆ ಎಂದರು.

ಫೆಬ್ರುವರಿ 15ರಂದು ಮಹಾಶಿವರಾತ್ರಿ ದಿವಸ ದೇವಾಲಯದಲ್ಲಿ ತ್ರಿಕಾಲ ಪೂಜೆ, ನಸುಕಿನ ಜಾವ ಮಹಾರುದ್ರಾಭಿಷೇಕ, ಬೆಳಿಗ್ಗೆ 7 ಘಂಟೆಗೆ ಮಹಾಮೃತ್ಯುಂಜಯ ಹೋಮ, 11.30 ಕ್ಕೆ ಗೋಪೂಜೆ, 12.15 ಕ್ಕೆ 2ನೇ ರುದ್ರಾಭಿಷೇಕ, ಮಧ್ಯಾಹ್ನ 1 ಘಂಟೆಗೆ ಮಹಾಪ್ರಸಾದ ಇರುತ್ತದೆ. ಸಾಯಂಕಾಲ 4 ಘಂಟೆಗೆ ಸಾರ್ವಜನಿಕರಿಗೆ ಈಶ್ವರನ ಸ್ಪರ್ಶ ದರ್ಶನ ಇರುವುದು ಎಂದು ನಂಜಯ್ಯನಮಠ ತಿಳಿಸಿದರು.

ದಿನಾಂಕ 17 ರಂದು ಅಮವಾಸ್ಯೆ ದಿವಸ ಮಂಗಳವಾರ ಬೆಳಗ್ಗೆ 8 ಘಂಟೆಗೆ ಶೂಲೇಶ್ವರ ಮಹಿಳಾ ಸೇವಾ ಸಮೀತಿಯವರಿಂದ ಶೂಲೇಶ್ವರನಿಗೆ ಕ್ಷೀರಾಭಿಷೇಕ ಹಾಗೂ ಮಧ್ಯಾಹ್ನ ಮಹಾಪ್ರಸಾದ ಇರುವುದು. ಗ್ರಾಮದ ಸಕಲ ಸದ್ಭಕ್ತರು ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ತನು ಮನ ಧನದಿಂದ ಸೇವೆ ಸಲ್ಲಿಸಬೇಕೆಂದು ನಂಜಯ್ಯನಮಠ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಐಎಎಸ್ ಅಧಿಕಾರಿ ಪ್ರಕಾಶ ಪಾಟೀಲ, ಪಿಕೆಪಿಎಸ್ ಮಾಜಿ ಅಧ್ಯಕ್ಷ ಗದಗಯ್ಯ ನಂಜಯ್ಯನಮಠ, ಜ್ಯುವೇಲರಿ ಮಾಲೀಕ ಪ್ರಕಾಶ ಪತ್ತಾರ, ಕಾಶಿಮಸಾಬ ಬೂದಿಹಾಳ, ಅಂದಾನಯ್ಯ ಪಾಟೀಲ, ಶಾಖಾಂಬರಿ ನೇಕಾರ ಸಹಕಾರಿ ಸಂಘದ ಅಧ್ಯಕ್ಷ ಪ್ರವೀಣ ರಾಮದುರ್ಗ, ಉಪಾಧ್ಯಕ್ಷ ಮಂಜುನಾಥ ಮಿಣಜಗಿ, ಶೂಲೇಶ್ವರ ಸೇವಾ ಸಮೀತಿ ಉಪಾಧ್ಯಕ್ಷ ನಾಗೇಶ್ ಗಂಜಿಹಾಳ, ಹನಮಗೌಡ ಕತ್ತಿ, ಈರಣ್ಣ ಫರಾಳದ, ಡಿ.ಬಿ.ವಿಜಯಶಂಕರ, ಮಾನು ಹೊಸಮನಿ, ಮಹಿಳಾ ಸಮಿತಿಯ ನೀಲಮ್ಮ ಶಿನ್ನೂರ, ರೇಷ್ಮಾ ಸಾಧನಿ, ನಿಂಗಮ್ಮ ಎಮ್ಮಿ, ಸುಲೋಚನಾ ದಡ್ಡೆನ್ನವರ, ಲಕ್ಷ್ಮೀಬಾಯಿ ಕೋಟಿಕಲ್ಲ ಉಪಸ್ಥಿತರಿದ್ದರು.

## ವಿಕಲಚೇತನರಿಗೆ ಕಂಪ್ಯೂಟರ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸ್ಥಳೀಯ ಪಟ್ಟಣ ಪಂಚಾಯತಿ ವತಿಯಿಂದ ವಿಶೇಷಚೇತನ ಪದವಿ ವಿದ್ಯಾರ್ಥಿಗಳಿಗೆ ಶುಕ್ರವಾರ ಕಂಪ್ಯೂಟರ ವಿತರಿಸಲಾಯಿತು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಶಿವಾನಂದ ಆಲೂರ ಕಂಪ್ಯೂಟರ ವಿತರಿಸಿ ಮಾತನಾಡಿ, ರಾಜ್ಯ ಸರಕಾರದ ಯೋಜನೆಯ ವಿಶೇಷಚೇತನರ ಸ್ಥಳೀಯ ನಿಧಿಯ ಅನುದಾನದ ಶೇ.5ರ ಹಣದಲ್ಲಿ ಕಂಪ್ಯೂಟರ ವಿತರಿಸಲಾಗುತ್ತಿದ್ದು ಅರ್ಹ ಪದವಿ ಹಾಗೂ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳು ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಹೇಳಿದರು.

ಈಗಾಗಲೇ 6 ಜನ ಪದವಿ ವಿದ್ಯಾರ್ಥಿಗಳಿಗೆ ತಲಾ 6 ಸಾವಿರ ರೂ.ಗಳಂತೆ ಸಹಾಯಧನ ನೀಡಲಾಗಿದೆ. ಎಂದು ಆಲೂರ ಹೇಳಿದರು. ಪಟ್ಟಣ ಪಂಚಾಯತಿ ವ್ಯವಸ್ಥಾಪನಾಧಿಕಾರಿ ಯು.ಜಿ. ವರದಪ್ಪನವರ, ನಾಮನಿರ್ದೇಶಿತ ಸದಸ್ಯರಾದ ಹನಮಂತ ಆಡಿನ, ಜಗದೀಶ ದೇಸಾಯಿ ಮತ್ತು ಆರ್.ಎಸ್.ಅಂಗಡಿ, ಜಿ.ಜಿ. ಹಿರೇಮಠ, ಸೋಮು ಕುರಿಗಾರ, ಬಸವರಾಜ ಹಿರೇಕುಂಬಿ ಇದ್ದರು.

## 24 ಜೀತದಾಳು ಕಾರ್ಮಿಕರ ರಕ್ಷಣೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಇಳಕಲ್ ತಾಲೂಕಿನ ಸಂಕ್ಲಾಪುರ ಗ್ರಾಮ ಬಳಿಯ ಇಟ್ಟಿಗೆ ಬಟ್ಟಿಯೊಂದರಲ್ಲಿ ಜೀತಕ್ಕಿದ್ದ ಐವರು ಬಾಲ ಕಾರ್ಮಿಕರೂ ಸೇರಿದಂತೆ 24 ಜನರನ್ನು ರಕ್ಷಿಸಲಾಗಿದೆ.

ಈ ಕುರಿತು ದೂರು ಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಹುನಗುಂದ ತಹಶೀಲ್ದಾರ ಅಮರೇಶ ಪಮ್ಮಾರ ನೇತೃತ್ವದ ತಂಡ ಕಾರ್ಮಿಕರನ್ನು ರಕ್ಷಿಸಿದೆ. ಈ ಸಂಬಂಧ ಇಟ್ಟಿಗೆ ಬಟ್ಟಿ ಮಾಲೀಕ ಈರಪ್ಪ ಕುಂಬಾರ ಎಂಬಾತನ ಮೇಲೆ ಇಳಕಲ್ಲ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಬಾಲಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ, ಜೀತ ಪದ್ಧತಿ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಓಡಿಸ್ಸಾದಿಂದ ಕಾರ್ಮಿಕರಿಗೆ ಮುಂಗಡ ಹಣ ನೀಡಿ ಕರೆತರಲಾಗಿತ್ತು. ವಾರಕ್ಕೆ 400 ರೂ.ಗಳಂತೆ ಕೂಲಿ ನೀಡಲಾಗುತ್ತಿತ್ತು. ಕನಿಷ್ಠ ಮೂಲಸೌಕರ್ಯಗಳನ್ನೂ ನೀಡದೆ ಇಟ್ಟಿಗೆ ಬಟ್ಟಿಯಲ್ಲಿ ಶೋಷಣೆ ಮಾಡಲಾಗುತ್ತಿತ್ತು ಎಂದು ಆರೋಪಿಸಲಾಗಿದೆ. ಕಾರ್ಮಿಕರನ್ನು ಅವರ ರಾಜ್ಯಕ್ಕೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಐ.ಟಿ.ಇ.ಪಿ. ಕೋರ್ಸ ಪ್ರವೇಶ ಪರೀಕ್ಷೆ ಅರ್ಜಿ ಆಹ್ವಾನ

ಅಂಕೋಲಾ:ಕಳೆದ ಶೈಕ್ಷಣಿಕ ವರ್ಷದಿಂದ ಪಟ್ಟಣದ ಜಿ. ಸಿ. ಕಾಲೇಜಿನಲ್ಲಿ ಪ್ರಾರಂಭವಾಗಿರುವ ನಾಲ್ಕು ವರ್ಷಗಳ ಸಂಯುಕ್ತ ಶಿಕ್ಷಕರ ಕೋರ್ಸ (ಐ.ಟಿ.ಇ.ಪಿ.) ಬಿ.ಎ.ಬಿಎಡ್. ಮತ್ತು ಬಿ.ಎಸ್ಸಿ. ಬಿ.ಎಡ್. ತರಗತಿಗೆ 2026–2027ನೇ ಸಾಲಿನ ಪ್ರವೇಶ ಪರೀಕ್ಷೆಗೆ ಎನ್.ಟಿ.ಎ. ನವದೆಹಲಿ ಇವರು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಆನಲೈನ ಮೂಲಕ ಅರ್ಜಿ ಸಲ್ಲಿಸಲು ಕೋರಿದ್ದಾರೆ.

ಅರ್ಜಿ ಸಲ್ಲಿಸಲು 10 ಮಾರ್ಚ 2026 ಕೊನೆಯ ದಿನವಾಗಿದ್ದು ಪ್ರವೇಶ ಪರೀಕ್ಷೆ ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ಶಿವಮೊಗ್ಗಾ, ಬೆಂಗಳೂರು ಕೇಂದ್ರಗಳಲ್ಲಿ ಎ. 17 ರಂದು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅರ್ಜಿ ಸಲ್ಲಿಸುವ ವೆಬ್‌ಸೈಟ್ ವಿಳಾಸ : https://neet.nta.nic.in/ಪ್ರವೇಶ ಪರೀಕ್ಷೆಗೆ ಹಾಜರಾಗಲಿರುವ ಕಲಾ ಮತ್ತು ವಿಜ್ಞಾನ ವಿಭಾಗಗಳ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಜಿ. ಸಿ. ಕಾಲೇಜಿನಲ್ಲಿ ಏರ್ಪಡಿಸಲಾಗುವುದು ಎಂದು ಪ್ರಾಚಾರ್ಯ ಡಾ. ಎಸ್. ವಿ. ವಸ್ತ್ರದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. 8971930563, 9964428710 ಸಂಪರ್ಕಿಸಲು ಕೋರಲಾಗಿದೆ.

## ನಾಮಧಾರಿ ಸಮಾಜದ ಕುಲಶಾಸ್ತ್ರ ಅಧ್ಯಯನಕ್ಕೆ ಸ್ಪಂದನೆ ಅಗತ್ಯ: ನಾಯ್ಕ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**

ಡಿ. ದೇವರಾಜ ಅರಸು ಸಂಸ್ಥೆ ಬೆಂಗಳೂರು ವತಿಯಿಂದ ನಡೆಸುತ್ತಿರುವ ಉ. ಕ. ಜಿಲ್ಲೆಯ ನಾಮಧಾರಿ (ಈಡಿಗ ಸಮುದಾಯ) ಸಮಾಜ ಕುಲಶಾಸ್ತ್ರ ಅಧ್ಯಯನ ವರದಿ ತಯಾರಿಕೆಯ ಹಿನ್ನೆಲೆಯಲ್ಲಿ ಅಂಕೋಲಾ ತಾಲೂಕಿನ ಸಮಾಜದ ಹಿರಿಯರೊಂದಿಗೆ ಪೂರ್ವಭಾವಿ ಸಮಾಲೋಚನಾ ಸಭೆ ನಡೆಸಿ ಪೂರಕ ಅಭಿಪ್ರಾಯ ಮತ್ತು ದಾಖಲೆ ಸಂಗ್ರಹಣೆಗಾಗಿ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಡಾ. ನಾಗೇಶ ನಾಯ್ಕ ಕಾಗಾಲ ಮಾತನಾಡಿ, ಸರಕಾರಕ್ಕೆ ಸಲ್ಲಿಕೆಯಾಗುವ ವರದಿಗಾಗಿ ನೀಡುವ ಮಾಹಿತಿಯ ಪುರಾವೆಗಳನ್ನು ಒಮ್ಮತದಿಂದ ರೂಪಿಸುವುದು ಸೂಕ್ತ ಎಂದು ತಿಳಿಸಿದರು. ಪ್ರಾಚಾರ್ಯ ರಾಜೀವ



**ವಿವರಗಳಿಗೆ ಇಲ್ಲಿ ಸಂಪರ್ಕಿಸಿ**

**ನಾಮಧಾರಿ ಕುಲಶಾಸ್ತ್ರ ಅಧ್ಯಯನಕ್ಕೆ ಪೂರಕವಾಗಿರುವ ಯಾವುದೇ ಅಧಿಕೃತ ಮಾಹಿತಿ, ದಾಖಲಾತಿ, ಪುಸ್ತಕ, ಶಾಸನಗಳು, ಪುರಾವೆಗಳು ಇತ್ಯಾದಿಗಳ ವಿನಿಮಯಕ್ಕಾಗಿ ಪ್ರಾಚಾರ್ಯ ರಾಜೀವ ನಾಯ್ಕ ಕೋನಳ್ಳಿ (98453 64966), ಲೇಖಕ ನಾಗರಾಜ ನಾಯ್ಕ ಮಂಜಗುಣಿ (9844384013), ಡಾ. ನಾಗೇಶ ನಾಯ್ಕ ಕಾಗಾಲ (9481464149) ಇವರನ್ನು ಸಂಪರ್ಕಿಸಲು ವಿನಂತಿಸಿದ್ದಾರೆ.**

ನಾಯ್ಕ ಕೊನಳ್ಳಿ, ಲೇಖಕ ನಾಗರಾಜ ಮಂಜಗುಣಿ ಮಾತನಾಡಿ ಸಭೆಯ ಮಹತ್ವ ಮತ್ತು ಸಮಾಜದ ಹಿನ್ನೆಲೆ ಕುರಿತು ವಿವರಿಸಿದರು.

ಕರ್ನಾಟಕ ಆರ್ಯ ಈಡಿಗ ನಾಮಧಾರಿ ಸಂಘದ ಕಾರ್ಯದರ್ಶಿ ಏಕನಾಥ ನಾಯ್ಕ ಮಾತನಾಡಿ, ಇನ್ನೊಮ್ಮೆ ಸಮಾಜದ ಸಭೆ ಕರೆದು ಚರ್ಚಿಸಿ, ಒಮ್ಮತದಿಂದ ಮಾಹಿತಿ ಸಂಗ್ರಹಿಸಿ ನೀಡುವ ಕಾರ್ಯ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಮಂಜುಳಾ ನಾಯ್ಕ, ರಮೇಶ ಎಸ್. ನಾಯ್ಕ, ವಿ. ಎನ್. ನಾಯ್ಕ ಬೇಡ್ಕಣಿ, ಸಿ. ಆರ್. ನಾಯ್ಕ ಕೆಳಗಿನಸಸಿ, ವೀರಭದ್ರ ನಾಯ್ಕ ಮಳಲಿ, ನಾರಾಯಣ ಡಿ. ನಾಯ್ಕ ಕೊಡ್ಲಣಿ, ಶಿವಾನಂದ ಪಿ. ನಾಯ್ಕ ಮದುರೊಳ್ಳಿ ಮುಂತಾದವರು ಉಪಸ್ಥಿತರಿದ್ದರು. ರಾಷ್ಟ್ರೀಯ ಈಡಿಗ ಮಹಾಮಂಡಳಿಯ ತಾಲೂಕು ಅಧ್ಯಕ್ಷ ದಾಮೋದರ ಜಿ. ನಾಯ್ಕ ಸ್ವಾಗತಿಸಿದರು.

## ಬಾಲ್ಯ ವಿವಾಹ ಮುಕ್ತಗೊಳಿಸುವಲ್ಲಿ ಮಕ್ಕಳ ಪಾತ್ರವೂ ಇದೆ: ಶಶಿಧರ ಶೆಟ್ಟಿ


• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಲ್ಯವಿವಾಹ ಮುಕ್ತಗೊಳಿಸುವಲ್ಲಿ ಮಕ್ಕಳ ಪಾತ್ರವು ಕೂಡ ಇದ್ದು, ಮಕ್ಕಳು ಮುಕ್ತವಾಗಿ ಪಾಲ್ಗೊಂಡಾಗ ಸಾಕಷ್ಟು ಬಾಲ್ಯವಿವಾಹಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್. ಶಶಿಧರ ಶೆಟ್ಟಿ ಹೇಳಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಶನಿವಾರದಂದು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು, ಜಿಲ್ಲಾ ಪಂಚಾಯತ್, ವಕೀಲರ ಸಂಘ ಬಾಗಲಕೋಟ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಾಲ್ಯ ವಿವಾಹ ಮುಕ್ತಗೊಳಿಸುವಲ್ಲಿ ಮಕ್ಕಳ ಪಾತ್ರ ಎಂಬ ಕಾರ್ಯಗಾರದಲ್ಲಿ ಭಾಗವಹಿಸಿ ಮಾತನಾಡಿದ ಅವರು ಬಾಲ್ಯವಿವಾಹದಂತಹ ಪ್ರಕರಣಗಳಲ್ಲಿ ಮಕ್ಕಳು ಸ್ವಯಂ ಆಗಿ ತಮ್ಮನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ತಮ್ಮ ಶಾಲಾ ಸಹಪಾಠಿಗಳು, ನೆರೆ ಹೊರೆಯ ಅಥವಾ ಸಂಭಂದಿಕರ ಮಕ್ಕಳು ಇಲ್ಲವೆ ಸಹೋಧರ, ಸಹೋಧರಿಯರ ಮದುವೆ 18 ವರ್ಷಕ್ಕಿಂತ ಮುಂಚಿತವಾಗಿ ನಡೆಯುತ್ತಿದೆ ಎಂದು ತಿಳಿದ ತಕ್ಷಣ 1098 ಅಥವಾ 112 ಗೆ ಕರೆ ಮಾಡಿ ಇತರೆ ಮಕ್ಕಳನ್ನು ರಕ್ಷಣೆ ಮಾಡಬಹುದಾಗಿದೆ. ವಯಸ್ಕರರಗಿಂತ ಮಕ್ಕಳಿಗೆ ಹೆಚ್ಚಿನ ಕಾನೂನು ರಕ್ಷಣೆ ಇದೆ. ಮಕ್ಕಳು ಹೆದರುವ ಅವಶ್ಯಕತೆ ಇರುವದಿಲ್ಲ ಎಂದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎನ್.ವಿ.ವಿಜಯ ಅವರು ಮಾತನಾಡಿ ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಮಕ್ಕಳು ಅರಿತುಕೊಂಡಲ್ಲಿ ತಾವು ಬಲಿಪಶುಗಳಾಗುವದರಿಂದ ಸಹಜವಾಗಿ ತಪ್ಪಿಸಿಕೊಳ್ಳುತ್ತಾರೆ. ಆಡುವ ಕೂಸಿಗೆ ಕಾಡುವ ಕೂಸು ಹುಟ್ಟುವಂತಾಗಬಾರದು. ಮಕ್ಕಳ ಭವಿಷ್ಯ ನಿಮ್ಮ ಕೈಯಲ್ಲೇ ಇದೆ ಎಂದು ಪಾಲಕರಿಗೂ ತಿಳುವಳಿಕೆ ನೀಡಿ. ಶಾಲಾ ಶಿಕ್ಷಕರು, ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ಸೇರಿ ಎಲ್ಲರೂ ಅರಿತು ಬೆರೆತು ಜಾಗೃತಿ ಮೂಡಿಸಬೇಕು. ಒಟ್ಟಿನಲ್ಲಿ ಬಾಗಲಕೋಟೆ ಜಿಲ್ಲೆಯನ್ನು ಬಾಲ್ಯ ವಿವಾಹದಿಂದ ಮುಕ್ತಗೊಳಿಸಬೇಕು ಎಂದು ತಿಳಿಸಿದರು. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ ಕರ್ಣಂ ಅವರು ಮಾತನಾಡಿ ಬಾಲ್ಯ ವಿವಾಹವು ಒಂದು ಸಾಮಾಜಿಕ ಪಿಡುಗು. ಅದಕ್ಕೆ ಶಿಕ್ಷಣವೇ ಮದ್ದು ಆಗಿರುತ್ತದೆ. ಶಿಕ್ಷಣಕ್ಕೆ ಒತ್ತು ಕೊಟ್ಟಾಗ ಬಾಲ್ಯ ವಿವಾಹದಂತಹ ಪ್ರಕರಣಗಳು ಕಡಿಮೆಯಾಗುತ್ತವೆ. ಸರಕಾರವು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸುತ್ತಿದೆ. ಇದರ ಸದಳಕೆಯನ್ನು ಮಾಡಿಕೊಂಡು ಸಮುದಾಯಗಳು ಜಾಗೃತಗೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ ಬಾಲ್ಯ ಎನ್ನುವುದು ಬೆಳವಣಿಗೆ ಹಂತ ಮತ್ತು ಮುಗ್ದತೆಯಿಂದ ಕೂಡಿರುವಂತಹದ್ದು. ಬಾಲ್ಯದಲ್ಲಿಯೇ ವಿವಾಹವಾದರೆ ಮಕ್ಕಳ ಬೆಳವಣಿಗೆಯು ಕುಂಠಿತಗೊಂಡು ಆರೋಗ್ಯ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಈ ನಿಟ್ಟಿನಲ್ಲಿ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಬಾಲ್ಯ ವಿವಾಹವನ್ನು ವಿರೋಧಿಸಿ, ನಮ್ಮ ಊರು ಕೇರಿಗಳೆನ್ನೆಲ್ಲ ಬಾಲ್ಯ ವಿವಾಹದಿಂದ ಮುಕ್ತಗೊಳಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಬಾಲ್ಯ ವಿವಾಹ ನಿಷೇಧ ಕುರಿತು ಪ್ರತಿಜ್ಞಾ ವಿಧಿ ಬೋಧಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಗದ್ದಿ, ಕಾರ್ಯದರ್ಶಿ ಪಿ.ಹೆಚ್.ನಾರಾಯಣಕರ್ ಸೇರಿದಂತೆ ಇತರರು ಇದ್ದರು.

## ರಾಮಲಿಂಗೇಶ್ವರ ದೇವಸ್ಥಾನ ಜಾತ್ರಮಹೋತ್ಸವ ಸಂಪನ್ನ



ಮುದಗಲ್: ರಾಮಲಿಂಗೇಶ್ವರ ಬಡಾವಣೆಯಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಶನಿವಾರ ಜರುಗಿತು.

ಶ್ರೀ ರಾಮಲಿಂಗ ದೇವರಿಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ ಸೇರಿದಂತೆ ವಿವಿಧ ಪೂಜಾ ವಿಧಿ ವಿಧಾನಗಳು ಜರುಗಿದವು. ಪಟ್ಟಣದಲ್ಲಿ ವಿವಿಧ ಬಡಾವಣೆ ಹಾಗೂ ಬೀದಿಗಳಲ್ಲಿ ಶ್ರೀ ರಾಮಲಿಂಗೇಶ್ವರ ಕಳಸಾ, ಕುಂಭ ಮೆರವಣಿಗೆ ಮಾಡಲಾಯಿತು. ದೇವಸ್ಥಾನದ ಅರ್ಚಕ ರೇವಣ ಸ್ವಾಮಿ ನೇತೃತ್ವದಲ್ಲಿ ದೇವಸ್ಥಾನದ ತಲುಪಿ ಕಳಸಾರೋಣ ಮಾಡಲಾಯಿತು. ಭಕ್ತರಿಗೆ ಅನ್ನ ಸಂತರ್ಪಣ ವ್ಯವಸ್ಥೆ ಕಲ್ಪಿಸಲಾಗಿತ್ತು. ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.




ಶರಣಬಸಪ್ಪ ದಾನಕ್ಕೈ ಅಧ್ಯಕ್ಷ ಯಲಬುರ್ಗಾ ತಾಲೂಕು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ.

# ಗುರುಕುಲ ಪ್ರಥಮ ದರ್ಜೆ ಕಾಲೇಜಿನ ಮೂವರಿಗೆ ಸ್ಥಾನ

• ಪರಶುರಾಮ ಕರಣಂ ಭಾಲ್ಕಿ





ತಾಲ್ಲೂಕಿನ ತಳವಾಡ (ಕೆ) ಗ್ರಾಮದ ಚನ್ನಬಸವೇಶ್ವರ ಗುರುಕುಲ ಪ್ರಥಮ ದರ್ಜೆ ಕಾಲೇಜಿನ ಬಿ.ಎಸ್ಸಿ ವಿಭಾಗದ ಮೂವರು ವಿದ್ಯಾರ್ಥಿನಿಯರು ಗುಲಬರ್ಗಾ ವಿಶ್ವವಿದ್ಯಾಲಯ ಪ್ರಕಟಿಸಿರುವ ಟಾಪ್ 10 ವಿದ್ಯಾರ್ಥಿಗಳಲ್ಲಿ ಸ್ಥಾನ ಪಡೆದಿದ್ದು, ವಿದ್ಯಾರ್ಥಿನಿ ಪಲ್ಲವಿ ವಿಜಯಕುಮಾರ ಬೋರಾಳೆ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ ಎಂದು ಪ್ರಾಚಾರ್ಯ ಡಾ. ಕಿರಣ ಸಜ್ಜನಶೆಟ್ಟಿ ತಿಳಿಸಿದ್ದಾರೆ.

ವಿದ್ಯಾರ್ಥಿನಿ ರಾಣಿ ಉಮೇಶ್ ದಾಡ್ಗೆ ಪ್ರತಿಶತ 89.01 ಅಂಕ ಪಡೆದು ವಿಶ್ವವಿದ್ಯಾಲಯಕ್ಕೆ 3ನೇ ಸ್ಥಾನ, ಪಲ್ಲವಿ ವಿಜಯಕುಮಾರ ಬೋರಾಳೆ 88.65 ಪ್ರತಿಶತ ಅಂಕ ಪಡೆದು 6ನೇ, ವಾಣಿಶ್ರೀ ಅಶೋಕ ರಾಜೋಳೆ ಪ್ರತಿಶತ 88.14 ಅಂಕ ಪಡೆದು ವಿಶ್ವವಿದ್ಯಾಲಯಕ್ಕೆ 8ನೇ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯರಾದ ಬಸವರಾಜ ಮೊಳಕೀರೆ, ಕಿರಣ ಸಜ್ಜನಶೆಟ್ಟಿ, ಸಿಬ್ಬಂದಿ ವರ್ಗ ಸಂತಸ ವ್ಯಕ್ತಪಡಿಸಿದ್ದಾರೆ.

> ಗ್ರಾಮೀಣ ಭಾಗದ ಮೂವರು ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ರ್ಯಾಂಕ್ ಪಡೆದಿರುವುದು ಮತ್ತು ವಿದ್ಯಾರ್ಥಿನಿ ಪಲ್ಲವಿ ಚಿನ್ನದ ಪದಕಕ್ಕೆ ಆಯ್ಕೆಯಾಗಿರುವುದು ನಮ್ಮ ಕಾಲೇಜಿನಲ್ಲಿ ದೊರೆಯುತ್ತಿರುವ ಗುಣಾತ್ಮಕ, ಪ್ರಾಯೋಗಿಕ ಶಿಕ್ಷಣಕ್ಕೆ ಉದಾಹರಣೆಯಾಗಿದೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ನಮ್ಮ ಕಾಲೇಜಿನಲ್ಲಿ ಐಎಎಸ್ ಕೆಎಸ್ ಸೇರಿದಂತೆ ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಳನ್ನು ನೀಡಲಾಗುತ್ತಿದೆ. –ಡಾ. ಕಿರಣ್ ಸಜ್ಜನಶೆಟ್ಟಿ, ಪ್ರಾಚಾರ್ಯ

## ಪಿ.ರಾಮಯ್ಯಗೆ ಮಾಡಿದ ಅವಮಾನ: ಕೆಯುಡಬ್ಲ್ಯೂಜೆ ಖಂಡನೆ

**ಬೆಂಗಳೂರು:** ಹಿರಿಯ ಪತ್ರಕರ್ತರು&ವಿಧಾನ ಪರಿಷತ್ ಮಾಜಿ ಸದಸ್ಯರಾದ ಪಿ.ರಾಮಯ್ಯ ಅವರಿಗೆ ಸರ್ಕಾರಿ ಗೌರವ ಮೂಲಕ ಅಂತ್ಯಸಂಸ್ಕಾರ ಮಾಡಿದ ಕ್ರಮ ಸ್ವಾಗತಾರ್ಹ. ಆದರೆ ಪೊಲೀಸ್ ಬ್ಯಾರಿಕೆಡ್ ಹಾಕಿದ ಬಿಲ್ ನ್ನು ಪಿ.ರಾಮಯ್ಯ ಅವರ ಮನೆಗೆ ಕಳುಹಿಸಿದ್ದು ಅವಮಾನವೀಯ ಮತ್ತು ಖಂಡನೀಯ ಹಾಗೂ ಹಿರಿಯ ಜೀವಕ್ಕೆ ಮಾಡಿದ ಅವಮಾನ. ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಆಗ್ರಹಿಸುತ್ತದೆ.

## ಲಾಡ್ಲೆ ದರ್ಗಾ: ಶಿವಲಿಂಗ ಪೂಜೆಗೆ ಅಸ್ತು



**ಕಲಬುರಗಿ:** ಲಾಡ್ಲೆ ಮಶಾಕ್ ದರ್ಗಾ ಮತ್ತೊಮ್ಮೆ ಸುದ್ದಿಯಲ್ಲಿದೆ. ದರ್ಗಾದ ಆವರಣದಲ್ಲಿ ಇರುವ ರಾಘವ ಚೈತನ್ಯ ಶಿವಲಿಂಗಕ್ಕೆ ಶಿವರಾತ್ರಿ ದಿನ ಪೂಜೆ ಸಲ್ಲಿಸಲು ಅವಕಾಶ ನೀಡಿರುವ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಫೆಬ್ರವರಿ 15ರಂದು 14 ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಹಿಂದೂ ಭಕ್ತರಿಗೆ ಅನುಮತಿ ನೀಡಲಾಗಿದೆ.

ದರ್ಗಾ ಸಮಿತಿಯು ಹಿಂದೂ ಭಕ್ತರು ದರ್ಗಾ ಆವರಣದಲ್ಲಿ ಪೂಜೆ ಸಲ್ಲಿಸದಂತೆ ತಡೆಯುವಂತೆ ಸುಪ್ರೀಂಕೋರ್ಟ್ ಮೊರೆ ಹೋಗಿತ್ತು. ಆದರೆ, ಆ ಸ್ಥಳದಲ್ಲಿ ಶತಮಾನಕ್ಕೂ ಹೆಚ್ಚು ಕಾಲದಿಂದ ಶಿವಲಿಂಗ ಅಸ್ತಿತ್ವದಲ್ಲಿದ್ದು, ಕಳೆದ ಎರಡು ವರ್ಷಗಳಿಂದ ಶಿವರಾತ್ರಿ ಪೂಜೆ ನಡೆಯುತ್ತಿದೆ ಎಂದು ಖಖಖ ಕಾರ್ಯಕರ್ತ ಸಿದ್ರಾಮಯ್ಯ ಹಿರೇಮಠ ನ್ಯಾಯಾಲಯದಲ್ಲಿ ವಾದಿಸಿದ್ದರು.

ಹೈಕೋರ್ಟ್ ಪೀಠವು ಕೆಲ ದಿನಗಳ ಹಿಂದೆ ಸಿದ್ರಾಮಯ್ಯ ಹಿರೇಮಠ ಅವರಿಗೆ ಮಾತ್ರ ಪೂಜೆಗೆ ಅನುಮತಿ ನೀಡಿ, ಇತರರಿಗೆ ಅವಕಾಶ ನಿರಾಕರಿಸಿತ್ತು. ಇದಕ್ಕೆ ವಿರೋಧವಾಗಿ ದರ್ಗಾ ಸಮಿತಿ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಎಸ್ಸಿ ಶರ್ಮಾ ಅವರಿದ್ದ ಪೀಠವು ಈ ಅರ್ಜಿಯನ್ನು ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ವಿಚಾರಣೆ ನಡೆಸಲು ನಿರಾಕರಿಸಿತು. ನ್ಯಾಯಮೂರ್ತಿ ದತ್ತ ಅವರು, ಹೈಕೋರ್ಟ್ ಆದೇಶಗಳನ್ನು ಹೊರಡಿಸುತ್ತಿದೆ ಎಂಬ ಕಾರಣಕ್ಕೆ ಆರ್ಟಿಕಲ್ 32 ಅನ್ನು ಬಳಸಲಾಗುವುದಿಲ್ಲ. ಇದು ಅಖಿಲ ಭಾರತ ಮಟ್ಟದ ಸಮಸ್ಯೆಯಲ್ಲ. ಹೈಕೋರ್ಟ್ ಆದೇಶಗಳಿಂದ ತೊಂದರೆ–ಯಾಗಿದ್ದರೆ, ಬಾಧಿತ ಪಕ್ಷವು ಮೇಲ್ಮನವಿ ಮೂಲಕ ಸೂಕ್ತ ಕಾನೂನು ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

### 13 ಜನಕ್ಕೆ ಹೈಕೋರ್ಟ್ ಅನುಮತಿ

**ಕಲಬುರಗಿ ಅಳಂದದ ವಿವಾದಿತ ಲಾಡ್ಲೆಮಶಾಕ್ ದರ್ಗಾದಲ್ಲಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಹೈಕೋರ್ಟ್ ಮತ್ತೆ 13 ಜನಕ್ಕೆ ಅನುಮತಿ ನೀಡಿದೆ.ಈ ಮೊದಲು ಅರ್ಜಿ ಸಲ್ಲಿಸಿದ ಸಿದ್ದರಾಮಯ್ಯ ಹಿರೇಮಠ್ ಜತೆಗೆ ಇಂದಿನ ಅರ್ಜಿಯಲ್ಲಿ ಹೆಸರಿದ್ದ 14 ಜನರ ಪೈಕಿ, 13 ಜನರಿಗೆ ಅವಕಾಶ ಕಲ್ಪಿಸಿದೆ.**

# ಬಸವತತ್ವ ಪಾಲನೆಯಿಂದ ಸುಂದರ ಸಮಾಜ: ಪಟ್ಟದ್ದೇವರು

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪಾ



ಬಸವಣ್ಣನವರ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಕಾಯಕ, ದಾಸೋಹ, ಸಹೋದರತ್ವ, ಸಹಬಾಳ್ವೆ ಪಾಲನೆಯಿಂದ ಸುಂದರ ಸಮಾಜದ ನಿರ್ಮಾಣ ಸಾಧ್ಯ ಎಂದು ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧ್ಯಕ್ಷ, ಅನುಭವ ಮಂಟಪ ಅಧ್ಯಕ್ಷರಾದ ಡಾ. ಬಸವಲಿಂಗ ಪಟ್ಟದ್ದೇವರು ಅಭಿಪ್ರಾಯಪಟ್ಟರು.

ತಾಲೂಕಿನ ಕಂದಗೂಳ ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ (ರಿ) ಭಾಲ್ಕಿ ಅಡಿಯಲ್ಲಿ ನಡೆಯುತ್ತಿರುವ ಡಾ.ಚನ್ನಬಸವ ಪಟ್ಟದ್ದೇವರು ಪ್ರೌಢಶಾಲೆಯಲ್ಲಿ ವಿಶ್ವಗುರು ಬಸವಣ್ಣನವರ ಮೂರ್ತಿ ಅನಾವರಣ ಹಾಗೂ ಶಾಲೆಯ ವಾರ್ಷಿಕೋತ್ಸವ ಮತ್ತು 10ನೇ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಪೂಜ್ಯರು, ಶಿಕ್ಷಣವು ಕೇವಲ ಅಂಕಗಳಿಕೆಯಲ್ಲ, ಅದು ವ್ಯಕ್ತಿತ್ವ ವಿಕಸನ, ಜ್ಞಾನಾರ್ಜನೆ ಮತ್ತು ಸಮಾಜದ ಉನ್ನತಿಗೆ ಅಡಿಪಾಯ. ನೆಲ್ಸನ್ ಮಂಡೇಲಾ ಅವರ ಪ್ರಕಾರ ಶಿಕ್ಷಣವು ಜಗತ್ತನ್ನು ಬದಲಾಯಿಸಲು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ. ಇದು ಜೀವನದ ಕಹಿ ಬೇರುಗಳನ್ನು ಸಿಹಿಯಾದ ಹಣ್ಣುಗಳಾಗಿ (ಜ್ಞಾನ) ಪರಿವರ್ತಿಸುವ ಪ್ರಕ್ರಿಯೆಯಾಗಿದ್ದು, ಮನುಷ್ಯನ ಆಲೋಚನಾ ಶಕ್ತಿಯನ್ನು ವಿಸ್ತರಿಸುತ್ತದೆ. ಅಂತಹ ಅಧ್ಯಯನದ ಜೊತೆಗೆ ಮಕ್ಕಳು ಸಂಸ್ಕಾರಯುತ ಶಿಕ್ಷಣ ಪಡೆಯುವುದು ತುಂಬಾ ಅವಶ್ಯವಾಗಿದೆ. ಆ ನಿಟ್ಟಿನಲ್ಲಿ ವಿಶ್ವಗುರು ಬಸವಣ್ಣನವರ ಮೂರ್ತಿಯನ್ನು ಶಾಲಾ ಆವರಣದಲ್ಲಿ ಶರಣ ಪ್ರಕಾಶ ಕುದರೆಯವರ ಅಂಗಹಸ್ತದಿಂದ ಅನಾವರಣ ಮಾಡಿದ್ದು ನಮಗೆ ಅತ್ಯಂತ ಸಂತೋಷ ತಂದಿದೆ. ಶತ, ಶತಮಾನಗಳಿಂದ ಜ್ಞಾನದ ಬೆಳಕು ಚಲ್ಲಿದ ಕಾಯಕಯೋಗಿ ಬಸವಣ್ಣನವರ, ಕಾಯಕದ ಮಹತ್ವವನ್ನು ವಿಶ್ವಕ್ಕೆ ಸಾರಿದವರು. ಸಮಾಜಕ್ಕೆ ನಿರಂತರ ಸ್ಫೂರ್ತಿಯಾಗಿದ್ದಾರೆ. ಪ್ರಜಾಪ್ರಭುತ್ವದ ಮೌಲ್ಯ, ಸಮ ಸಮಾಜದ ನಿರ್ಮಾಣ ಮಾಡಿದವರು. ಯುವ ಪೀಳಿಗೆಗೆ ಬಸವಣ್ಣನವರ ಸಿದ್ಧಾಂತಗಳು ದಾರಿದೀಪವಾಗಲಿ ಎಂದು ಆಶೀರ್ವಚನ ನೀಡಿದರು.

ಸಮ್ಮುಖ ವಹಿಸಿದ ಪೂಜ್ಯ ಗುರುಬಸವ ಪಟ್ಟದ್ದೇವರು, ಅಸಮಾನತೆ, ಕಂದಾಚಾರ, ಅಸ್ಪೃಶ್ಯತೆ, ಮೌಢ್ಯತೆ ಇದ್ದ 850 ವರ್ಷಗಳ ಹಿಂದೆ ಬಸವಣ್ಣ ನವರು ಶ್ರೇಣಿರಹಿತ ಸಮ ಸಮಾಜದ ಕನಸು ಕಂಡಿದ್ದರು. ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಬೇಕೆಂದು ಪ್ರತಿಪಾದಿಸಿದ್ದರು. ಸಮ ಸಮಾಜದ ಅವರ ಕನಸನ್ನು ನನಸಾಗಿಸಬೇಕು ಎಂದು ತಿಳಿಸಿದರು.

ಪೂಜ್ಯ ಮಹಾಲಿಂಗ ಮಹಾಸ್ವಾಮಿಗಳು ಮಾತನಾಡಿ, 'ಬಸವಣ್ಣ ಅವರನ್ನು ಒಂದೇ ಸಮಾಜಕ್ಕೆ ಸೀಮಿತ ಮಾಡಬಾರದು. ಸರ್ವ ಸಮುದಾಯದ ನಾಯಕ. ಜ್ಞಾನಿಗಳು, ವಿಜ್ಞಾನಿಗಳು, ಚಿಂತಕರು, ಸಾಹಿತಿಗಳು ಪುಟಗಟ್ಟಲೆ ಹೇಳುವುದನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ನಾಲ್ಕೈದು ಸಾಲಿನಲ್ಲಿ ತಿಳಿಸಿದ ಮಹಾನ್ ಚೇತನರು ಬಸವಣ್ಣನವರು. ಅವರ ಆಶಯದಂತೆ ನಾವೆಲ್ಲರೂ ಸಾಗಬೇಕು. ಶಿಕ್ಷಣ ಪಡೆಯುವುದರ ಜೊತೆಗೆ ಮಕ್ಕಳು ಗುರು–ಹಿರಿಯರನ್ನು ಗೌರಸಬೇಕು ಎಂದು ನುಡಿದರು.

ಸಮಾರಂಭವನ್ನು ಉದ್ಘಾಟನೆ ಮಾಡುವುದರ ಜೊತೆಗೆ ವಿಶ್ವಗುರು ಬಸವಣ್ಣನವರ ಮೂರ್ತಿ ಅನಾವರಣ ಮಾಡಿರುವ ಬಸವಕಲ್ಯಾಣದ ಸಹಾಯಕ ಆಯುಕ್ತರಾದ ಶರಣ ಪ್ರಕಾಶ ಕುದುರೆಯವರು, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಗ್ರಾಮೀಣ ಭಾಗದಲ್ಲಿ ಅನೇಕ ಕಡೆ ಶಾಲೆಗಳನ್ನು ಪ್ರಾರಂಭಿಸಿ ಬಡ ಹಾಗೂ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ರಂಗಗಳಲ್ಲಿ ಪೂಜ್ಯರು ಹಗಲಿರುಳು ದುಡಿಯುತ್ತಿದ್ದಾರೆ. ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಧಾರ್ಮಿಕ ಸಂಸ್ಕಾರ ಕಲಿಯಬೇಕೆಂಬ ಸದುದ್ದೇಶದಿಂದ ಪೂಜ್ಯರು ಶಾಲಾ ಆವರಣದಲ್ಲಿ ಬಸವಣ್ಣನವರ ಮೂರ್ತಿ ಸ್ಥಾಪಿಸಿದ್ದು. ಅದರ ಅನಾವರಣಕ್ಕೆ ನನ್ನ ಆಹ್ವಾನಿಸಿದ್ದು, ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಬಸವಣ್ಣನವರ ಮೂರ್ತಿ ಸ್ಥಾಪನೆ ಆಗಿರುವುದು ಅರ್ಥಪೂರ್ಣವಾಗಿದೆ. ಬಸವಣ್ಣನವರ ಆದರ್ಶಗಳನ್ನು ಸರ್ವರೂ ಅಳವಡಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಪೂಜ್ಯಶ್ರೀ ಮೈತ್ರಾದೇವಿತಾಯಿ, ಪೂಜ್ಯಶ್ರೀ ಡಾ.ಮಹಾದೇವಮ್ಮತಾಯಿ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ, ಸಾಹಿತಿ ಸಂಗಮೇಶ ಎನ್ ಜವಾದಿ ಉಪಸ್ಥಿತರಿದ್ದರು. ಅಧ್ಯಕ್ಷತೆ ಸ್ಥಾನಿಕ ಕಮೀಟಿ ಅಧ್ಯಕ್ಷರಾದ ಮಾಣಿಕರಾವ ಹೌಶೆಟ್ಟಿ ವಹಿಸಿಕೊಂಡಿದ್ದರು.

ಸಮಾರಂಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕು ಯೋಜನಾಧಿಕಾರಿ ವಿರೇಶಪ್ಪ ಎಂ. ಆಡಳಿತಾಧಿಕಾರಿ ಮೋಹನರಡ್ಡಿ, ಅಮೃತಪ್ಪ ದೇವಣಿ, ಗೌರಮ್ಮ ಪೋಲಿಸ್ ಪಾಟೀಲ, ಶಿವಶರಣಪ್ಪ ಪಾಟೀಲ, ಶಂಭುಲಿಂಗ ಪೊಲೀಸ್ ಪಾಟೀಲ, ಪಾಂಡುರಂಗ ಹಿರೇಬೈ ಮುಂತಾದ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಮೋದಿ ವಿರುದ್ಧ ಹರಿಹಾಯ್ದ ಸಾರಿಗೆ ಸಚಿವ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಕೇಂದ್ರದಲ್ಲಿನ ವಿಪಕ್ಷ ನಾಯಕ ರಾಹುಲ್ ಗಾಂಧಿ ಸದಸ್ಯತ್ವರದ್ದು ಕೋರಿ ನಿಲುವಳಿ ಮಂಡನೆ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಹಿಂದೆಯೂ ಈ ರೀತಿ ಮಾಡಿದ್ದರು. ಆಮೇಲೆ ನ್ಯಾಯಲಯದಲ್ಲಿ ಏನಾಯ್ತು ಎಂದು ಎಂದು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಪ್ರಶ್ನಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಎಲ್ಲವನ್ನು ಎಕ್ಸಪೋಸ್ ಮಾಡಿರುವುದರಿಂದ ಬಿಜೆಪಿಯವರಿಗೆ ಹೊಟ್ಟೆ ಸಂಕಟ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಈಗ ಅಮೆರಿಕ ಸುಂಕ ಕಡಿಮೆ ಮಾಡಿದೆ ಎನ್ನೋ ವಿಚಾರಕ್ಕೆ ಉತ್ತಿರಿಸಿದ ಅವರು, ಜಟ್ಟಿ ನೆಲಕ್ಕೆ ಬಿದ್ರು ಮೀಸೆ ಮಣ್ಣಾಗಲಿಲ್ಲ ಅಂದಾಗಾಯ್ತು ಎಂದು ಪರೋಕ್ಷವಾಗಿ ಮೋದಿ ವಿರುದ್ದ ಹರಿಹಾಯ್ದರು.

ಕಾಂಗ್ರೆಸ್ ಶಾಸಕರು ಇಲಾಖೆ ಅಧ್ಯಯನಕ್ಕೆ ಹೋಗಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಮುಖ್ಯಮಂತ್ರಿ ಬದಲಾವಣೆ ಕುರಿತಾಗಿ ಏನಾದರೂ ಇದ್ದರೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನೇ ಕೇಳಿ, ನಾನು ರಾಜಕೀಯ ಮಾತನಾಡೋದಿಲ್ಲ ಎಂದರು.

ಬಿಜೆಪಿ ಶಾಸಕ ಭೈರತಿ ಬಸವರಾಜ ಬಂಧನ ಆಗಲೇಬೇಕಿತ್ತು. ಇಷ್ಟು ದಿನ ಯಾಕೆ ಬಂಧಿಸಿಲ್ಲ ಎಂಬುದನ್ನು ಗೃಹಸಚಿವರಿಗೆ ಕೇಳಬೇಕು ಎಂದರು.

## ಅಭಿವೃದ್ಧಿ ಪರಿಶೀಲಿಸಲು ಕೆರೆಗಳಿಗೆ ಭೇಟಿ



• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ಗ್ರಾಮದಿಂದ ಗ್ರಾಮಕ್ಕೆ ಕೆರೆಯ ಏರಿ ಮೇಲಿನ ರಸ್ತೆ ಸಂಪರ್ಕ, ಕೆರೆಗಳ ಸುರಕ್ಷತೆ, ಅಭಿವೃದ್ಧಿ ಮತ್ತು ಒತ್ತುವರಿ ಬಗ್ಗೆ ಪರಿಶೀಲಿಸಲು ಇಂದು ಅಧಿಕಾರಿಗಳೊಂದಿಗೆ ಶಿವಪುರ ಮತ್ತು ನೆಲಗದರನಹಳ್ಳಿ ಕೆರೆಗೆ ಭೇಟಿ ನೀಡಲಾಗಿದೆ'ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ನೆಲಗದರನಹಳ್ಳಿ ಮತ್ತು ಶಿವಪುರ ಕೆರೆಯ ಅಭಿವೃದ್ಧಿ ಮತ್ತು ಒತ್ತುವರಿ ಪರಿಶೀಲಿಸಿ ಮಾತನಾಡಿದರು.

ಕೆರೆಗಳ ಏರಿಯ ಮೇಲೆ ಗ್ರಾಮದಿಂದ ಗ್ರಾಮಕ್ಕೆ ರಸ್ತೆ ಸಂಪರ್ಕವಿದೆ. ರಸ್ತೆಯನ್ನು ಯಾರಿಗೂ ತೊಂದರೆಯಾಗದಂತೆ ಸುರಕ್ಷಿತ ರಸ್ತೆ ಮತ್ತು ಕೆರೆ ಅಭಿವೃದ್ಧಿಪಡಿಸಲಾಗುತ್ತದೆ' ಎಂದರು.

ಅಧಿಕಾರಿಗಳು ಕೂಡ ಅಭಿವೃದ್ಧಿ ಕಡೆಗೆ ಉತ್ಸುಕರಾಗಿದ್ದಾರೆ. ಆದರೆ ಹಣ ಸಾಕಾಗುತ್ತಿಲ್ಲ ಇನ್ನೂ ಹೆಚ್ಚಿನ ಅನುದಾನ ಸರ್ಕಾರ ನೀಡಲು ಮನವಿ ಮಾಡಲಾಗಿದೆ'ಎಂದು ತಿಳಿಸಿದರು.

ಎಇಇ ವೆಂಕಟೇಶ್, ಎಇ ಪ್ರವೀಣ್, ಆರೋಗ್ಯ ಅಧಿಕಾರಿ ಮಮತಾ, ಬಿಜೆಪಿ ಮುಖಂಡರಾದ ಸಿ.ಎಂ. ನಾಗರಾಜು, ನಿಸರ್ಗ ಕೆಂಪರಾಜು, ಎಂ.ಕೆ. ಜಗದೀಶ್, ವೆಂಕಟೇಶ್ (ವೆಂಕಿ), ಕೌಸಲ್ಯ ಮತ್ತು ಊರಿನ ಗ್ರಾಮಸ್ಥರು, ಸ್ಥಳೀಯರು ಇದ್ದರು.

# ನಿವೇಶನ ಹಂಚಿಕೆಯಲ್ಲಿ ಮೋಸ: ಕ್ರಮಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ



ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಯಲಬುರ್ಗಾದ ಮಲಕ ಸಮುದ್ರ ರಸ್ತೆಗೆ ಇರುವ ಶ್ರೀ ಸಿದ್ದರಾಮಯ್ಯ ನಗರದ ಸರ್ವೇ ನಂಬರ 222 ಮತ್ತು ಸರ್ವೆ ನಂಬರ್ 224 ರಲ್ಲಿ ಹಾಲುಮತ ಸಮಾಜದ ಹೆಸರಿನಲ್ಲಿ ನಿವೇಶನಗಳು ಮಾಯವಾಗಿವೆ, ಭ್ರಷ್ಟಚಾರದಲ್ಲಿ ಭಾಗಿಯಾದ ತಪಿತಸ್ಥರ ಮೇಲೆ ಬೆಂಗಳೂರಿನ ಉಪ ಲೋಕಯುಕ್ತರು ದಾಳಿನಡೆಸಿ ತನಿಖೆಮಾಡಿ ಹಾಲುಮತ ಸಮಾಜದ ಸಂಘ, ಸಂಸ್ಥೆಗಳಿಗೆ ಹಾಗು ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ( ವಾಸುದೇವ ಮೇಟಿ ಬಣದ) ಯಲಬುರ್ಗಾ ತಾಲೂಕಾ ಅದ್ಯಕ್ಷ ಶರಣಬಸಪ್ಪ ದಾನದಕ್ಕೈ ಅವರು ಅಕ್ಟೋಬರ್ .30 ರಂದು ಉಪ ಲೋಕಯುಕ್ತರಿಗೆ ದೂರನ್ನು ಸಲ್ಲಿಸಿದ್ದಾರೆ.

ದೂರಿನಲ್ಲಿ ಹಾಲುಮತ ಸಮಾಜದ ಅಭಿವೃದ್ಧಿಗಾಗಿ ಮತ್ತು ಸಮಾಜದ ಸಂಘ ಸಂಸ್ಥೆಗಳಿಗೆ ನಿವೇಶನಗಳನ್ನು ವಿತರಿಸಿ, ಹಣ ಕೊಟ್ಟಿರುವ ಸದಸ್ಯರಿಗೆ 30 40 ಸೈಜ್ ಪ್ಲಾಟುಗಳನ್ನು ಹಂಚಿಕೆ ಮಾಡಿಕೊಡಬೇಕು ಎಂದು ನಿರ್ಧಾರ ಮಾಡಲಾಗಿತ್ತು, ಸರ್ವೆ ನಂಬರ 222 ರ ರೇವಣೆಪ್ಪ ಹಿರೇಕುರಬರ ಇವರ ಹೊಲವನ್ನು ಶರಣಬಸಪ್ಪ ದಾನಕ್ಕೈ ಇವರಿಂದ ಒಂದು ಲಕ್ಷ ಹಣ ಪಡೆದುಕೊಂಡು 11/09/2001 ರಂದು ವಚನಪತ್ರ ಬರೆಸಿದ್ದಾರೆ , ಆದರೆ ವ್ಯವಹಾರದಲ್ಲಿ ಭಾಗವಹಿಸಿದ ಹನುಮಂತಪ್ಪ ಕೊಂಡಗುರಿ ಶಿಕ್ಷಕರು ಲಿಂಗನಬಂಡಿ ಸಾ/ ಹಿರೇ ಅರಳಿಹಳ್ಳಿ ಇವರು ತಮ್ಮ ಸಹೋದರ ಶರಣಪ್ಪ ಕೊಂಡುಗುರಿ ಸಾ/ ಹಿರೇಅರಳಿಹಳ್ಳಿ ಇವರ ಹೆಸರಿಗೆ 222 ರ ಸರ್ವೇ ನಂಬರ ಭೂಮಿಯನ್ನು 29/05/2001 ರಂದು ರಂದು ನೋಂದಣಿ ಮಾಡಿಸಿಕೊಂಡು ನಿವೇಶನ ವಿತರಣೆ ಮಾಡುವದಾಗಿ ತಿಳಿಸಿದ್ದಾರೆ.

ಮತ್ತು 224 ರ ಸರ್ವೇ ನಂಬರ ಪೂಜಾರಪ್ಪ ಬಂಡಿಹಾಳ ಇವರ ಜಮೀನನ್ನು ಮಲ್ಲಪ್ಪ ಜೋಗಿನ ಇವರಿಗೆ 05/11/1999 ರಂದು ಖರೀದಿ ವಚನ ಪತ್ರ ಬರೆಯಲಾಗಿತ್ತು ಆದರೆ ನೊಂದಣಿ ಕಾರ್ಯಗಳು ಬೇಗನೆ ಅಗಲಿ ಎನ್ನುವ ದೃಷ್ಟಿಯಿಂದ 20/10/2001 ರಂದು ನಯಪೈಸೆ ಕೊಡಲಾರದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ, ಹಾಗು ಇಂದಿನ ಹಾಲಿ ಯಲಬುರ್ಗಾ ತಾಲೂಕು ಬ್ಲಾಕ್ ಕಾಂಗ್ರೆಸ್ ಅದ್ಯಕ್ಷ ಕೆರಿಬಸಪ್ಪ ನಿಡುಗುಂದಿ ಇವರ ಹೆಸರಿಗೆ ಖರಿದಿ ಮಾಡಿ ಎನ್.ಎ ಮಾಡಿಸಿ ಪ್ಲಾಟುಗಳನ್ನು ವಿತರಿಸಬೇಕೆಂದು ಹಾಲುಮತ ಸಮಾಜದ ಹಿರಿಯರು ತೀರ್ಮಾನಿಸಿದ್ದರು ಇದರ ಮುಂದಾಳತ್ವವನ್ನು ಸೋಮಶೇಖರ ಹರ್ತಿ ನಿವೃತ್ತ ಶಿಕ್ಷಕರು ಭಾಗ್ಯನಗರ ಹಾಗು ಮಲ್ಲಪ್ಪ ಜೋಗಿನ ಇವರು ವಹಿಸಿದ್ದರು.

ಸಮಾಜ ದೇಶ ನನಗೆ ಎನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜ ದೇಶಕ್ಕಾಗಿ ನಾನು ಎನು ಕೊಟ್ಟೆ ಎಂಬುದನ್ನು ತಿಳಿಯಾಲಾರದವರು ಇವರು ಸಮಾಜ ಉದ್ದಾರಕರೆ? ಯುವಕರೆ ಜಾಗ್ರತರಾಗಿರಿ ಕಿವಿಯಿದ್ದರು ಕಿವಡರಂತೆ ಅಗಿದೆ ನಮ್ಮ ಸಮಾಜದ ಪರಿಸ್ಥಿತಿ ,ಇನ್ನೂ ಮುಂದೆ ಭ್ರಷ್ಟಚಾರಿಗಳನ್ನು ಇವರನ್ನು ಯಾವದೇ ಸಭೆ ಸಮಾರಂಭಗಳಲ್ಲಿ ಕರೆಯಬೇಡಿ , ಮುಂದಿನ ದಿನಮಾನದಲ್ಲಿ ಇವರಿಗೆ ತಕ್ಕ ಪಾಠವನ್ನು ಕಲಿಸಬೇಕು ಅಂದಾಗ ಇವರು ಜಾಗೃತಿ ಹೊಂದಲು ಸಾಧ್ಯ. ನಿಮ್ಮದು ತಪ್ಪಿಲ್ಲವೆಂದರೆ ಫೆ 15 ರಂದು ಶ್ರೀ ಬೀರಲಿಂಗೇಶ್ವರ ಜಾತ್ರೆಯಲ್ಲಿ ಜರುಗುವ ಬಹಿರಂಗ ಸಭೆಯಲ್ಲಿ ಶಾಂತಿ ರೀತಿಯಿಂದ ಲೇಖ್ಯ ಪತ್ರವನ್ನು ವಿತರಿಸಬೇಕು ಎಂದು ಹಾಲುಮತ ಸಮಾಜದ ಜಿಲ್ಲಾ ಮುಖಂಡ ಶರಣಬಸಪ್ಪ ದಾನಕ್ಕೈ ಅವರು ತಿಳಿಸಿದ್ದಾರೆ.

# ಸಂಬಂಧಗಳು ಪರಸ್ಪರ ಹಿತ ಬಯಸಿ ಸರ್ವತೋಮುಖ ಬೆಳವಣಿಗೆಗೆ ಏಣಿಯಾಗಲಿ



ವೀರಣ್ಣ ಕಲಕೇರಿ ಕೆಂಭಾವಿ

ನಮ್ಮ ಆಂತರಿಕ ನೆಮ್ಮದಿ ಮತ್ತು ತೊಳಲಾಟಗಳಿಗೆ ನಮ್ಮ ಭಾವನೆಗಳೇ ಕಾರಣವೆಂಬುದು ಎಷ್ಟು ಸತ್ಯವೋ, ನಮ್ಮ ಸುತ್ತಲಿರುವ ಸಂಕುಚಿತ ಮನಸ್ಥಿತಿಗಳು ಆ ಶಾಂತಿಯನ್ನು ಕದಡುತ್ತವೆ ಎನ್ನುವುದು ಅಷ್ಟೇ ಕಹಿ ಸತ್ಯ. "ಭಾವ ಶುದ್ಧಿ ಇದ್ದರೆ ಭಾಗ್ಯಕ್ಕೇನು ಕಡಿಮೆ" ಎಂಬ ಜನಪದರ ನುಡಿಗಟ್ಟು ನಮ್ಮ ಬದುಕಿಗೆ ದಾರಿದೀಪ ಎಂದರೂ, ನಾವು ಎಷ್ಟೇ ಶುಚಿಭಾವದಿಂದ, ಸಮಚಿತ್ತದಿಂದ ನಮ್ಮ ಪಾಡಿಗೆ ನಾವು ಸಾಗುತ್ತಿದ್ದರೂ, ಹಲವು ಬಾರಿ ಸಂಕುಚಿತ ಮನಸುಗಳ ವಕ್ರದೃಷ್ಟಿಗೆ ಇಡಾಗಿ ಮನದ ಶಾಂತಿಯನ್ನು ಕದಡುವ ಸನ್ನಿವೇಶಗಳು ಬರುವುದು ಸಹಜ.

ಸಮಾಜವೆಂದ ಮೇಲೆ ವೈವಿಧ್ಯಮಯ ಮನಸುಗಳು ಇದ್ದೇ ಇರುತ್ತವೆ. ಸ್ವಾರ್ಥದ ಗೀಳು, ಸಮಭಾವದ ಕೊರತೆಯ ಅಸಮಂಜಸ ಮನಸುಗಳ ಮಧ್ಯೆ ಇದ್ದು ಎದುರಾಗುವ ಸವಾಲುಗಳನ್ನು ಸ್ವೀಕರಿಸಿ ಬದುಕುವ ಕಲೆ ರೂಢಿಸಿಕೊಳ್ಳಲೇಬೇಕು, ಇದು ಅನಿವಾರ್ಯ ಕೂಡ ಇಲ್ಲವಾದರೆ ಕೆಲವು ಸನ್ನಿವೇಶಗಳು ಬಹಳ ನೋವು ನೀಡುತ್ತವೆ. ವಿಶೇಷವಾಗಿ ಸಂವೇದನಾಶೀಲ (ಖಜಘು–ಙುತಜ) ಮನಸ್ಸಿನವರಿಗೆ ಚೂರು ಕಷ್ಟವಾದರೂ ಹೊಂದಿಕೊಳ್ಳಲು ಪ್ರಯತ್ನಿಸಲೇಬೇಕು. ಸಮಷ್ಟಿ ಭಾವದಿಂದ ಈ ಕಟು ಸತ್ಯಗಳನ್ನು ಸ್ವೀಕರಿಸುವ ಗಟ್ಟಿ ಹೃದಯವನ್ನು ಬೆಳೆಸಿಕೊಳ್ಳಲೇಬೇಕು, ಹಾಗಾಗದಿದ್ದಲ್ಲಿ ಒತ್ತಡಗಳು ಸಂಗಮಗೊಂಡು ವ್ಯಕ್ತಿಯನ್ನು ಮಾನಸಿಕ ವಿಕೃತಿಗೆ ಅಥವಾ ಸ್ವಯಂಕೃತ ಅನಾಹುತಗಳತ್ತ ತಳ್ಳುವ ಅಪಾಯವಿರುತ್ತದೆ.

ಇವತ್ತಿನ ವೇಗದ ಬದುಕಿನಲ್ಲಿ ಸಂಬಂಧಗಳ ಮೌಲ್ಯಗಳು ಗಾಳಿಗೆ ತೂರಿ ಹೋಗುತ್ತಿವೆ. ರಕ್ತ ಸಂಬಂಧಗಳಲ್ಲೇ ನಂಬಿಕೆಯ ಬಿರುಕು ಕಾಣಿಸುತ್ತಿರುವಾಗ, ಹಲವು ಸಂದರ್ಭಗಳಲ್ಲಿ ಇನ್ನುಳಿದ ಸಂಬಂಧಗಳಲ್ಲಿ ವಿಶ್ವಾಸದ ನಿರೀಕ್ಷೆ ಮಾಡುವೂದು ಕಷ್ಟಕರವಾಗಿದೆ. ಪ್ರೀತಿ, ಸ್ನೇಹ ಮತ್ತು ವಿಶ್ವಾಸಗಳು ಸ್ವಾರ್ಥದ ಭರಾಟೆಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಯಾವುದೇ ಒಂದು ಸುಂದರ ಸಂಬಂಧ ಚಿಗುರಲು ಪರಸ್ಪರ ನಂಬಿಕೆ, ಪ್ರೀತಿ ಮತ್ತು ಸಣ್ಣಮಟ್ಟಿನ ತ್ಯಾಗದ ಅಗತ್ಯವಿರಬೇಕು. ಆದರೆ ಇಂದು ಸಮಾಲೋಚನೆಗೆ ಸಮಯವಿಲ್ಲ, ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನವೂ ಇಲ್ಲ. ಸ್ನೇಹ ಸಂಬಂಧಗಳು ಕೂಡ ದೂರಾಲೋಚನೆಯಿಂದ ಸರಿದು ನಿಂತು, ನೆಮ್ಮದಿ ನೀಡುವ ಬದಲು ಸಂಕುಚಿತ ಹಾಗೂ ಸ್ವಾರ್ಥದ ಮಡುವಿನಲ್ಲಿ ಕೂಡಿಕೊಂಡ ಮನಸ್ಥಿತಿಯಿಂದ ಸ್ವಪರ ವಿಶ್ವಾಸಕ್ಕೆ ಧಕ್ಕೆ ತರುತ್ತಿರುವುದು ವಿಷಾದನೀಯ.

ಸ್ವಾರ್ಥದ ಭರಾಟೆಯಲ್ಲಿ ಕಾಲಚಕ್ರ ಉರುಳುತ್ತಲೆ ಇದೆ, ಅದರ ಜೊತೆ ಮನುಷ್ಯನು ಓಡುತ್ತಲೆ ಇದ್ದಾನೆ, ಓಟವೂ ನಿರಂತರವಾಗಿದೆ. ಆದರೆ ಓಟಕ್ಕೆ ಒಂದು ಗುರಿ ಇದೆಯೇ? ಇಲ್ಲವೋ ಅರ್ಥವಾಗದಂತಾಗಿದೆ. ಎಲ್ಲಿಯವರೆಗೆ ಓಡಬೇಕು ಮತ್ತು ಎಲ್ಲಿ ನಿಲ್ಲಬೇಕು ಎಂಬ ಕನಿಷ್ಠ ಪರಿಜ್ಞಾನವೂ ಇಲ್ಲದಂತಾಗಿ ಈ ವೇಗದ ಪ್ರಯಾಣದಲ್ಲಿ ಮೌಲ್ಯಯುತ ಸಂಬಂಧಗಳಿಗೆ ಬರಬಿದ್ದು ಜಗತ್ತು ಯಾಂತ್ರಿಕವಾಗಿ ಚಲಿಸುತ್ತಿದೆ ಎಂಬ ಅರಿವು ಮಾತ್ರ ಎಲ್ಲರಿಗೂ ಇಲ್ಲದಿಲ್ಲ ಎನ್ನಬಹುದು. ಆದರೂ ಇವತ್ತಿನ ಬದಲಾದ ಕಾಲಮಾನದಲ್ಲಿ ಬದಲಾವಣೆಯ ನೆಪದಲ್ಲಿ ಸಂಬಂಧಗಳು ತನ್ನ ಮೌಲ್ಯವನ್ನು ಕಾಪಾಡಿಕೊಂಡು ಹೋಗುತ್ತಿವೆ ಎಂದು ಹೇಳಲಾಗದು.

ಸಂಬಂಧಗಳು ಕೇವಲ ಕ್ಷಣಿಕ ಸಂತೋಷ ನಿಡುವುದಕಲ್ಲ. ಬದಲಾಗಿ ಅವು ಪರಸ್ಪರ ಹಿತ ಬಯಸಿ ಸರ್ವತೋಮುಖ ಬೆಳವಣಿಗೆಗೆ ಏಣಿಯಾಗಬೇಕು. ಬದುಕಿನ ಸಂಧ್ಯಾಕಾಲದಲ್ಲಿ ನಮ್ಮ ಜೊತೆ ನಿಲ್ಲುವುದು ನಾವು ಗಳಿಸಿದ ಆಸ್ತಿಯಲ್ಲ, ಬದಲಾಗಿ ನಾವು ಉಳಿಸಿಕೊಂಡು ಬಂದ ಮೌಲ್ಯಗಳು. ಹಾಗಾಗಿ ವೇಗದ ಓಟದ ನಡುವೆ ಸ್ವಾರ್ಥ ಬಿಟ್ಟು ಆತ್ಮಾವಲೋಕನಕ್ಕಾಗಿ ಚೂರು ಸಮಯ ನೀಡಿ ಮೌಲ್ಯಗಳನ್ನು ಬದುಕಿನ ಭಾಗವಾಗಿಸಿಕೊಳ್ಳೋಣ ನಮ್ಮನ್ನು ನಾವು ಹಿಂತಿರುಗಿ ನೋಡೋಣ ಎಂದು ಹೇಳುತ್ತಾ.. ಈ ಒಂದು ವಚನ

**"ಮಿಥ್ಯದೋಳ್ ಸ್ವತ್ತು ಯಾವುದು**
**ನಿನ್ನ ಕತ್ತಲೋಳ್ ಮತ್ತದೇ ಜಗತ್ತು**
**ತತ್ವವರಿಯದ ಕಾರಣ ಸುತ್ತುತ್ತಿರುವೆ**
**ನಿಜ ಸತ್ವಕ್ಕೆ ತತ್ವವರಿತು ಪಾರುಗಾಣು**
**ಪಾರಮ್ಯ ಪರವಿಲ್ಲ ಸೃಷ್ಟಿಬಲೇಶ"**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)